# ಕನ್ನಡ ಭಾಷಾ ಪತ್ಯ

## ಬಿ.ಎ. ನಾಲ್ಕನೇ ಸೆಮಿಸ್ಟರ್ 2022–2023

ಪ್ರಧಾನ ಸಂಪಾದಕರು

**ಡಾ॥ ಡೊಮಿನಿಕ್**

ಕಾರ್ಯ ನಿರ್ವಾಹಕ ಸಂಪಾದಕರು

**ಡಾ. ಕೆ.ವೈ. ನಾರಾಯಣಸ್ವಾಮಿ**

ಪರಿಶೀಲಕರು

**ಡಾ. ಬೆಳಕೆರೆ ಲಿಂಗರಾಜಯ್ಯ**

ಸಂಪಾದಕರು

**ಡಾ. ಎಂ. ಮಂಜುನಾಥ**

**ಡಾ. ಎನ್. ಉಷಾಕುಮಾರಿ**

**ಉಮಾ ಬಿ.ಎಂ.**

## ಭಾಗ–1

# ಸ್ನೇಹ – ಗೆಳೆತನ

1. ಗೆಳೆತನ : ಚೆನ್ನವೀರಕಣವಿ
2. ಕಾಬೂಲಿವಾಲಾ : ಮೂಲ : ರಬಿಂದ್ರನಾಥ್ ಟ್ಯಾಗೋರ್
   ಅನುವಾದ : ಎಚ್.ಆರ್. ಚಂದ್ರವದನರಾವ್
3. ಇಬ್ಬರು ಸ್ನೇಹಿತರು : ಸಂ. ಹ.ಕ. ರಾಜೇಗೌಡ
4. ಓದು ಪಠ್ಯ
   ಕರಗುವ ಕನಸುಗಳು : ನೇಮಿಚಂದ್ರ

## ಆಶಯ

ಇಂದು ಇಡೀ ಜಗತ್ತು ಭಯ, ಆತಂಕ, ಭಯೋತ್ಪಾದನೆಯ ಕರಿನೆರಳಿಗೆ ಸಿಲುಕಿ ನರಳುತ್ತಿದೆ. ವಿಶ್ವವನ್ನೆಲ್ಲ ಒಗ್ಗೂಡಿಸಲು ಇರುವ ಏಕಮಾತ್ರ ಸಾಧನ ಸ್ನೇಹ ಸಂಬಂಧಗಳು ಮಾತ್ರ. ಗೆಳೆತನವು ಪ್ರತಿಯೊಬ್ಬ ಮಾನವನ ಹೃದಯದ ಮಿಡಿತವಾಗಿದೆ. ಜನ್ಮನೀಡಿದ ತಂದೆ–ತಾಯಿಯನ್ನು ಮೀರಿಸಿದ ಬಾಂಧವ್ಯ ಗೆಳೆತನದ್ದು, ಇದಕ್ಕೆ ಪುರಾಣ ಇತಿಹಾಸಗಳ ಹಿನ್ನೆಲೆಯಿದೆ. ಕೃಷ್ಣ–ಸುಧಾಮ, ಕರ್ಣ–ದರ್ಯೋಧನ, ಚಂದನದಾಸ–ಅಮಾತ್ಯ ರಾಕ್ಷಸರವರ ನಿದರ್ಶನಗಳು ಪುರಾಣ ಇತಿಹಾಸದ್ದು ಹಾಗೂ ವೈಯಕ್ತಿಕ ಬದುಕಿನ ಪ್ರತಿಬಿಂಬಗಳಾಗಿವೆ. ಗೆಳೆತನಕ್ಕೆ ಮೇಲು–ಕೀಳುಗಳಾಗಲಿ, ಹೆಣ್ಣು ಗಂಡೆಂಬ ತಾರತಮ್ಯವಾಗಲಿ ಇಲ್ಲ. ಸ್ನೇಹ–ಬಾಂಧವ್ಯಗಳು ವೈಯಕ್ತಿಕ ನೆಲೆಗಟ್ಟನ್ನು ಮೀರಿ ವಿಶ್ವವನ್ನೇ ಒಗ್ಗೂಡಿಸಲು ಏಕಮಂತ್ರವಾಗಿದೆ.

# 1. ಗೆಳತನ

– ಚನ್ನವೀರ ಕಣವಿ

ಗೆಳೆತನದ ಸುವಿಶಾಲ ಆಲದಡಿ ಪಸರಿಸಿಹ
ತಣ್ಣೆಳಲ ತಂಪಿನಲಿ ತಂಗಿರುವೆನು;
ಜೀವನದನಂತ ದುರ್ಭರ ಬವಣೆ ನೋವುಗಳ
ಕಾವುಗಳ ಮೌನದಲಿ ನುಂಗಿರುವೆನು.
ಗೆಳೆತನವೆ ಇಹಲೋಕಕಿರುವ ಅಮೃತ
ಅದನುಳಿದರೇನಿಹುದು – ಜೀವನ್ಮೃತ !

ನಲ್ಲನಲ್ಲೆಯರೊಲವು, ಬಂಧುಬಳಗದ ಬಲವು
ತನ್ನಿಚ್ಛೆ ಪೂರೈಸುವವರ ಛಲವು
ಎಳ್ಳಿನೇಳನಿತಾದರೂ ಸ್ವಾರ್ಥ ಹೊಂದಿಹವು
ಎತ್ತಿ ಕಟ್ಟುವರದಕೆ ಮಮತೆ–ತೊಡವು
ಗಳೆತನದ ಒಳತಿರುಳ ಬಲ್ಲ ಧರ್ಮಿ
ಕೇಳು: ನಿಜ ಗೆಳೆಯ ನಿಷ್ಕಾಮಕರ್ಮಿ!

ಇಲ್ಲಿ ವಂಚನೆಯಿಲ್ಲ, ಚಂಚಲತೆಯಿನಿತಿಲ್ಲ
ಮೇಲು ಕೀಳುಗಳೆಂಬ ಭೇದವಿಲ್ಲ
ಅಹಮಿಕೆಯ ನೆವಮಿಲ್ಲ, ದ್ವೇಷ ಗುಣಮಣಮಿಲ್ಲ
ಸಣ್ಣತನ ಸಂಕೋಚ ಮೊದಲಿಗಿಲ್ಲ.
ಮನವು ಬಾನಗಲ, ಎದೆ ತಿಳಿಗೊಳಲು
ಭಾವ ಶುದ್ದ ಸ್ಫಟಿಕ – ಬೆಳದಿಂಗಳು!

ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು
ಇಲ್ಲೆಂಬ ಗಾದ ನುಡಿ ಕೇಳಿರುವನು,
ಗೆಳೆತನದ ಶುಚಿ ರುಚಿಯು ಇದಕು ಮಿಗಿಲಾಗಿಹುದು
ಎಂಬ ಸಾಹಸ ಮಾಡೆ ದೋಷವೇನು?
ಕಂಡಕಂಡವರೇನು ಬಲ್ಲರಿದನು
ಉಂಡವನು ಕಂಡಿಹನು ಇದರ ಹದನು.

ಹೇಗೊ ಹೇಗೋ ಹೆಗಲುಗೊಟ್ಟು ಬಂದಿಹ ಕೂರ್ಪು
ಆಗು ಹೋಗುಗಳಿಂಗೆ ಬಾಗದಂತೆ,
ಸುಖಕೆ ಸಂತಸಬಟ್ಟು, ದು:ಖದಲಿ ಸಹಭಾಗಿ–
ಯಾಗೆ ಜೀವನ ರಸದ ಪಾಕದಂತೆ
ಸರಸ ವಿರಸವನೆಲ್ಲ ಅಪ್ಪು ಕಯ್ದು
ಬಾಳುವರು ಗಂಧದೊಲು ಜೀವ ತೆಯ್ದು !

ಬಾಳ ಪಾರಾವಾರದಲ್ಲಿ ಸಾರಾಸಾರ
ಸುವಿಚಾರ ದೋಣಿಯಲಿ ಯಾನಗೈದು
ತತ್ತ್ವನಿವಹದ ದ್ವೀಪ–ದೀಪಮಾಲೆಗಳಂತೆ
ಕೆಳೆಯರೊಲವಿನ ಬೆಳಕು ಸೂರೆಗೈದು
ಸೂಳ್ನುಡಿಯ ಸ್ಯೆಪಿನಲಿ ಕರುಣೆಯೆರೆದು
ಹಿತವ ಕೋರುವರಂತರಂಗ ತೆರೆದು.

ಇನಿವಿರಿದು ಗೆಳೆತನದ ಗುಟ್ಟಿಹುದು ನಲ್ ಗೆಳೆಯ
ಬಿನ್ನಣದ ನುಡಿಯಲ್ಲ, ಎದೆಯ ಮೀಟಿ
ಜೀವ ಜೀವಕೆ ಇಂಬುಕಯ್ವವರು ನಾಲ್ವರಿರೆ
ಚತುರಂಗ ಬಲವಿದಕೆ ಯಾವ ಸಾಟಿ?
ಗೆಳತನವೆ ಚಿರಬಾಳ ಸಂಜೀವಿನಿ
ವಿಶ್ವದಂತಃಕರಣ ಮಂದಾಕಿನಿ!

ಮೆಲುಪು ತಣ್ಣಿನ ಕಂಪು ಮಲ್ಲಿಗೆಯ ಮೆಲ್ಲದೆಗೆ
ಒಲವು ರೇಶಿಮೆಯೆಳೆಯ ಪೋಣಿಸಿಹೆವು
ಎನ್ನಿನಿಯ ಗೆಳೆಯರೆದೆ ಶೂನ್ಯ ಸಿಂಹಾಸನದಿ
ಬೆರಸಿ ಬೇರಿಲ್ಲದಿಹುದೊಂದೆ ಸೊಗವು–
ಹಿಂದುಮುಂದಿನ ಎಣಿಕೆ ಬೇರೆ ಇರಲಿ
ಇಂದಿಗಿದೆ ಸಿದ್ಧಾಂತ ಜೀವನದಲಿ.

# 2. ಕಾಬೂಲಿವಾಲಾ

**ಮೂಲ : ರಬೀಂದ್ರನಾಥ್ ಟ್ಯಾಗೋರ್**
**ಅನು : ಎಚ್.ಆರ್. ಚಂದ್ರವದನರಾವ್**

ನನ್ನ ಐದು ವರ್ಷದ ಮಗಳು ಮಿನಿ ಯಾವಾಗಲೂ ವಟಗುಟ್ಟುತ್ತಲೇ ಇರುತ್ತಾಳೆ. ಮಾತನಾಡದೆ ಒಂದು ನಿಮಿಷ ಕೂಡ ಅವಳ ಕಾಲ ವ್ಯಯ ಮಾಡಿಲ್ಲ ಎಂದು ನನ್ನ ಭಾವನೆ, ಕೋಪಗೊಂಡು ಅವಳ ತಾಯಿ ಅವಳ ಬಾಯಿ ಮುಚ್ಚಿಸಿದರೆ, ನಾನು ಹಾಗೆ ಮಾಡುವುದಿಲ್ಲ. ಮಿನಿ ಮೌನವಾಗಿರುವುದು, ಎಂದರೆ ಅದು ಅಸ್ವಾಭಾವಿಕ, ಅದನ್ನು ನಾನು ಸಹಿಸಲಾರೆ.

ಒಂದು ಪ್ರಾತಃಕಾಲ ನಾನು ನನ್ನ ಕೆಲಸ ಕಾದಂಬರಿಯ ಹದಿನೇಳನೆಯ ಅಧ್ಯಾಯ ಬರೆಯುತ್ತಿದ್ದೆ. ಮಿನಿ ಕಳ್ಳತನದಿಂದ ನನ್ನ ಕೊಠಡಿಗೆ ನುಗ್ಗಿ ನನ್ನ ಕೈ ಹಿಡಿದು, 'ಅಪ್ಪ, ಬಾಗಿಲು ಕಾಯುವ ರಾಮ್‌ದಯಾಳ್' 'ಕಾಗೆ'ಯನ್ನು 'ಖಾಗೆ' ಎನ್ನುತ್ತಾನೆ, ಅವನಿಗೆ ಏನೂ ಗೊತ್ತಿಲ್ಲ, ಅಲ್ವೇ?' ಎಂದಳು.

ನಾನು ಭಾಷೆಯಲ್ಲಿರುವ ವ್ಯತ್ಯಾಸ ತಿಳಿಸಲು ಹೊರಟಾಗ ಅವಳು ಬೇರೊಂದು ಪ್ರಶ್ನೆಗೆ ಹಾರಿದಳು – 'ಭೋಲಾ ಹೇಳ್ತಾನೆ, ಮೋಡದಲ್ಲಿ ಆನೆ ಇದೆಯಂತೆ, ಅದು ಸೊಂಡಲಿನಿಂದ ನೀರನ್ನು ಊದುತ್ತದೆಯಂತೆ, ಅದೇ ಮಳೆಯಂತೆ, ಹೌದೇ?'

ಅವಳ ಈ ಪ್ರಶ್ನೆಗೆ ಉತ್ತರ ಸಿದ್ಧ ಮಾಡಿಕೊಳ್ಳುವುದರೊಳಗೆ ಅವಳಿಂದ ಇನ್ನೊಂದು ಪ್ರಶ್ನೆ ಬಾಣದಂತೆ ಬಂತು – 'ಅಪ್ಪ, ಅಮ್ಮನಿಗೂ ನಿನಗೂ ಏನು ಸಂಬಂಧ?

ನಾನು 'ಮಿನಿ, ನನಗೆ ತುಂಬ ಕೆಲಸವಿದೆ ಭೋಲಾ ಜೊತೆ ಹೋಗಿ ಆಡು' ಎಂದ ಮುಖದಲ್ಲಿ ಗಂಭೀರತೆ ತಂದುಕೊಂಡು.

ನನ್ನ ಕೊಠಡಿಯಲ್ಲಿದ್ದ ಕಿಟಕಿಯಿಂದ ಹೊರಗಿನ ರಸ್ತೆ ಕಾಣಿಸುತ್ತಿತ್ತು. ನನ್ನ ಪಾದಗಳ ಬಳಿ ಮೇಜಿನ ಕೆಳಗೆ ಮಿನಿ ತನ್ನ ಮೊಣಕಾಲುಗಳನ್ನು ಮೆದುವಾಗಿ ತಟ್ಟುಗೊಳ್ಳುತ್ತಾ ಆಡುತ್ತಿದ್ದಳು. ನಾನು ನನ್ನ ಕಾದಂಬರಿಯ ಹದಿನೇಳನೆಯ ಅಧ್ಯಾಯ ಬರೆಯುತ್ತಿದ್ದೆ. ಕಾದಂಬರಿಯ ನಾಯಕ ಪ್ರತಾಪ್‌ಸಿಂಗ್ ನಾಯಕಿಯನ್ನು ಬಾಹುಗಳಿಂದ ಹಿಡಿದಿಕೊಂಡು ಕೋಟೆ ಮನೆಯ ಮೂರನೆಯ ಅಂತಸ್ತಿನಲ್ಲಿರುವ ಕಿಟಕಿಯ ಮೂಲಕ ತಪ್ಪಿಸಿಕೊಂಡು ಹೋಗಬೇಕು, ಅಷ್ಟರಲ್ಲಿ ಮಿನಿ ಕಿಟಕಿಯ ಬಳಿಗೆ ಕಾಬೂಲಿವಾಲಾ' ಎಂದು ಕೂಗುತ್ತಾ ಓಡಿದಳು, ನಿಜ ಕೆಳಗೆ ರಸ್ತೆಯಲ್ಲಿ ಕಾಬೂಲಿವಾಲಾ ನಿಧಾನವಾಗಿ ಹೋಗುತ್ತಿದ್ದ. ತನ್ನ ಜನರಂತೆ ಅವನು ದೊಗಲೆ ಬಟ್ಟೆ ತೊಟ್ಟಿದ್ದ – ಉದ್ದನೆಯ ಪೇಟ, ಬೆನ್ನಿನ ಮೇಲೆ ಒಂದು ಚೀಲ, ಕೈಯಲ್ಲಿ ಒಣ ದ್ರಾಕ್ಷಿ ಪೆಟ್ಟಿಗೆ, ಅವನ ದೊಗಲೆ ಬಟ್ಟೆ ಕೊಳಲಾಗಿತ್ತು.

ಅವನನ್ನು ಕಂಡು ಮಿನಿಯ ಮನಸ್ಸಿನಲ್ಲಾದ ಭಾವನೆಯನ್ನು ನಾನು ಹೇಳಲಾರೆ, ಅವನನ್ನು ಅವಳು ಗಟ್ಟಿಯಾಗಿ ಕೂಗಿದಳು. 'ಅವನು ಬರುತ್ತಾನೆ, ನನ್ನ ಹದಿನೇಳನೆಯ ಅಧ್ಯಾಯ ಪೂರೈಸುವುದಿಲ್ಲ' ಎಂದು ಕೊಳ್ಳುತ್ತಿದ್ದಂತೆ, ಕಾಲಿವಾಲಾ ತಿರುಗಿ ಮಿನಿಯನ್ನು ನೋಡಿದ. ಅವನನ್ನು ಕಂಡ, ದಿಗಿಲುಗೊಂಡು ಮಿನಿ ಮನೆಯೊಳಗೆ ದೌಡಾಯಿಸಿದಳು. ಅವಳು ದೊಡ್ಡ ಚೀಲದಲ್ಲಿ ಅವಳಂತಹ ಇಬ್ಬರು ಮೂವರು ಮಕ್ಕಳಿರುತ್ತಾರೆ ಎಂಬ ಕುರುಡು ನಂಬಿಕೆ. ಅವಳಿಗೆ. ಕಾಬೂಲಿಮಾಲಾ ನಗುತ್ತಾ ಹೊಸ್ತಿಲವರೆಗೆ ಬಂದ.

ನನ್ನ ನಾಯಕ ನಾಯಕಿಯರ ಪಾಡು ಅಪಾಯಕ್ಕೀಡಾಗಿತ್ತು. ಅವನನ್ನು ಕರೆದುದರಿಂದ, ಬರೆಯುವುದನ್ನು ನಿಲ್ಲಿಸಿ, ಅವನಿಂದ ಏನಾದರೂ ಕೊಳ್ಳಬೇಕೆಂದೆನಿಸಿತು. ಹಾಗೆಯೇ ಮಾಡಿದೆ. ನಂತರ ನಾನು ಅಬ್ದುಲ್ ರಹಮಾನ್, ರಷ್ಯಾದವರು, ಇಂಗ್ಲಿಷರು, ಗಡಿನಾಡಿನ ನೀತಿ ಇವುಗಳ ಬಗ್ಗೆ ಸ್ವಲ್ಪ ಹೊತ್ತು ಮಾತನಾಡಿದೆವು.

ಅವನು ಹೊರಡುವಾಗ, 'ಆ ಪುಟ್ಟ ಹುಡುಗಿ ಎಲ್ಲಿ, ಸ್ವಾಮಿ?' ಎಂದು ಕೇಳಿದ. ಮಿನಿಗೆ ಅವನ ಬಗ್ಗೆ ಇದ್ದ ಭಯ ಹೋಗಲಿ ಎಂದು ಅವಳು ಈಚೆ ಬರುವಂತೆ ಮಾಡಿದೆ.

ಕಾಬೂಲಿವಾಲಾನನ್ನು ಮತ್ತು ಅವನ ಚೀಲವನ್ನು ನೋಡುತ್ತಾ ಅವಳು ನನ್ನ ಕುರ್ಚಿಯ ಪಕ್ಕ ನಿಂತುಕೊಂಡಳು. ಅವನು ಅವಳಿಗೆ ಒಣ ದ್ರಾಕ್ಷಿಯನ್ನು, ಬಾದಾಮಿಯನ್ನು ಕೊಡಲು ಕೈ ನೀಡಿದ. ಆದರೆ 'ಲಂಚ' ಕೊಟ್ಟು ಮಿನಿಯನ್ನು ಬಲೆಗೆ ಹಾಕಿಕೊಳ್ಳಲು ಸಾಧ್ಯವಿಲ್ಲ. ಅನುಮಾನ ಜಾಸ್ತಿಯಾಗಿ ಅವಳು ಕುರ್ಚಿಗೆ ಅಂಟಿಕೊಂಡಳು.

ಇದೇ ಅವರ ಮೊದಲ ಭೇಟಿ.

ಈ ಭೇಟಿ ನಡೆದು ತುಂಬ ದಿನಗಳೇನು ಆಗಿರಲಿಲ್ಲ. ಒಂದು ದಿನ ಬೆಳಗ್ಗೆ ಮಿನಿ ಮನೆಯ ಬಾಗಿಲ ಬಳಿ ಇದ್ದ ಬೆಂಚಿನ ಮೇಲೆ ಕುಳಿತಿದ್ದಳು. ಭಾರಿ ದೇಹದ ಕಾಬೂಲಿವಾಲಾ ಅವಳ ಪಾದಗಳ ಬಳಿ ಕುಳಿತಿದ್ದ. ಇಬ್ಬರೂ ನಗುತ್ತಾ ಹರಟೆ ಕೊಚ್ಚುತ್ತಿದ್ದರು. ಇದನ್ನು ಕಂಡು ನನಗೆ ಆಶ್ಚರ್ಯವಾಯಿತು. ಮಿನಿಗೆ ಅವಳ ಜೀವನದಲ್ಲಿ ನನ್ನನ್ನು ಬಿಟ್ಟು ತಾಳ್ಮೆಯಿಂದ ಅವಳು ಹೇಳುವುದನ್ನು ಕೇಳುವವರು ಇದುವರೆಗೆ ಯಾರೂ ಸಿಕ್ಕಿರಲಿಲ್ಲ. ಅಷ್ಟರಲ್ಲಿ ಅವಳ ದಾವಣಿಯ ತುದಿಯ ಗಂಟಿನಲ್ಲಿ ಅವನು ಕೊಟ್ಟ ಬಾದಾಮಿ ದ್ರಾಕ್ಷಿ ಇತ್ತು.

'ಅವನ್ನೆಲ್ಲಾ ಏಕೆ ಕೊಟ್ಟೆ?' ಎನ್ನುತ್ತಾ ಎಂಟಾಣೆ ಬಿಲ್ಲೆಯನ್ನು ತೆಗೆದು ಕಾಬೂಲಿವಾಲಾನ ಕೈಯಲ್ಲಿಟ್ಟೆ. ಅವನು ಯಾವ ಲಜ್ಜೆಯನ್ನು ತೋರ್ಪಡಿಸದೆ ಅದನ್ನು ತನ್ನ ಜೇಬಿಗೆ ಇಳಿಬಿಟ್ಟ.

ಒಂದು ಗಂಟೆ ನಂತರ ನಾನು ವಾಪಸ್ಸು ಮನೆಗೆ ಬಂದಾಗ ಆ ನತದೃಷ್ಟ, ನಾಣ್ಯ ತನ್ನ ಬೆಲೆಯ ಎರಡರಷ್ಟು ತೊಂದರೆಯನ್ನು ಉಂಟು ಮಾಡಿದ್ದು ಗೊತ್ತಾಯಿತು. ಕಾಬೂಲಿವಾಲಾ ಅದನ್ನು ಮಿನಿಗೆ

ಕೊಟ್ಟು ಹೋಗಿದ್ದ. ಮಿನಿಯ ತಾಯಿ ಮಿನಿಯ ಕೈಯಲ್ಲಿ ನಾಣ್ಯ ಇರುವುದನ್ನು ಕಂಡು 'ಆ ಎಂಟಾಣೆ ನಾಣ್ಯ ನಿನಗೆ ಹೇಗೆ ಬಂತು?' ಎಂದು ಕೇಳಿದಳು. ಸಂತೋಷದಿಂದ ಮಿನಿ, 'ಕಾಬೂಲಿವಾಲಾ ಕೊಟ್ಟ' ಎಂದಳು.

ತಳಮಳಗೊಂಡ ಅವಳ ತಾಯಿ, 'ಕಾಬೂಲಿವಾಲಾ ಕೊಟ್ಟ'. ಮಿನಿ, ಹೇಗಾದರೂ ಅವನು ಕೊಟ್ಟ ಹಣವನ್ನು ತೆಗೆದುಕೊಂಡೆ ಎಂದು ಕಿರಿಚಿದಳು. ಅಷ್ಟರಲ್ಲಿ ಅಲ್ಲಿಗೆ ಬಂದ ನಾನು ಮುಂದೆ ಸಂಭವಿಸಬಹುದಾದ ಅನಾಹುತವನ್ನು ತಪ್ಪಿಸುವುದಕ್ಕೆ ಮುಂದಾದೆ.

ಅವರಿಬ್ಬರೂ ಭೇಟಿಯಾಗಿದ್ದು ಅದು ಮೊದಲನೆ ಅಥವಾ ಎರಡನೆ ಸಲವಲ್ಲ ಮಿನಿಯಲ್ಲಿದ್ದ ಹೆದರಿಕೆಯನ್ನು ದ್ರಾಕ್ಷಿ ಬಾದಾಮಿಯ ವಿಮರ್ಶಾತ್ಮಕ ಲಂಚದಿಂದ ಕಾಬೂಲಿವಾಲಾ ನಿವಾರಿಸಿದ್ದ. ಈಗ ಅವರಿಬ್ಬರು ಒಳ್ಳೆಯ ಗೆಳೆಯರು.

ಅವರು ಆಗಾಗ ಮಾತನಾಡುತ್ತಾ ತಮಾಷೆ ಮಾಡುತ್ತಾ ಕುಳಿತಿರುತ್ತಿದ್ದರು. ಎತ್ತರದ ಸ್ಥಳದಲ್ಲಿ ಕುಳಿತ ಮಿನಿ ಕೆಳಗೆ ಕುಳಿತ ಭಾರಿ ದೇಹದ ಕಾಬೂಲಿವಾಲಾನನ್ನು ನಗುತ್ತಾ 'ಕಾಬೂಲಿವಾಲಾ, ಕಾಲೂಲಿವಾಲಾ, ನಿನ್ನ ಚೀಲದಲ್ಲಿ ಏನಿದೆ?' ಎಂದು ಕೇಳುತ್ತಿದ್ದಳು. ಬೆಟ್ಟಗಾಡಿನ ಜನ ಮೂಗಿನಿಂದ ಉಚ್ಚರಿಸುವ ರೀತಿಯಲ್ಲಿ ಕಾಬೂಲಿವಾಲಾ ಹೇಳುತ್ತಿದ್ದ 'ಒಂದು ಆನೆ', ಆದೇನೂ ನಗಿಸುವ ಉತ್ತರವಿಲ್ಲದಿರಬಹುದು. ಆದರೆ ಅವರಿಬ್ಬರಿಗೂ ಅದು ಚತುರೋಕ್ತಿ ಎಂದೆನಿಸಿ ಸಂತಸದಿಂದ ನಗುತ್ತಿದ್ದರು. ಚಿಕ್ಕ ಮಗು ದೊಡ್ಡವನ ಜೊತೆ ಮಾತನಾಡುತ್ತಾ ಇರುವುದನ್ನು ಕಂಡು ನನಗೆ ವಿಸ್ಮಯ.

ಮಾತಿನಲ್ಲಿ ಹಿಂದೆ ಬೀಳಬಾರದೆಂದು ಕಾಬೂಲಿವಾಲಾ ಅವಳನ್ನು, ಮರಿ, ನೀನು ಯಾವಾಗ ಮಾವನ ಮನೆಗೆ ಹೋಗ್ತಿಯಾ?' ಎಂದು ಕೇಳುತ್ತಿದ್ದ.

ಬಂಗಾಳಿ ಹುಡುಗಿಯರಿಗೆ ಇನ್ನು ಚಿಕ್ಕವರಾಗಿದ್ದಾಗಲೇ ಮಾವನ ಮನೆ ಎಂದರೆ ಯಾವುದು ಎಂದು ಗೊತ್ತಿರುತ್ತದೆ. ಆದರೆ ಸ್ವಲ್ಪ ಆಧುನಿಕರೆಂದೆನಿಸಿಕೊಂಡ ನಾವು ಚಿಕ್ಕ ಹುಡುಗಿಗೆ ಇದನ್ನು ತಿಳಿಸಿರಲಿಲ್ಲ. ಆದುದರಿಂದ ಕಾಬೂಲಿವಾಲಾನ ಪ್ರಶ್ನೆ ಮಿನಿಗೆ ಆಶ್ಚರ್ಯ ಉಂಟು ಮಾಡುತ್ತಿತ್ತು. ಆದರೆ ಅದನ್ನು ತೋರಿಸಿಕೊಳ್ಳದೆ ಬುದ್ಧಿವಂತಿಕೆಯಿಂದ 'ನೀನೂ ಹೋಗ್ತಿಯಾ?' ಎಂದು ಕೇಳುತ್ತಿದ್ದಳು.

ಕಾಬೂಲಿವಾಲಾನಂತಹವರು 'ಮಾವನ ಮನೆ' ಎಂದರೆ 'ಜೈಲು' ಎಂತಲೂ ಅರ್ಥೈಸುತ್ತಾರೆ. 'ಜೈಲು' ಅನ್ನುವುದಕ್ಕೆ ಸೌಮ್ಯಪದ 'ಮಾವನ ಮನೆ' – ಖರ್ಚಿಲ್ಲದೆ ಊಟ ಉಪಚಾರ ಸಿಗುವ ಸ್ಥಳ. ಈ ಅರ್ಥದಲ್ಲಿ ಆ ಬಲಾಢ್ಯ ಹಣ್ಣು ವ್ಯಾಪಾರಿ ನನ್ನ ಮಗಳ ಪ್ರಶ್ನೆಯನ್ನು ತೆಗೆದುಕೊಡು, 'ನಾನು ನನ್ನ ಮಾವನನ್ನು ತದಕುತ್ತೇನೆ' ಎಂದು ಮುಷ್ಟಿ ಎತ್ತಿ ಅಲ್ಲಿಲ್ಲದ ಪೋಲೀಸಿನವನನ್ನು ಹೊಡೆಯುವಂತೆ ನಟಿಸುತ್ತಿದ್ದ. ಇದನ್ನು ನೋಡಿ ಮಿನಿ ನಗುವಿನ ಹೊಳೆಯನ್ನೇ ಹರಿಸುತ್ತಿದ್ದಳು. ಅವಳ ನಗುವಿನೊಡನೆ

ಕಾಬೂಲಿವಾಲಾ ತನ್ನ ನಗುವನ್ನು ಸೇರಿಸುತ್ತಿದ್ದ.

ಶರತ್ಕಾಲದ ದಿನಗಳು. ಹಿಂದಿನ ಕಾಲದಲ್ಲಿ ರಾಜರು ದಿಗ್ವಿಜಯಕ್ಕೆ ಹೋಗುತ್ತಿದ್ದ ಕಾಲ. ನಾನು ಕಲ್ಕತ್ತಾದ ಒಂದು ಮೂಲೆಯ ಮನೆಯಲ್ಲಿ ಕುಳಿತು ಪ್ರಪಂಚವನ್ನು ಮನಸ್ಸಿನಲ್ಲೇ ಸುತ್ತು ಹಾಕುತ್ತಿದ್ದೆ. ಹೊರ ದೇಶದ ಹೆಸರು ಕೇಳಿದೊಡನೆ ನನ್ನ ಹೃದಯ ಆ ನಾಡಿಗೆ ಹೋಗುತ್ತಿತ್ತು. ರಸ್ತೆಯಲ್ಲಿ ಯಾರಾದರೂ ವಿದೇಶಿಯರು ಕಂಡಾಗ ನನಗೆ ಅವರ ದೇಶದಲ್ಲಿರುವ ನದಿಗಳು, ಪರ್ವತಗಳು, ಕಣಿವೆಗಳು ನನಗೆ ಕಾಣಿಸಿಕೊಳ್ಳುತ್ತವೆ. ಕಾಬೂಲಿವಾಲಾನನ್ನು ಕಂಡಾಗ ನಾನು ಪರ್ವತಮಯ ದೇಶ, ಅದರಲ್ಲಿರುವ ಅವನ ಮನೆ, ಅವನ ಸ್ವತಂತ್ರ ಜೀವನ – ಇವುಗಳ ಬಗ್ಗೆ ಕನಸು ಕಾಣುತ್ತೇನೆ. ನಿಶ್ಚಲ ಜೀವನ ನಡೆಸುತ್ತಾ, ಪ್ರವಾಸವೆಂದರೆ ಸಿಡಿಲು ಹೊಡೆದಂತೆ ಎಂದು ಬಗೆಯುವ ನನಗೆ ಪ್ರವಾಸದ ದೃಶ್ಯಗಳು ಒಳಗಣ್ಣಿಗೆ ಆಗಾಗ್ಗೆ ಸ್ಪಷ್ಟವಾಗಿ ಕಾಣಿಸುತ್ತವೆ. ಕಾಬೂಲಿವಾಲಾನ ಸಾಮಿಪ್ಯ ನನ್ನನ್ನು ಪರ್ವತಗಳ ಬುಡಕ್ಕೆ ಕರೆದೊಯ್ಯುತ್ತದೆ. ಸಾಮಾನುಗಳನ್ನು ಹೇರಿರುವ ಒಂಟೆಗಳ ಸಾಲು, ಪೇಟಧಾರಿ ವರ್ತಕರು ವಿಚಿತ್ರವಾದ ಹಳೆಯ ಕಾಲದ ಬಂದೂಕವನ್ನೋ ಅಥವಾ ಈಟಿಯನ್ನೋ ಹಿಡಿದುಕೊಂಡು ಬಯಲು ಪ್ರದೇಶಕ್ಕೆ ಇಳಿದು ಬರುತ್ತಿರುವುದು ನನಗೆ ಗೋಚರವಾಗುತ್ತದೆ, ಹೀಗೆ ನಾನು ಭಾವನಾ ಪ್ರಪಂಚದಲ್ಲಿದ್ದಾಗ ಮಿನಿತಾಯಿ ನನ್ನಲ್ಲಿಗೆ ಬಂದು, 'ಅವನ ಬಗ್ಗೆ ಹುಷಾಗಿರಿ' ಎಂದು ಮೊರೆ ಇಡುತ್ತಾಳೆ.

ಮಿನಿ ತಾಯಿ ಅಂಜುಕುಳಿ, ರಸ್ತೆಯಲ್ಲಿ ಏನಾದರೂ ಗದ್ದಲವಾದಾಗ ಅಥವಾ ನಮ್ಮ ಮನೆ ಕಡೆ ಜನರ ಗುಂಪು ಬರುತ್ತಿರುವುದನ್ನು ಕಂಡಾಗ ಹೆದರಿ ಬರುತ್ತಿರುವವರು ಠಕ್ಕರು, ಕುಡುಕರು ಎಂದು ತೀರ್ಮಾನಕ್ಕೆ ಬರುತ್ತಾಳೆ. ಹಾವು, ಮಲೇರಿಯಾ, ಕಂಬಳಿ ಹುಳು, ಜಿರಲೆ ಇವುಗಳೆಂದರೆ ಅವಳಿಗೆ ಭಯ, ಇಷ್ಟು ವರ್ಷಗಳ ಅನುಭವವಿದ್ದರೂ ಅವಳಿಗೆ ಹೆದರಿಕೆ ಹೋಗಿಲ್ಲ. ಕಾಬೂಲಿವಾಲಾನ ಬಗ್ಗೆ ಅವಳಿಗೆ ತುಂಬ ಅನುಮಾನ, ಅವನ ಮೇಲೆ ಒಂದು ಕಣ್ಣಿಟ್ಟಿರಿ ಎಂದು ಅವಳು ನನಗೆ ಹೇಳುತ್ತಲೇ ಇರುತ್ತಾಳೆ. ಅವಳು ಹೆದರುವುದನ್ನು ಕಂಡು ನನಗೆ ನಗು. ಕೂಡಲೇ ಅವಳ ಗಂಭೀರ ಧ್ವನಿಯಲ್ಲಿ ಕೇಳುತ್ತಾಳೆ –

'ಮಕ್ಕಳ ಅಪಹರಣ ಆಗಿಲ್ಲವೇ?'

'ಕಾಬೂಲಿನಲ್ಲಿ ಗುಲಾಮಗಿರಿ ಇರುವುದು ಸುಳ್ಳೇ?"

'ಆ ಧಡಿಯ ಸಣ್ಣ ಹುಡುಗಿಯನ್ನು ಎತ್ತಿಕೊಂಡು ಹೋಗುವುದು ಅಸಾಧ್ಯವೇ?' 'ನೀನು ಹೇಳುವುದು ಅಸಾಧ್ಯವಿಲ್ಲದಿರಬಹುದು, ಆದರೆ ಅಸಂಭವ' ಎಂದು ನಾನು ಹೇಳಿದರೂ ಅವಳಿಗೆ ಅವನ ಬಗ್ಗೆ ಭೀತಿ ಹೋಗುವುದಿಲ್ಲ. ಅವನನ್ನು ಮನೆಗೆ ಸೇರಿಸದೆ ಇರುವುದು ಸರಿಯಲ್ಲ ಎಂದು ನನಗೆ ಅನಿಸಿತ್ತು. ಹೀಗಾಗಿ ಅವರ ಸ್ನೇಹ ಅಡೆತಡೆ ಇಲ್ಲದೆ ಮುಂದುವರೆದಿತ್ತು.

ಪ್ರತಿವರ್ಷ ಜನವರಿ ಮಧ್ಯ ಭಾಗದಲ್ಲಿ ಕಾಬೂಲಿವಾಲಾ – ರಹಮಾನ್ – ತನ್ನ ದೇಶಕ್ಕೆ ಹೋಗಿ

ಬರುವ ಪರಿಪಾಟ ಇಟ್ಟುಕೊಂಡಿದ್ದ. ಹೋಗುವುದಕ್ಕೆ ಮುಂಚೆ ಅವನು ಮನೆ ಮನೆಗೆ ಹೋಗಿ ಅವರು ಕೊಡಬೇಕಾದ ಹಣವನ್ನು (ದ್ರಾಕ್ಷಿ ಬಾದಾಮಿ ಇತ್ಯಾದಿಯನ್ನು ಸಾಲವಾಗಿ ಪಡೆದದ್ದು) ಪಡೆದುಕೊಳ್ಳುತ್ತಿದ್ದ. ಈ ವರ್ಷ ಅವನಿಗೆ ಕೈ ತುಂಬ ಕೆಲಸ. ಹಾಗಿದ್ದರೂ ವೇಳೆ ಮಾಡಿಕೊಂಡು ಮಿನಿಯನ್ನು ನೋಡಲು ನಿತ್ಯವೂ ಬರುತ್ತಿದ್ದ – ಬೆಳಗ್ಗೆ ಸಾಧ್ಯವಾಗದಿದ್ದರೆ ಸಂಜೆ. ಹೊರಗಿನವರಿಗೆ ಇವರಿಬ್ಬರು ಏನೋ ಪಿತೂರಿ ನಡೆಸುತ್ತಿದ್ದಾರೆ ಎಂದೆನಿಸುತ್ತಿತ್ತು. ಕತ್ತಲೆಯ ಕೋಣೆಯ ಒಂದು ಮೂಲೆಯಲ್ಲಿ ಅವರಿಬ್ಬರು ನಗುನಗುತ್ತಾ ತಮಾಷೆ ಮಾಡುತ್ತಾ, ಮಾತನಾಡುತ್ತಿರುವುದನ್ನು ಕಂಡಾಗ ನನಗೆ ಏನೋ ಸಮಾಧಾನ.

ಅವನು ಸ್ವದೇಶಕ್ಕೆ ಪ್ರಯಾಣ ಮಾಡುವ ಕೆಲವು ದಿನಗಳ ಮುಂಚೆ ಒಂದು ಪ್ರಾತಃ ಕಾಲ ನಾನು ಓದುವ ಕೋಣೆಯಲ್ಲಿ ಅಚ್ಚಾಗಿದ್ದ ಪುಟಗಳಲ್ಲಿರುವ ತಪ್ಪುಗಳನ್ನು ನೋಡುತ್ತಾ ಕುಳಿತಿದ್ದೆ, ಚಳಿಗಾಲ, ಕಿಟಕಿಯಿಂದ ಬರುತ್ತಿದ್ದ ಸೂರ್ಯರಶ್ಮಿ ಕಾಲಿನ ಮೇಲೆ ಬಿದ್ದು ಹಾಯೆನಿಸುತ್ತಿತ್ತು. ಆಗ ಸುಮಾರು ಎಂಟು ಗಂಟೆ, ರಸ್ತೆಯಲ್ಲಿ ಓಡಾಡುವ ಜನ ತಲೆಗೆ ಬಟ್ಟೆ ಕಟ್ಟಿಕೊಂಡು ಹೋಗುತ್ತಿದ್ದರು. ಇದ್ದಕ್ಕಿದ್ದ ಹಾಗೆ ರಸ್ತೆಯಲ್ಲಿ ಗದ್ದಲ, ಕಿಟಕಿ ಮೂಲಕ ನೋಡಿದೆ, ರಹಮಾನನನ್ನು ಇಬ್ಬರು ಪೊಲೀಸ್ ಪ್ಯಾದೆಗಳು ಹಿಡಿದುಕೊಂಡು ಬರುತ್ತಿದ್ದರು. ಅವರ ಹಿಂದೆ ಹುಡುಗರ ಗುಂಪು, ಕಾಬೂಲಿವಾಲಾನ ಬಟ್ಟೆಯ ಮೇಲೆ ರಕ್ತದ ಕಲೆಗಳು, ಒಬ್ಬ ಪೊಲೀಸ್ ಪ್ಯಾದೆ ರಕ್ತ ಸಿಕ್ತ ಚೂರಿಯನ್ನು ಕೈಯಲ್ಲಿ ಹಿಡಿದುಕೊಂಡಿದ್ದ. ನಾನು ತರಾತುರಿಯಲ್ಲಿ ಹೊರಗೆ ಹೋಗಿ ಏನಾಗಿದೆ ಎಂದು ಅಲ್ಲಿದ್ದವರನ್ನು ವಿಚಾರಿಸಿದೆ, ಭಾಗಶ: ಇನ್ನೊಬ್ಬರಿಂದ ಗೊತ್ತಾದ ವಿಷಯವೆಂದರೆ ಒಬ್ಬ ರಾಮಪುರಿ ಶಾಲನ್ನು ಸಾಲ ಹೇಳಿ ತಿರುಗು ವ್ಯಾಪಾರಿ (ಕಾಬೂಲಿವಾಲಾನಿಂದ)ಯಿಂದ ಕೊಂಡಿದ್ದ, ಹಣ ಕೇಳಿದಾಗ ತಾನು ಶಾಲನ್ನು ಕೊಂಡೇ ಇರಲಿಲ್ಲ ಎಂದು ಸುಳ್ಳು ಹೇಳಿದ. ಇಬ್ಬರಿಗೂ ಮಾತು ಬೆಳೆಯಿತು. ಕೋಪದಿಂದ ರಹಮಾನ್ ಅವನನ್ನು ಚೂರಿಯಿಂದ ಚುಚ್ಚಿದ. ಉದ್ರೇಕಗೊಂಡಿದ್ದ ಅವನು ತನ್ನ ಶತ್ರುವನ್ನು ಮನ ಬಂದಂತೆ ಬೈಯುತ್ತಿದ್ದ. ನಮ್ಮ ಮನೆ ಬಳಿ ಬಂದಾಗ ಮಿನಿ ಎಂದಿನಂತೆ, 'ಕಾಬೂಲಿವಾಲಾ, ಕಾಬುಲಿವಾಲಾ' ಎಂದು ಕೂಗುತ್ತಾ ಹೋದಳು. ಅವಳನ್ನು ಕಂಡ ರಹಮಾನನ ಮುಖ ಅರಳಿತು. ಇಂದು ಅವನ ಬೆನ್ನಿನ ಮೇಲೆ ಚೀಲವಿರಲಿಲ್ಲ. ಆದುದರಿಂದ ಅವಳು 'ಆನೆ' ಬಗ್ಗೆ ಅವನನ್ನು ಪ್ರಶ್ನೆ ಮಾಡುವಂತಿಲ್ಲ. ಅವಳು ಮುಂದಿನ ಪ್ರಶ್ನೆಗೆ ಹಾರಿದಳು. 'ಕಾಬೂಲಿವಾಲಾ, ಮಾವನ ಮನೆಗೆ ಹೋಗ್ತಿಯಾ?' 'ಹೌದು, ಮರಿ. ಅಲ್ಲಿಗೆ ಹೋಗ್ತಾ ಇರೋದು', ಎಂದ ಕಾಬೂಲಿನಾಲಾ, ಅವಳು ನಗಲಿಲ್ಲ. ಆದುದರಿಂದ ಅವನು ಕೋಳ ಹಾಕಿದ್ದ ಕೈಗಳನ್ನು ಎತ್ತಿ, ನಾನು ಮಾವನನ್ನು ತದಕುತ್ತಿದ್ದೆ, ಆದರೆ ನನ್ನ ಕೈಗಳನ್ನು ಕಟ್ಟಿ ಹಾಕಿದ್ದಾರೆ' ಎಂದ.

ಕೊಲೆ ಮಾಡಲು ಯತ್ನಿಸಿದ ಎಂಬ ಆಪಾದನೆ ಮೇಲೆ ರಹಮಾನನಿಗ ಕೆಲವು ವರ್ಷಗಳ ಜೈಲು ಶಿಕ್ಷೆಯಾಯಿತು.

ಕಾಲ ಕಳೆದಂತೆ ಅವನು ನಮ್ಮ ಮನಸ್ಸಿನಿಂದ ಮರೆಯಾದ. ಗೊತ್ತಾದ ಜಾಗದಲ್ಲಿ ಗೊತ್ತಾದ ಕೆಲಸ

ನಮ್ಮದು. ಪರ್ವತಗಳ ನಾಡಿನಿಂದ ವ್ಯಾಪಾರಕ್ಕೆ ಬಂದ ಒಬ್ಬ ಜೈಲಿನಲ್ಲಿ ಕೊಳೆಯುತ್ತಿರುವುದು ನಮ್ಮ ಅರಿವಿಗೆ ಬರಲೇ ಇಲ್ಲ. ಹೇಳಲು ನಾಚಿಕೆಯಾಗುತ್ತದೆ – ಮಿನಿ ಕೂಡ ತನ್ನ ಗೆಳೆಯನನ್ನು ಮರೆತಳು. ಅವಳಿಗೆ ಹೊಸ ಸ್ನೇಹಿತರು ಸಿಕ್ಕಿದರು. ವಯಸ್ಸಾದಂತೆ ಅವಳು ಹೆಚ್ಚು ಹೆಚ್ಚು ಕಾಲವನ್ನು ಹುಡುಗಿರ ಜೊತೆ ಕಳೆಯಲು ಆರಂಭಿಸಿದಳು. ಅವಳಿಗೆ ಅಪ್ಪನ ಕೊಠಡಿಗೆ ಬರಲು ಈಗ ಪುರಸೊತ್ತಿಲ್ಲ. ನಾನು ಅವಳೊಡನೆ ಮಾತನಾಡುತ್ತಿದ್ದುದು ಅಪರೂಪ.

ವರ್ಷಗಳ ಉರುಳಿದವು. ಪನಃ ಶರತ್ಕಾಲ. ನಾವು ಮನಿಯ ಮದುವೆ ಏರ್ಪಾಡು ಮಾಡುತ್ತಿದ್ದವು. ಮದುವೆ 'ಪೂಜಾ' ರಜಾದಲ್ಲಿ ಎಂದು ತೀರ್ಮಾನಿಸಿದೆವು. ಈಗ ದುರ್ಗಿ ತೌರು ಮನೆಗೆ ಹಿಂದಿರುಗುವ ಕಾಲ, ಆ ಸಮಯದಲ್ಲಿ ನಮ್ಮ ಮನೆ, ಬೆಳಕು, ಮಗಳು ಮಿನಿ ಗಂಡನ ಮನೆಗೆ ಹೋಗುತ್ತಾಳೆ.

ಪ್ರಕಾಶಮಾನವಾಗಿದ್ದ ಪ್ರಾತಃಕಾಲ, ಮಳೆಯಿಂದ ಗಾಳಿ ಶುಚಿಗೊಂಡಿತ್ತು. ಸೂರ್ಯರಶ್ಮಿ ಅಪ್ಪಟ ಚಿನ್ನದಂತೆ ಹೊಳೆಯುತ್ತಿತ್ತು. ಕಲ್ಕತ್ತಾದ ಓಣಿಯಲ್ಲಿ ಮನೆಯ ಗೋಡೆಯ ಮೇಲೆ ಬಿದ್ದ ಬೆಳಕು ಪ್ರಜ್ವಲಿಸುತ್ತಿತ್ತು. ಸೂರ್ಯೋದಯಕ್ಕೆ ಮುಂಚಿನಿಂದಲೂ ಮನೆಯಲ್ಲಿ ಮದುವೆಯ ಮಂಗಳ ವಾದ್ಯದ ಶಬ್ದ ಅದರೊಡನೆ ನಮ್ಮ ಹೃದಯವೂ ಬಡಿದುಕೊಳ್ಳುತ್ತಿತ್ತು. ಅಗಲಿಕೆ ಹತ್ತಿರವಾದಂತೆ, ಭೈರವಿ ರಾಗ, ನನ್ನ ನೋವನ್ನು ತೀವ್ರಗೊಳಿಸಿತು. ನನ್ನ ಮಿನಿಯ ಮದುವೆಯ ಆ ರಾತ್ರಿ ಬೆಳಗಿನಿಂದಲೂ ಮನೆಯಲ್ಲಿ ಗದ್ದಲ, ಗಡಿಬಿಡಿ. ಅಂಗಳದಲ್ಲಿ ಮೇಲ್ಚಪ್ಪರ, ಕೊಠಡಿಗಳಲ್ಲಿ ಗಣ ಗಣ ಶಬ್ದ ಮಾಡುವ ತೂಗುದೀಪ ಹಾಕಿಸಬೇಕು. ಗಡಿಬಿಡಿ ಮತ್ತು ತವಕಕ್ಕೆ ಕೊನೆ ಇರಲಿಲ್ಲ.

ನಾನು ಓದುವ ಕೋಣೆಯಲ್ಲಿ ಕುಳಿತು ಹಣದ ಲೆಕ್ಕಾಚಾರ ಮಾಡುತ್ತಿದ್ದ. ಅಷ್ಟರಲ್ಲಿ ನನ್ನ ಮುಂದೆ ಒಬ್ಬ ಬಂದು ನಮ್ರತೆಯಿಂದ ನಮಸ್ಕಾರ, ಮಾಡಿದ. ಕತ್ತೆತ್ತಿ ನೋಡಿದೆ. ಬಂದವನು ಕಾಬೂಲಿವಾಲಾ, ತಕ್ಷಣವೇ ನನಗೆ ಅವನ ಗುರುತು ಸಿಕ್ಕಲಿಲ್ಲ. ಅವನ ಬೆನ್ನಿನ ಮೇಲೆ ಚೀಲವಿರಲಿಲ್ಲ, ತಲೆಯಲ್ಲಿ ಉದ್ದನೆಯ ಕೂದಲಿಲ್ಲ, ದೇಹದ ಬಲವೂ ಕುಗ್ಗಿ ಹೋಗಿದೆ. ಅವನು ನಕ್ಕ ಕೂಡಲೇ ಅವನು ಯಾರೆಂದು ಹೊಳೆಯಿತು.

'ಯಾವಾಗ ಬಂದೆ, ರಹಮಾನ್?' ಎಂದು ನಾನು ಕೇಳಿದೆ.

'ನಿನ್ನೆ ಸಂಜೆ ನನ್ನನ್ನು ಜೈಲಿನಿಂದ ಬಿಡುಗಡೆ ಮಾಡಿದರು?'

ಅವನು ಹೇಳಿದ್ದು ನನಗೆ ಕರ್ಣ ಕಠೋರವಾಗಿತ್ತು. ಇನ್ನೊಬ್ಬನನ್ನು ಚೂರಿ ಚುಚ್ಚಿ ಗಾಯಗೊಳಿಸಿದ ಯಾರನ್ನೂ ನಾನು ಹಿಂದೆ ಮಾತನಾಡಿಸಿರಲಿಲ್ಲ. ಅವನು ಕಾಣಿಸಿಕೊಂಡದ್ದು ಅಪಶಕುನ ಎಂದುಕೊಂಡೆ. ನನ್ನ ಹೃದಯ ಕುಗ್ಗಿ ಹೋಯಿತು. 'ಮನೆಯಲ್ಲಿ ಶುಭ ಕಾರ್ಯ ನಡೆಯುತ್ತಿದೆ. ನನಗೆ ತುಂಬ ಕೆಲಸ, ಬಿಡುವಿಲ್ಲ. ಇನ್ನೊಂದು ದಿನ ಬಂದರೆ ಆಗುತ್ತದೆ' ಎಂದೆ.

ರಹಮಾನ್ ತಕ್ಷಣವೇ ಹಿಂದಿರುಗಿ ಹೊರಟ. ಬಾಗಿಲ ಸಮೀಪಕ್ಕೆ ಬಂದಾಗ, ಅನುಮಾನಿಸಿ,

‘ಪುಟ್ಟಿಯನ್ನು ಕ್ಷಣಕಾಲವಾದರೂ ನೋಡಲು ಸಾಧ್ಯವೇ?’ ಎಂದು ಕೇಳಿದ. ಮಿನಿ ಮೊದಲಿದ್ದ ಹಾಗೆಯೇ ಇರುತ್ತಾಳೆಂದು ನಂಬಿದ್ದ. ‘ಕಾಬೂಲಿವಾಲಾ, ಕಾಬೂಲಿವಾಲಾ’ ಎಂದು ಕೂಗುತ್ತಾ ತನ್ನಡೆಗೆ ಬರುತ್ತಾಳೆಂದು ಮನಸ್ಸಿನಲ್ಲಿ ಚಿತ್ರಿಸಿ ಕೊಂಡಿದ್ದ. ಹಿಂದಿನ ದಿನಗಳನ್ನು ಜ್ಞಾಪಿಸಿಕೊಂಡು ದ್ರಾಕ್ಷಿಯನ್ನು ತನ್ನ ದೇಶದವನಿಂದ ಪಡೆದುಕೊಂಡು ಕಾಗದದಲ್ಲಿ ಕಟ್ಟಿಕೊಂಡು ತಂದಿದ್ದ.

‘ಮನೆಯಲ್ಲಿ ಶುಭಕಾರ್ಯವಾಗುತ್ತಿದೆ. ಆದುದರಿಂದ ನೀನು ಯಾರನ್ನೂ ನೋಡಲು ಈಗ ಸಾಧ್ಯವಾಗದು’ ಎಂದು ನಾನು ಪುನಃ ಹೇಳಿದೆ.

ನನ್ನ ಮಾತಿನಿಂದ ಅವನಿಗೆ ನಿರುತ್ಸಾಹ. ನನ್ನನ್ನು ಕ್ಷಣ ಕಾಲ ಆಶಾಭಾವನೆಯಿಂದ ನೋಡಿ, ‘ನಮಸ್ಕಾರ’ ಎಂದು ಹೇಳಿ ಹೊರಟ.

ನನಗೆ ಅವನನ್ನು ಕರೆಯುವ ಮನಸ್ಸಾಯಿತು. ಅಷ್ಟರಲ್ಲಿ ಅವನೇ ಹಿಂದಿರುಗಿದ. ತನ್ನ ಕೈಯಲ್ಲಿದ್ದ ಪೊಟ್ಟಣವನ್ನು ನನಗೆ ಕೊಡುತ್ತಾ, ‘ದಯವಿಟ್ಟು ಇದನ್ನು ಮಗುವಿಗೆ ಕೊಡುತ್ತೀರಾ?’ ಎಂದು ಬಿನ್ನವಿಸಿಕೊಂಡ.

ಅವನು ಕೊಟ್ಟದ್ದನ್ನು ತೆಗೆದುಕೊಂಡು ಹಣ ಕೊಡಲು ಹೋದೆ. ನನ್ನ ಕೈ ಹಿಡಿದು, ‘ನೀವು ತುಂಬ ದಯಾಳು. ಆದರೆ ದಯಮಾಡಿ ನಾನು ತಂದಿರುವ ಹಣ್ಣಿಗೆ ಹಣ ನೀಡಬೇಡಿ. ನಿಮ್ಮ ಮಗಳಂತೆ, ನನಗೂ ಮಗಳೊಬ್ಬಳಿದ್ದಾಳೆ. ಮನೆಯಲ್ಲಿರುವ ಅವಳನ್ನು ಜ್ಞಾಪಿಸಿಕೊಂಡು ನಿಮ್ಮ ಮಗಳಿಗೆ ದ್ರಾಕ್ಷಿ ತಂದ. ಮಾರಿ ಲಾಭ ಮಾಡಿಕೊಳ್ಳುವುದಕ್ಕಲ್ಲ ಎಂದು ಹೇಳುತ್ತಾ ಅವನು ತನ್ನ ಅಳಕವಾದ ಅಂಗಿಯ ಜೇಬಿಗೆ ಕೈ ಹಾಕಿ ಕೊಳೆಯಾದ ಒಂದು ಚೂರು ಕಾಗದ ತೆಗೆದು, ಅದರ ಮಡಿಕೆಯನ್ನು ಬಿಡಿಸಿ ಹರಡಿ ಸುಕ್ಕು ಹೋಗುವಂತೆ ಸವರಿದ, ಅದರಲ್ಲಿ ಮಗುವಿನ ಹಸ್ತದ ಗುರುತಿತ್ತು. ಅದು ಚಿತ್ರವಲ್ಲ, ಭಾವ ಚಿತ್ರವಲ್ಲ, ಹಸ್ತಕ್ಕೆ ಮಸಿ ಬಳೆದು ಅದನ್ನು ಒತ್ತಿದ ಕಾಗದ, ಅದನ್ನು ಅವನು ಯಾವಾಗಲೂ ಅಂಗಿಯ ಎದೆಯ ಮೇಲಿದ್ದ ಜೇಬಿನಲ್ಲಿ ಇಟ್ಟುಕೊಳ್ಳುತ್ತಿದ್ದ. ಅದು ಅವನ ಮಗಳ ಹಸ್ತದ ಗುರುತು!

ನನ್ನ ಕಣ್ಣುಗಳಲ್ಲಿ ನೀರೂರಿತು, ಅವನೊಬ್ಬ ಕಾಬೂಲಿನಿಂದ ಬಂದ ಹಣ್ಣು ಮಾರುವ ವ್ಯಾಪಾರಿ, ಆದರೆ ನಾನು... ಈ ವ್ಯತ್ಯಾಸವನ್ನು ಮರೆತೆ. ಅವನಿಗಿಂತ ನಾನು ಹೇಗೆ ಭಿನ್ನ? ಅವನೂ ನನ್ನ ಹಾಗೆ ಒಬ್ಬ ತಂದೆ.

ಅವನ ಪುಟ್ಟ ಮಗಳು ಪರ್ಬತಿಯ ಹಸ್ತದ ಗುರುತಿರುವ ಕಾಗದ ನನಗೂ ನನ್ನ ಮಗಳನ್ನು ಜ್ಞಾಪಿಸಿಕೊಳ್ಳುವಂತೆ ಮಾಡಿತು.

ಒಳಗಿದ್ದ ಮಿನಿಗೆ ಈಚೆ ಬರುವಂತೆ ಹೇಳಿ ಕಳುಹಿಸಿದೆ. ಅವಳು ಹೊರಬರಲು ನಾನಾ ಆಡಚಣೆಗಳಿದ್ದವು. ಅವುಗಳಿಗೆ ನಾನು ಮಣಿಯಲಿಲ್ಲ. ಮದುವೆಯ ಕೆಂಪು ರೇಷ್ಮೆಸೀರೆ ಇಟ್ಟು ಹಣೆಗೆ

ಚಂದನ ಹಚ್ಚಿಕೊಂಡು ಮದುಮಗಳು ಮಿನಿ ನಾಚುತ್ತಾ ನನ್ನ ಬಳಿ ಬಂದು ನಿಂತಳು. ಅತಿಮಾನವ ವ್ಯಕ್ತಿಯನ್ನು ಕಂಡಾಗ ಆಗುವಂತೆ ಕಾಬೂಲಿವಾಲಾ ದಿಗ್ಭ್ರಮೆಗೊಂಡ. ಅವನಿಗೆ ಅವಳೊಡನೆ ಹಳೆಯ ಗೆಳೆತನವನ್ನು ಪುನರ್ ಸ್ಥಾಪಿಸುವುದಕ್ಕೆ ಆಗಲಿಲ್ಲ. ಕ್ಷಣಕಾಲ ಬಿಟ್ಟು ನಗುತ್ತಾ, 'ಪುಟ್ಟಿ, ಏನು ಮಾವನ ಮನೆಗೆ ಹೊರಟೆಯಾ?' ಎಂದ.

ಈಗ ಮಿನಿಗೆ 'ಮಾವ' ಎಂಬ ಪದದ ಅರ್ಥ ಗೊತ್ತಾಗಿತ್ತು. ಪ್ರಶ್ನೆ ಕೇಳಿ ಅವಳ ಮುಖ ಕೆಂಪಾಯಿತು.

ಅವಳು ಅವನ ಪ್ರಶ್ನೆಗೆ ಉತ್ತರ ಕೊಡಲಾರದೆ ಹೋದಳು. ಅವನ ಮುಂದೆ ಸುಮ್ಮನೆ ತಲೆ ತಗ್ಗಿಸಿ ನಿಂತಳು.

ಕಾಬೂಲಿವಾಲಾ ಮತ್ತು ಮಿನಿ ಮೊದಲನೆ ಸಲ ಭೇಟಿಯಾದದ್ದು ನನಗೆ ಜ್ಞಾಪಕಕ್ಕೆ ಬಂದು ಈಗ ನನಗೆ ವಿಷಾದವಾಯಿತು.

ಅವಳು ಒಳಗೆ ಹೋದ ಮೇಲೆ ರಹಮಾನ್ ದೊಡ್ಡ ನಿಟ್ಟುಸಿರು ಬಿಟ್ಟು ನೆಲದ ಮೇಲೆ ಕುಳಿತುಕೊಂಡ. ತನ್ನ ಮಗಳೂ ಈಗ ಬೆಳೆದು ದೊಡ್ಡವಳಾಗಿದ್ದಾಳೆ ಎಂಬ ಭಾವನೆ ಅವನಿಗೆ ಇದ್ದಕ್ಕಿದ್ದ ಹಾಗೆ ಹೊಳೆಯಿತು. ಈಗ ಮಗಳೊಡನೆ ಹೊಸದಾಗಿ ಸ್ನೇಹ ಬೆಳಸಬೇಕು. ಅವಳು ಹಿಂದೆ ಇದ್ದ ಹಾಗೆ ಈಗ ಖಂಡಿತವಾಗಿಯೂ ಇರುವುದಿಲ್ಲ. ಕಳೆದ ಎಂಟು ವರ್ಷಗಳಲ್ಲಿ ಏನಾಗಿದಿಯೋ?

ಮನೆಯಲ್ಲಿ ವಾದ್ಯಗಳ ಮಂಗಳ ಧ್ವನಿ ಪ್ರಸರಿಸಿತು. ಶರತ್ಕಾಲದ ಸೂರ್ಯನ ಸುಖೋಷ್ಣ ಕಿರಣ ಎಲ್ಲೆಡೆ ಹರಡಿತು. ರಹಮಾನ್ ಕಲ್ಕತ್ತಾದ ಒಂದು ಗಲ್ಲಿಯಲ್ಲಿರುವ ಮನೆಯಲ್ಲಿ ಕುಳಿತು ಆಫ್ಘಾನಿಸ್ಥಾನದ ಬರಡು ಬೆಟ್ಟಗಳನ್ನು ನೋಡುತ್ತಿದ್ದ.

'ರಹಮಾನ್, ನಿನ್ನ ದೇಶಕ್ಕೆ ವಾಪಸ್ಸಾಗು. ಮನೆಗೆ ಹೋಗಿ ಮಗಳನ್ನು ನೋಡು. ನಿನಗಾಗುವ ಆನಂದದಿಂದ ನನ್ನ ಮಗಳ ಅದೃಷ್ಟ ಕುಲಾಯಿಸುತ್ತದೆ' ಎನ್ನುತ್ತಾ ಅವನ ಕೈಗೆ ಬಂದು ಬ್ಯಾಂಕ್ ನೋಟ್ ಕೊಟ್ಟೆ.

ಹೀಗೆ ಮಾಡಿದ್ದರಿಂದ ಮದುವೆಯ ಕೆಲವು ಬಾಬತುಗಳನ್ನು ಜೋತಾ ಮಾಡಬೇಕಾಗಿ ಬಂತು. ವಿದ್ಯುದ್ದೀಪ, ಮಿಲಿಟರಿ ಬ್ಯಾಂಡ್ ಇವು ಇಲ್ಲವಾದವು. ಇದರಿಂದಾಗಿ ಮನೆಯ ಹೆಂಗಸರಿಗೆ ನಿರಾಶೆ. ಆದರೆ ನಾನು ಕೊಟ್ಟ ಹಣದಿಂದ ದೂರ ದೇಶದಲ್ಲಿರುವ ಒಬ್ಬ ತಂದೆ ಬಹು ವರ್ಷಗಳ ನಂತರ ಸ್ವದೇಶಕ್ಕೆ ಹೋಗಿ ಅವಳನ್ನು ಭೇಟಿಯಾಗುತ್ತಾನೆ. ಇದನ್ನು ನೆನೆಸಿಕೊಂಡಾಗ ನನಗೆ ನನ್ನ ಮಗಳ ವಿವಾಹ ಇನ್ನು ಹೆಚ್ಚು ಕಳೆಗಟ್ಟುತ್ತದೆ ಎನಿಸಿತು.

**ಆಕರ :** ಸುಪ್ರಸಿದ್ಧ ಕಥೆಗಳು

**ಎಚ್.ಆರ್. ಚಂದ್ರವದನರಾವ್**

# 3. ಇಬ್ಬರು ಸ್ನೇಹಿತರು

– ಸಂ.: ಹ.ಕ.ರಾಜೇಗೌಡ

ಮೊಗುಣಿ ಮತ್ತು ಗೋಕುಲಿ ಬಹಳ ಸ್ನೇಹಿತರಾಗಿದ್ದರು. ಅವರು ಯಾವಾಗಲೂ ಒಬ್ಬರನ್ನೊಬ್ಬರು ಬಿಟ್ಟಿರುತ್ತಿರಲಿಲ್ಲ. ಮೋಗುಣಿಯ ತಂದೆ ನೇಯ್ಗೆಯವರು, ಗೋಕುಲಿಯು ಬಡಗಿ, ಅವರಿಬ್ಬರೂ ಅಕ್ಕಪಕ್ಕದ ಮನೆಗಳಲ್ಲಿ ವಾಸಮಾಡುತ್ತಿದ್ದುದರಿಂದ ಅವರಿಬ್ಬರೂ ಸ್ವಾಭಾವಿಕವಾಗಿಯೆ ಸ್ನೇಹಿತರಾದರು. ಅವರು ಒಟ್ಟಿಗೇ ಅಲೆಯುವರು, ಒಟ್ಟಿಗೆ ಆಡವಾಡುವವರು, ಒಮ್ಮೊಮ್ಮೆ ಒಟ್ಟಿಗೇ ಮೀನು ಹಿಡಿಯಲು ಹೋಗುವರು, ಕಾಲಕಳೆದಂತೆ ಅವರು ಮಾಡುತ್ತಿದ್ದ ಪ್ರಿಯವಾದ ಕೆಲಸವೆಂದು ಅವರಿವರ ತೋಟಗಳಲ್ಲಿ ಹಣ್ಣು ಕದಿಯುವುದು, ಏನೇ ಇರಲಿ, ಅವರಿಬ್ಬರ ಮಧ್ಯ ಉಂಟಾಗಿದ್ದ ಸ್ನೇಹದ ಗಂಟು ತುಂಟತನಕ್ಕಾಗಿ ಉಂಟಾಗಿದ್ದರೇ ಹೊರತು, ಪ್ರೀತಿಯಿಂದುಂಟಾದುದಲ್ಲ.

ಆ ಹುಡುಗರಿಬ್ಬರೂ ಶಾಲೆಗೆ ಹೋಗುವ ವಯಸ್ಸು ಬಂದಕೂಡಲೇ ಅವರ ತಂದೆ ತಾಯಿಗಳು ಅವರನ್ನು ಹಳ್ಳಿಯ ಶಾಲೆಗೆ ಕಳುಹಿಸಿದರು. ತಮ್ಮ ಮಕ್ಕಳು ಇನ್ನು ಮೇಲೆ ಓದಿನ ಕಡೆಗೆ ಗಮನಕೊಡುತ್ತಾರೆಂದು ಅವರು ತಿಳಿದರು. ಆದರೆ ಆ ಹುಡುಗರಿಗೆ ಶಾಲೆ ಮತ್ತು ಓದನ್ನು ಕಂಡರೆ ಆಗುತ್ತಿರಲಿಲ್ಲ. ಬೆಳಗ್ಗೆ ಶಾಲೆಗೆ ಹೋದರೆ ಕೆರೆಯಲ್ಲಿ ಮೀನು ಹಿಡಿಯುವುದು ಹೇಗೆ? ಎಂದು ಯೋಚಿಸುತ್ತಿದ್ದರು. ಅವರಿಗೆ ಮೀನು ಹಿಡಿಯುವುದು ಸಂತೋಷದ ಕೆಲಸ ಶಾಲೆಗೆ ಹೋಗುವುದು ಹಿಂಸೆಯ ಕೆಲಸವಾಗಿತ್ತು. ಪ್ರತಿದಿನ ಬೆಳಗ್ಗೆ ಆ ಹುಡುಗರಿಬ್ಬರೂ ಶಾಲೆಗೆ ಹೋಗುವವರಂತೆ ನಟಿಸಿ ಮಾಯವಾಗಿ ಬಿಡುತ್ತಿದ್ದರು. ಆದರೆ ಶಾಲೆಯ ಕಾಲದಲ್ಲಿ ಅವರನ್ನು ಬೇರೆಯವರ ತೋಟದಲ್ಲಿಯೋ ಅಥವಾ ಊರ ಪಕ್ಕದ ಕಾಡಿನಲ್ಲಿಯೋ ಅಲೆಯುತ್ತಿರುವುದನ್ನು ಕಾಣಬಹುದಿತ್ತು. ಇದನೆಲ್ಲಾ ಅವರ ತಂದೆ ತಾಯಿಗಳು ಕಂಡುಹಿಡಿಯುವ ಹೊತ್ತಿಗೆ ತುಂಬಾ ತಡವಾಗಿ ಹೋಗಿತ್ತು. ಮೂಗುಣಿ ಮತ್ತು ಗೋಕುಲಿಗೆ ಆಗಾಗ ತಂದೆ ತಾಯಿಗಳಿಂದ ಏಟು ಬೀಳುತ್ತಿದ್ದುವು. ಆದರೆ ಎಷ್ಟೇ ಶಿಕ್ಷೆ ಮಾಡಿದರೂ ಅವರು ತಮ್ಮ ದಾರಿಯನ್ನು ಬದಲಾಯಿಸಿಕೊಳ್ಳಲಿಲ್ಲ.

ಕಡೆಗೊಮ್ಮೆ ಆ ಹುಡುಗರು ತಂದೆ ತಾಯಿಯರು ತಮ್ಮನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಎಂಬ ತೀರ್ಮಾನಕ್ಕೆ ಬಂದರು. ಅವರಿಗೆ ಬುದ್ಧಿಯಿಲ್ಲ ! ಹುಡುಗರಿಗೆ ಪ್ರಿಯವಾದ ಇಂತಹ ತೀರ ಸಮಾನ್ಯವಾದ ವಿಷಯ ಅವರಿಗೆ ಅರ್ಥವಾಗಿಲ್ಲ" ಎಂದ ಮೊಗುಣಿ.

"ಇಲ್ಲ ಅವರಿಗೆ ಗೊತ್ತಿಲ್ಲ. ನಮ್ಮಪ್ಪ ಇದಕ್ಕಾಗಿ ಹೊಡೀತಾರೆ ಗೊತ್ತಾ? ದಿನ ಏಟು ತಿನ್ನೋಕೆ ನನಗಂತೂ ಇಷ್ಟವಿಲ್ಲ" ಎಂದು ಗೋಕಲಿ.

"ತನಗೆ ಇಷ್ಟ ಅಂತ ಮಾಡಿದ್ದೀಯೇನು? ಇದಕ್ಕೆ ಏನಾದರೂ ಮಾಡಲೇಬೇಕು ಎಂದನು ಮೊಗುಣಿ, ಆನಂತರ ಆ ಹುಡುಗರು ತಮ್ಮ ಮನೆಗಳಿಂದ ಓಡಿಹೋಗುವುದನ್ನು ಯೋಚಿಸಿದರು. ಅವರ ಯೋಚನೆಯಂತೆ ಅವರಿಬ್ಬರೂ ಒಂದು ದಿನ ಬೆಳಗ್ಗೆ ತಮ್ಮ ತಂದೆ ತಾಯಿಗಳಿಗೆ ತಿಳಿಯದಂತೆ ಮನೆಯಿಂದ ಹೊರಟುಹೋದರು. ಬೆಳಗಿನ ಸಮಯ ಆಹ್ಲಾದಕರವಾಗಿತ್ತು. ಆ ಬಂಧನದಿಂದ ಮುಕ್ತರಾದುದಕ್ಕೆ ಅವರಿಬ್ಬರೂ ಬಹಳ ಸಂತೋಷವಾಗಿತ್ತು. ಅವರು ತಮ್ಮ ಮುಂದಿನ ಜೀವನವನ್ನು ಕುರಿತು ಮಾತನಾಡಿಕೊಂಡರು. ಅವರಿಗೆ ತಮ್ಮ ಜೀವನಕ್ಕೆ ಸಾಕಗುವಷ್ಟನ್ನು ಸಂಪಾದಿಸಬಲ್ಲೆವೆಂಬ ನಂಬಿಕೆಯಿತ್ತು.

"ಖಂಡಿತವಾಗಿ ನಾವು ಚೆನ್ನಾಗಿ ಕೆಲಸಮಾಡಿದರೆ ಹೆಚ್ಚೂ ಸಂಪಾದಿಸಬಹುದು" ಎಂದನು ಗೋಕಲಿ.

"ಹೌದು ಹೌದು. ಬಯ್ಗುಳ ಮತ್ತು ಹೊಡೆತಗಳನ್ನು ತಿನ್ನದೆ ಸಂಪಾದಿಸಬಹುದು" ಎಂದನು ಮೊಗುಣಿ.

ಅವರು ಅನೇಕ ಹಳ್ಳಿಗಳನ್ನು ಹಾಯ್ದು ಒಂದು ಹಳ್ಳಿಗೆ ಬಂದರು. ಅಲ್ಲಿ ದೊಡ್ಡ ತೋಟ ಮತ್ತು ದನದ ಕೊಟ್ಟಿಗೆಯಿದ್ದ ಒಂದು ಮನೆಯಿತ್ತು. ಅಲ್ಲಿ ಅನುಕೂಲಸ್ಥ ರೈತನ ಹತ್ತಿರ ಅವರು ಕೆಲಸ ಕೇಳಿದರು.

"ಏನು ಕೆಲಸ ಮಾಡ್ತಿರೋ ಹುಡುಗುರಾ?" ಎಂದು ನಗುತ್ತಾ ಕೇಳಿದನು ಆ ರೈತ.

"ನೀವು ಸಂತೋಷದಿಂದ ಕೊಟ್ಟ ಯಾವ ಕೆಲಸಬೇಕಾದ್ರು ಮಾಡ್ತೀವಿ" ಎಂದು ಉತ್ತರಿಸಿದರು ಆ ಹುಡುಗರು.

ಕೆಲಸಗಾರರ ಅವಶ್ಯಕತೆಯಿದ್ದ ಆ ರೈತ ಕೂಡಲೆ ಅವರನ್ನು ಕೆಲಸಕ್ಕೆ ಸೇರಿಸಿಕೊಂಡನು ಮತ್ತು ಅವರಿಬ್ಬರಿಗೂ ಒಳ್ಳೆಯ ಸಂಬಳ ಕೊಡುವುದಾಗಿಯೂ ಹೇಳಿದನು. ಅವನು ಅವರಿಬ್ಬರನ್ನು ದನದ ಕೊಟ್ಟಿಗೆಗೆ ಕರೆದುಕೊಂಡು ಹೋಗಿ ಮೊಗುಣಿಯ ಕಡೆಗೆ ತಿರುಗಿ "ಎಲ್ಲಾ ಹಸುಗಳನ್ನು ಮೇಯಲು ಅಟ್ಟಿಕೊಂಡು ಹೋಗಿದ್ದಾರೆ. ಆ ಮೂಲೆಯಲ್ಲಿ ನಿಂತಿದೆಯಲ್ಲಾ ಅದೊಂದನ್ನು ಬಿಟ್ಟು, ನೀನು ಈ ಹಸು ನೋಡಿಕೋ, ಬೆಳಗ್ಗೆ ಮೇಯಲು ಹೊಡೆದುಕೊಂಡು ಹೋಗು. ಸಂಜೆ ಮನೆಗೆ ತಂದು ಕಟ್ಟು. ಇಷ್ಟೇ ನಿನ್ನ ಕೆಲಸ ನಿನಗೆ ಮಾಡಲು ಆಗುತ್ತದೆಯೆ?" ಎಂದು ಕೇಳಿದ ಆ ರೈತ.

ಮೊಗುಣಿ ಹೆಮ್ಮೆಯಿಂದ "ನನಗೆ ನಮ್ಮ ಮನೆಯಲ್ಲಿ ಹಸುಗಳನ್ನು ಕಾಯ್ದು ಅಭ್ಯಾಸವಿದೆ. ಒಂದು ಹಸು ನೋಡಿಕೊಳ್ಳುವುದು ನನಗೆ ಏನೇನು ಕಷ್ಟವಿಲ್ಲ ಸ್ವಾಮಿ" ಎಂದು ಉತ್ತರಿಸಿದನು.

ಆನಂತರ ಆ ರೈತ ಗೋಕುಲಿಯನ್ನು ತನ್ನ ತೋಟಕ್ಕೆ ಕರೆದುಕೊಂಡು ಹೋಗಿ ಒಂದು ಮಾವಿನಮರ

ತೋರಿಸಿ "ನೀನು ಇದಕ್ಕೆ ನೀರು ಹಾಕಬೇಕು, ಎಷ್ಟು ಚೆನ್ನಾಗಿ ನೀರು ಹಾಕಬೇಕು ಎಂದರೆ ಅದರ ಬಡ್ಡೆಯ ಸುತ್ತ ಯಾವಾಗಲೂ ಹಸಿಯಾಗಿರಬೇಕು." ಎಂದು ಹೇಳಿದನು.

ಗೋಕುಲಿ ನಕ್ಕು "ಒಂದೇ ಒಂದು ಮರಕ್ಕೆ ನೀರು ಹಾಕೋದು ಮಕ್ಕಳ ಕೆಲಸ. ಅದನ್ನು ನಾನು ಬಹಳ ಸುಲಭವಾಗಿ ಮಾಡಬಲ್ಲೆ" ಎಂದನು.

ಮಾರನೆಯ ಬೆಳಗ್ಗೆ ಇಬ್ಬರು ಹುಡುಗರು ತಮ್ಮ ತಮ್ಮ ದಿನದ ಕೆಲಸಗಳಿಗಾಗಿ ಹೊರಟರು. ಮೊಗುಣಿ ದನದ ಕೊಟ್ಟಿಗೆಗೆ ಹೋಗಿ ಆ ಒಂಟಿ ಹಸುವನ್ನು ಬಿಟ್ಟನು. ಒಂದು ಹಸು ಕಾಯುವುದೂ ಒಂದು ಕೆಲಸವೇ? ಮಧ್ಯಾಹ್ನ ಆರಾಮವಾಗಿ ನಿದ್ದೆ ಹೊಡೆಯಬಹುದು ಎಂಬುದು ಅವನ ಆಸೆಯಾಗಿತ್ತು. ತನಗೆ ಎಂತಹ ಕಷ್ಟ ಒದಗಲಿದೆ ಎಂಬುದರ ಅರಿವು ಅವನಿಗೆ ಇರಲಿಲ್ಲ. ಆ ಹಸು ಯಾರೂ ಕಾಯಲಾರದ ತಂಟೆಯ ಹಸುವಾಗಿದ್ದು ಅದರ ಯಜಮಾನನಿಗೊಂದು ಸಮಸ್ಯೆಯಾಗಿತ್ತು. ಆದುದರಿಂದ ಮೊಗುಣಿ ಹಗ್ಗ ಬಿಚ್ಚಿದ ಕೂಡಲೆ ಅದು ಬಾಣದಂತೆ ನುಗ್ಗಿತು. ಮೊಗುಣಿ ತನ್ನ ಶಕ್ತಿಯನ್ನೆಲ್ಲಾ ಬಿಟ್ಟು ಅದರ ಹಿಂದೆ ಓಡಿದನು. ಆ ಹಸು ಒಂದೇ ನೆಗೆತಕ್ಕೆ ಬೇಲಿಯೊಂದನ್ನು ಹಾರಿ ಸೌತೆಕಾಯಿ ಗಿಡಗಳನ್ನು ಮೇಯಲಾರಂಭಿಸಿತು. ಆ ತೋಟದ ಯಜಮಾನ ತನ್ನ ತೋಟದಲ್ಲಿ ಹಸು ಮೇಯುತ್ತಿರುವುದನ್ನು ಕಂಡು ಓಡಿಬಂದ. ಅವನು ಕೋಪದಿಂದ ಮೊಗುಣಿಯ ಕಡೆ ನೋಡಿ ಒಂದೇ ಸಮನೆ ಬಯ್ಯಲಾರಂಭಿಸಿದ.

ಮರುಕ್ಷಣದಲ್ಲಿಯೇ ಆ ಹಸು ಬಾಳೆಯ ತೋಟವೊಂದಕ್ಕೆ ನುಗ್ಗಿತು. ಸುಳಿಗಳಿಗೆ ಬಾಯಿ ಹಾಕಿ ಎಳೆದು ಸಿಗಿದು ಅನೇಕ ಗಿಡಗಳನ್ನು ಹಾಳುಮಾಡಿತು. ತೋಟಗಾರ ದೊಡ್ಡದೊಂದು ದೊಣ್ಣೆ ತೆಗೆದುಕೊಂಡು ಹಸು ಮತ್ತು ಮೊಗುಣಿ ಇಬ್ಬರನ್ನು ಅಟ್ಟಿಸಿಕೊಂಡು ಹೋದನು. ಹಸು ಜೋರಾಗಿ ಓಡುತ್ತಿತ್ತೇ, ಮೊಗುಣಿ ಜೋರಾಗಿ ಓಡುತ್ತಿದ್ದನೆ ಎಂಬುದನ್ನು ಹೇಳುವುದು ಅಷ್ಟು ಸುಲಭವಾಗಿರಲಿಲ್ಲ.

ಆದರೆ ಮೊಗುಣಿಯ ತೊಂದರೆಗಳು ಅಲ್ಲಿಗೆ ಮುಗಿಯಲಿಲ್ಲ. ಹಸು ಒಂದು ಭತ್ತದ ಗದ್ದೆಗೆ ನುಗ್ಗಿತು. ಕಾವಲುಗಾರ ಕಲ್ಲು ತೆಗೆದುಕೊಂಡು ಬೀರಿದನು. ಅದರ ಜೊತೆಗೆ ಮೋಗುಣಿಯನ್ನು ಬಾಯಿಗೆ ಬಂದಂತೆ ಬಯ್ದನು.

ಕಡೆಗೆ ಸಾಯಂಕಾಲ ಮೈಕೈಗಳನ್ನೆಲ್ಲಾ ತರೆದುಕೊಂಡು ಏದುಸಿರು ಬಿಡುತ್ತಿದ್ದ ಮೊಗುಣಿ ಆ ಹಸುವನ್ನು ಹೇಗೋ ಹಟ್ಟಿಗೆ ಹೊಡೆದುಕೊಂಡು ಬಂದನು. ಅವನಿಗೆ ಆ ಹಸುವಿನ ಬಗ್ಗೆ ಕೋಪ ಬಂದಿತ್ತು. ತನ್ನ ಬಗ್ಗೆ ಕೋಪಬಂದಿತ್ತು. ಇಡೀ ಪ್ರಪಂಚದ ಬಗ್ಗೆಯೇ ಕೋಪ ಬಂದಿತ್ತು.

"ನಾನು ಎಂತಹ ದುರದೃಷ್ಟಶಾಲಿ" ಎಂದು ತನಗೆ ತಾನೇ ಹೇಳಿಕೊಂಡನು. 'ಗೋಕುಲಿ ಆರಾಮವಾಗಿ ಮರದ ನೆರಳಿನಲ್ಲಿ ನಿದ್ರೆ ಹೊಡೆದಿರಬೇಕು" ಎಂದುಕೊಂಡನು. ಅವನ ತಲೆಯಲ್ಲಿ

ಯೋಚನೆಯೊಂದು ಹೊಳೆಯಿತು. 'ನಾಳೆ ನಾನು ಏನಾದರೂ ಮಾಡಿ ಗೋಕುಲಿಯೊಂದಿಗೆ ಕೆಲಸವನ್ನು ಬದಲಾಯಿಸಿಕೊಳ್ಳಬೇಕು. ಈ ದರಿದ್ರ ಹಸುವಿನ ಸ್ವಭಾವವನ್ನು ಅವನಿಗೆ ಹೇಳುವುದೇ ಇಲ್ಲ. ಈ ದಿನ ಎಷ್ಟು ಸೊಗಸಾಗಿ ಕಾಲ ಕಳೆದೆ ಎಂದು ಹೇಳಬೇಕು. ಇದನ್ನೆಲ್ಲಾ ಕೇಳಿ ಖಂಡಿತ ಅವನು ನಾಳೆ ನನ್ನ ಕೆಲಸ ಒಪ್ಪಿಕೊಳ್ಳುತ್ತಾನೆ" ಎಂದು ಯೋಚಿಸಿದನು ಮೊಗುಣಿ.

ಪಾಪ ಆ ಬಡ ಗೋಕುಲಿ! ಆಳವಾದ ಬಾವಿಯಿಂದ ದಪ್ಪದೊಂದು ತಾಮ್ರದ ಬಿಂದಿಗೆಯ ತುಂಬ ನೀರು ಸೇದಿ ಆ ಮಾವಿನ ಮರದ ಬುಡಕ್ಕೆ ಸುರಿಯುವವನು. ಒಂದು, ಎರಡು, ಮೂರುಬಾರಿ... ಹತ್ತು ಬಾರಿ ಏನೂ ಪ್ರಯೋಜನವಿಲ್ಲ. ಆ ಮರದ ಬುಡಕ್ಕೆ ನೀರು ಸುರಿದಂತೆಲ್ಲಾ ಅದು ಒಣಗಿದಂತೆ ಕಾಣುವುದು. ಆ ದಪ್ಪ ಕಾಯಿ ಜುಂಗಿನ ಹಗ್ಗದಲ್ಲಿ ನೀರು ಎಳೆದೂ ಎಳೆದೂ ಗೋಕಲಿಯ ಕೈಗಳಲ್ಲಿ ಬೊಬ್ಬೆಗಳುಂಟಾದವು. ಅವನು ಒಂದಾದ ಮೇಲೊಂದು ಕೊಡದಂತೆ ನೀರು ಎಳೆದಂತೆಲ್ಲಾ ಆ ಗುಳ್ಳೆಗಳು ಒಡೆದು ರಕ್ತಬರಲಾರಂಭಿಸಿತು. ಕೈ ವಿಪರೀತ ನೋಯಲಾರಂಭಿಸಿತು. ಆದರೆ ಕೆಲಸ ಮುಗಿಸದೆ ನಿಲ್ಲಿಸುವುದು ಹೇಗೆ? ಅವನ ತೋಳುಗಳು ವಿಪರೀತ ನೋಯಲಾರಂಭಿಸಿದವು. ಕಡೆಗೊಮ್ಮೆ ಗೋಕಲಿ ಗುಳ್ಳೆಬಂದು ಕಿತ್ತು ರಕ್ತ ಸೋರುತ್ತಿದ್ದ ಕೈಗಳೊಂದಿಗೆ ಸಂಜೆ ಮನೆಯತ್ತ ಹೊರಟ.

ಆದರೆ, ತನ್ನ ಕೆಲಸದ ತೊಂದರೆಯನ್ನು ಮುಚ್ಚಿಸುವುದರಲ್ಲಿ ಗೋಕುಲಿ ಮೊಗುಣಿಗಿಂತೇನೂ ಹಿಂದೆ ಬೀಳಲಿಲ್ಲ. "ಏನಾದರೂ ಮಾಡಿ ಈ ಕೆಲಸ ಹೂವೆತ್ತಿದಷ್ಟು ಹಗುರವಾದುದು ಎಂದು ಹೇಳಬೇಕು. ನಾನು ಎಷ್ಟು ಸಂತೋಷದಿಂದ ಕಾಲಕಳೆದನೆಂದು ಅವನಿಗೆ ಮೊದಲು ಹೇಳಬೇಕು. ಕೆಲವೇ ನಿಮಿಷಗಳಲ್ಲಿ ನೀರು ಹುಯ್ದು ಮುಗಿದು ಹೋಯಿತು, ಇಡೀ ಮಧ್ಯಾಹ್ನ ಮರದ ನೆರಳಿನಲ್ಲಿ ನಿದ್ರೆ ಹೊಡೆದದ್ದೇ ಹೊಡೆದದ್ದು ಎಂದು ವಿವರಿಸಿ ಏನಾದರೂ ಮಾಡಿ ಈ ಕೆಲಸ ಅವನಿಗೆ ಗಂಟು ಕಲಕಬೇಕು" ಎಂದು ಯೋಚಿಸಿದನು.

ಹೀಗೆ ಆ ಸ್ನೇಹಿತರಿಬ್ಬರು ತಮ್ಮ ತಮ್ಮ ರಹಸ್ಯ ಯೋಜನೆಗಳೊಂದಿಗೆ ಪರಸ್ಪರ ಭೇಟಿಯಾದರು. ಮೊದಲು ಮೊಗುಣಿ ಹಸು ಮೇಯಿಸುತ್ತಾ ತಾನು ಹೇಗೆ ವಿರಾಮವಾಗಿ ಕಾಲ ಕಳೆದನೆಂಬುದರ ಸೊಗಸಾದ ಚಿತ್ರ ಕೊಡುತ್ತಾ "ಇಲ್ಲಿ ನೋಡು ಗೋಕಲಿ, ಒಂದೇ ಒಂದು ಹಸು ಕಾಯುವುದೂ ಒಂದು ಕೆಲಸವೇ? ನನಗಂತೂ ಹೊತ್ತೇ ಹೋಗಲಿಲ್ಲ. ಅದೆಲ್ಲೋ ಮೇಯ್ತು ನಾನಲ್ಲೋ ಮಲಗಿದ್ದೆ. ನಾಳೆಯಿಂದ ಒಂದು ಹಗ್ಗದ ಮಂಚಾನೂ ಜೊತೇಲಿ ತಕ್ಕೊಂಡ್ಹೋಗೋಣ ಅಂತ ಮಾಡಿದ್ದೀನಿ. ಅಂತು ಒಳ್ಳೆ ರಾಜಕುಮಾರನ ಹಾಗೆ ಕಾಲಕಳಿಬಹುದು ಕಣೋ' ಎಂದು ವಿವರಿಸಿದನು.

ಮೊಗುಣಿಯ ಸಂತೋಷದ ಕೆಲಸದ ಹೊಗಳಿಕೆಯನ್ನ ಕೇಳಿ ಗೋಕುಲಿ ಒಳಗೇ ಕುರುಬಿಕೊಂಡನು. ಆದರೆ ಗೋಕಲಿ ಮೊಗಣಿಯ ಸಂತೋಷ ಕೇಳಿ ಒಳಗೆ ನಕ್ಕನು. ಆ ಹಗ್ಗದ ಮಂಚದ ಮೇಲೆ ನಾಳೆ ಮಲಗುವವನು ನಾನು, ಮೋಗುಣಿಯಲ್ಲ ಎಂದು ಹಿಗ್ಗಿದನು.

ಆನಂತರ ಗೋಕಲಿ ತಾನು ಹೇಗೆ ಕಾಲ ಕಳೆದನೆಂಬುದನ್ನು ರಸವತ್ತಾದ ಪದಗಳಿಂದ ವರ್ಣಿಸಲಾರಂಭಿಸಿದನು. "ಎಷ್ಟು ಆರಾಮವಾಗಿ ಕಾಲ ಕಳೆದೆ ಅಂತೀಯಾ ಮೊಗುಣಿ ಏನೂ ಕೆಲಸವಿರಲಿಲ್ಲ. ಒಂದು ಮಾವಿನ ಗಿಡಕ್ಕೆ ನೀರು ಹುಯ್ಯೋದು ಎಷ್ಟೊತ್ತಿನ ಕೆಲಸವಪ್ಪ! ಒಂದು ಹತ್ತು ಚೌರಿಗೆ ಹಾಕಿದರೆ ಮುಗೀತು. ಒಂದು ಅಡಕೆ ಕಡೆಯೋ ಹೊತ್ತಿಗೆ ಆ ನೀರು ಹಾಕೋ ಕೆಲಸ ಮುಗಿಯಿತು. ಆಮೇಲೆ ದಿನವೆಲ್ಲಾ ನೆರಳಿನಲ್ಲಿ ಮಲಗಿದ್ದೇ ಮಲಗಿದ್ದು. ನೀನೂ ಒಂದು ದಿನ ಅದರ ಸುಖ ಅನುಭವಿಸಬೇಕು ನೋಡು" ಎಂದನು.

"ವಿಚಿತ್ರ ಕಣೋ ಹಾಗಾದ್ರೆ ಒಂದು ಕೆಲಸ ಮಾಡೋಣ. ನಾಳೆ ನಮ್ಮ ಕೆಲಸಗಳನ್ನು ಅದಲುಬದಲು ಮಾಡಿಕೊಳ್ಳೋಣ" ಎಂದನು ಮೊಗಣಿ.

ಆ ಇಬ್ಬರು ಸ್ನೇಹಿತರ ರಹಸ್ಯ ಯೋಜನೆ ಮಾರನೆಯ ದಿನ ಜಾರಿಗೆ ಬಂದಿತು ಎಂದು ಬೇರೆ ಹೇಳಬೇಕಾಗಿಲ್ಲ. ಮಾರನೆಯ ದಿನ ಬಿಡುವ ಹೊತ್ತಾದ ಕೂಡಲೆ ಗೋಕಲಿ ಬಹಳ ಹರ್ಷ ತುಂಬಿದ ಹೃದಯದಿಂದ ತಲೆಯ ಮೇಲೊಂದು ಹಗ್ಗದ ಮಂಚ ಹೊತ್ತುಕೊಂಡು ಹೊರಟನು. ಅವನು ಹೋಗಿ ಆ ಹಸುವಿನ ಗೊಂತು ಬಿಟ್ಟಿದನೋ ಇಲ್ಲವೋ ಏನಾಗಬೇಕಾಗಿತ್ತೂ ಅದೇ ಆಯಿತು. ತಲೆಯ ಮೇಲೆ ಹಗ್ಗದ ಮಂಚ ಹೊತ್ತು ಅವನು ಓಡಲಾರಂಭಿಸಿದನು.

ಅಂತಹ ಹಸುವಿನ ಹಿಂದೆ ಓಡುವುದೇ ಕೆಟ್ಟದ್ದು, ತಲೆ ಮೇಲೊಂದು ಮಂಚ ಹೊತ್ತು ಓಡುವುದಂತೂ ತೀರ ಹೊಲಸು! ಮೊದಲಿನಂತೆಯೇ ಆ ಹಸು ಗದ್ದೆಯಿಂದ ತೋಟಕ್ಕೆ, ತೋಟದಿಂದ ಗದ್ದೆಗೆ ಹಾರುತ್ತಿತ್ತು. ಆ ತೋಟಗದ್ದೆಗಳ ಯಜಮಾನರಿಂದ ಬಯಿಸಿಕೊಳ್ಳುತ್ತಾ, ಹಗ್ಗದ ಮಂಚ ತಲೆಯ ಮೇಲಿಟ್ಟುಕೊಂಡು ಅದರ ಹಿಂದೆ ಓಡುತ್ತಿದ್ದನು. ಗೋಕಲಿ ಇಡೀ ದಿನ ತೊಂದರೆಯ ಮೂರ್ತಿಯಾಗಿ ಓಡಾಡಿದನು.

ಮೊಗುಣಿಯೂ ಗೋಕಲಿಯಷ್ಟೆ ತೊಂದರೆಗೆ ಒಳಗಾಗಿದ್ದನು. ಆ ವಿಚಿತ್ರ ಮಾವಿನ ಗಿಡಕ್ಕೆ ನೀರು ಹಾಕುವ ಅಸಾದ್ಯ ಕೆಲಸದಲ್ಲಿ ಸಿಕ್ಕಿ ಅವನು ತೊಳಲಿದನು.

ಸಂಜೆ ಅವರಿಬ್ಬರೂ ಭೇಟಿಯಾದಾಗ ಒಬ್ಬರ ಮೇಲೆ ಮತ್ತೊಬ್ಬರಿಗೆ ವಿಪರೀತ ಕೋಪ ಬಂದಿತ್ತು. ಆದರೆ ಇಬ್ಬರೂ ಪರಸ್ಪರ ಮೋಸ ಮಾಡಿದ್ದರಲ್ಲವೆ? ಆದುದರಿಂದ ತಮ್ಮ ತಪ್ಪನ್ನು ಅರಿತು ಮತ್ತೆ ಎಂದಿನಂತೆ ಸ್ನೇಹಿತರಾಗಿಯೇ ಉಳಿದರು. ಆ ಮೇಲೆ ಅವರ ಚುರುಕಿನ ತಲೆಗಳು ಭವಿಷ್ಯದ ಬಗ್ಗೆ ಚಿಂತಿಸಲಾರಂಭಿಸಿದವು.

"ಅದೆಲ್ಲಾ ಸರಿ ಮೊಗುಣಿ, ಆದರೆ ಆ ಮಾವಿನ ಗಿಡದ ಬುಡದಿಂದ ಇಲ್ಲಿ ಯಾವುದೋ ಬಿಲವಿರಬೇಕು ಅಥವಾ ಅದರ ಹತ್ತಿರ ಆಳವಾದ ಗುಂಡಿ ಇರಬೇಕು. ಆ ಗುಂಡಿಯಲ್ಲಿ ಹಣಗಿಣ ಹೂತಿಟ್ಟಿರಬೇಕು

ಅನ್ನಿಸುತ್ತದೆ ನನಗೆ. ಆ ಮರದ ಬುಡದ ಸುತ್ತ ಅಗದು ಬಿಡೋಣ. ಹಣ ಸಿಕ್ಕಿದರೆ ನಮ್ಮ ಅದೃಷ್ಟ ಖುಲಾಯಿಸಿತು ಅಂತಲೆ" ಎಂದನು ಗೋಕುಲಿ.

ರಾತ್ರಿ ಎಲ್ಲರೂ ಮಲಗಿದ ಮೇಲೆ ಆ ಹುಡುಗರಿಬ್ಬರೂ ತೋಟಕ್ಕೆ ಹೋಗಿ ಮಾವಿನ ಮರದ ಅಡಿಯ ಜಾಗವನ್ನೆಲ್ಲಾ ಅಗೆಯಲಾರಂಭಿಸಿದರು. ಗೋಕುಲಿ ಅಗೆದು ಮಂಕ್ರಿಗೆ ತುಂಬುವನು. ಮೊಗುಣಿ ಅದನ್ನು ತೆಗೆದುಕೊಂಡು ಹೋಗಿ ದೂರ ಸುರಿದು ಬರುವನು. ಸ್ವಲ್ಪ ಹೊತ್ತಿನಲ್ಲಿ ಅವರು ಆಳವಾದ ಗುಂಡಿಯೊಂದನ್ನು ತೋಡಿದರು. ಆಗ ಇದ್ದಕ್ಕಿದ್ದ ಹಾಗೆಯೇ ಗೋಕುಲಿ ಗುದ್ದಲಿ ಗಟ್ಟಿ ಪದಾರ್ಥವೊಂದಕ್ಕೆ ತಗುಲಿತು. "ಹಣದ ಚೌರಿಗೆಯ ಇರಬೇಕು ! ಈ ಚೌರಿಗೆ ತೆಗೆದು ಮೇಲೆ ಕೊಟ್ಟರೆ ಅದನ್ನು ತೆಗೆದುಕೊಂಡು ಮೊಗುಣಿ ಓಡಿಹೋದರೆ?" ಎಂದು ಯೋಚಿಸಿದನು ಗೋಕುಲಿ.

"ನೀನು ಸ್ವಲ್ಪ ಹೊತ್ತು ಅಗಿ, ಬಾ ಮೊಗುಣಿ, ನನಗೆ ಸಾಕಾಗಿ ಹೋಗಿದೆ" ಎಂದನು ಗೋಕಲಿ.

ಮೊಗಣಿ ಒಂದೇ ನೆಗೆತಕ್ಕೆ ಗುಂಡಿಯೊಳಗೆ ಇಳಿದು ಗೋಕುಲಿಯನ್ನು ಮೇಲಕ್ಕೆ ಹತ್ತಿಸಿದನು. ಗೋಕುಲಿ ಯೋಚಿಸಿದಂತೆಯೇ ಮೊಗುಣಿ ತಾಮ್ರದ ಚೌರಿಗೆಯನ್ನು ಅಗೆದು ಮೇಲೆ ಗೋಕುಲಿಗೆ ಕೊಟ್ಟನು. ಗೋಕುಲಿ ಮೆಲ್ಲನೆ ಅಷ್ಟುದೂರ ಹೋಗಿ ಆ ಹಣದ ಚೌರಿಗೆ ಸಮೇತ ಓಡಿ ಹೋದನು.

ಪಾಪ ! ಬಡ ಮೊಗುಣಿ ಗುಂಡಿಯೊಳಗಿನಿಂದ ಗೋಕುಲಿಯನ್ನು ಕರೆದ. ಆದರೆ ಉತ್ತರ ಬರಲಿಲ್ಲ. ಅವನು ಜೋರಾಗಿ ಕೂಗುವಂತೆಯೂ ಇರಲಿಲ್ಲ. ಏಕೆಂದರೆ ತೋಟದ ಯಜಮಾನ ಮತ್ತು ಅವನ ಆಳುಗಳು ಎದ್ದು ಬಿಟ್ಟರೆ? ಹೇಗೋ ಕಷ್ಟಪಟ್ಟು ಮೊಗುಣಿ ಗುಂಡಿಯಿಂದ ಮೇಲೆ ಬಂದು ಮರದ ಬುಡದಲ್ಲಿ ನಿಂತನು. ಸುತ್ತಲೂ ಕತ್ತಲೆಯೋ ಕತ್ತಲೆ ಗೋಕುಲಿ ಎಲ್ಲಿ? ಹಣದ ಚೌರಿಗೆ ತಗೆದುಕೊಂಡು ಅವನೆಲ್ಲಿ ಹೋದ? ಮಗುಣಿಯೂ ಅದೇ ದಿಕ್ಕಿಗೆ ಹುಡುಕುತ್ತ ಓಡಿದನು. ಸ್ವಲ್ಪ ಹೊತ್ತಿನ ನಂತರ ಮೊಗುಣಿ ಗೋಕುಲಿ ಸಿಕ್ಕಿದನು. ಅವರಿಬ್ಬರೂ ಮೋಸಗಾರರಾದುದರಿಂದ ಬಹಳ ಬೇಗ ಮತ್ತೆ ಪರಸ್ಪರ ಸ್ನೇಹಿತರಂತಾದರು.

ತಾವು ತಂದಿದ್ದ ಹಣ ಹಂಚಿಕೊಳ್ಳಲು ಅವರಿಬ್ಬರೂ ಬಾವಿಯೊಂದರ ಹತ್ತಿರ ಕುಳಿತು ಕೊಂಡರು. ಅದೊಂದು ಉಪಯೋಗಿಸದ ಹಳೆಯ ಬಾವಿ, ಅದರೊಳಗೆಲ್ಲಾ ಗಿಡಗಂಟಿ ಬೆಳೆದುಕೊಂಡಿದ್ದವು. "ಏನಾದರೂ ಉಪಾಯ ಮಾಡಿ ಗೋಕುಲಿಯನ್ನು ಈ ಬಾವಿಯಲ್ಲಿ ಹಾಕಿದರೆ ಹಣವೆಲ್ಲಾ ನನಗೊಬ್ಬನಿಗೆ ಸಿಗುತ್ತದೆ" ಎಂದು ಯೋಚಿಸಿದನು ಮೊಗುಣಿ, ಈ ಯೋಚನೆ ಅವನ ತಲೆ ಹೊಕ್ಕ ಕೂಡಲೆ ಗೋಕುಲಿಯನ್ನು ಅದರಲ್ಲಿ ತಳ್ಳಲು ತೀರ್ಮಾನಿಸಿದನು.

“ಗೋಕುಲಿ ಇದೊಂದು ಹಳೆಯ ಬಾವಿಯಂತೆ ಕಾಣುತ್ತದೆ. ಇದರೊಳಗೆ ನೀರಿದ್ದರೆ ಆಶ್ಚರ್ಯ” ಎಂದನು.

ಮೋಗುಣಿಯ ಮಾತುಗಳನ್ನು ಕೇಳಿ “ನೀರಿರಬೇಕು ಕಣೋ” ಎಂದು ಗೋಕುಲಿ ಬಾವಿಯೊಳಗೆ ಬಗ್ಗಿದನು. ಅದನ್ನೇ ಕಾಯುತ್ತಿದ್ದ ಮೊಗುಣಿ ಅವನನ್ನು ಒಳಗೆ ನೂಕಿಬಿಟ್ಟನು, ಗೋಕುಲಿ ತಲೆಕೆಳಗಾಗಿ ಬಾವಿಯೊಳಗೆ ಬಿದ್ದನು. ತನಗೆ ಸಾವು ಖಚಿತ ಎಂದುಕೊಂಡನು. ಆದರ ಅದೃಷ್ಟ ಯಾವ ರೀತಿಯ ಅಪಾಯವೂ ಆಗದಂತೆ ಬಾವಿಯೊಳಗೆ ಗಿಡಗಳು ಅವನನ್ನು ತಡೆದವು. ಹೀಗೆ ಅವನು ಸಾವಿನಿಂದ ಪಾರಾದನು. ದುಷ್ಟ ಮೊಗುಣಿ ಸಿಳ್ಳೆಹಾಕುತ್ತಾ ಹಣದ ಚೌರಿಗೆಯೊಂದಿಗೆ ಹೊರಟುಹೋದನು.

ಮಧ್ಯಾಹ್ನ ಎರಡು ದೆವ್ವಗಳು ಬಂದು ಅಲ್ಲಿ ಬೆಳೆದಿದ್ದ ಮರವೊಂದರ ಮೇಲೆ – ಅದೃಶ್ಯವಾಗಿ ಕುಳಿತವು. ಅವೆರಡೂ ಅಕ್ಕತಂಗಿ ದೆವ್ವಗಳು. ಎರಡೂ ಮಾತಿಗಾರಂಭಿಸಿದವು.

“ಏನು ಸಮಚಾರ ಅಕ್ಕ?” ಕಿರಿಯದು ಕೇಳಿತು.

‘ಸಮಾಚಾರ ! ನಾನು ಬಹಳ ಸಂತೋಷವಾಗಿದ್ದೇನೆ. ನೀನು ಯಾವಾಗಲಾದರೂ ರಾಜನ ಮಗಳನ್ನು ನೋಡಿದ್ದೀಯಾ? ಅವಳು ಎಂತಹ ಸುಂದರಿ. ಅವಳ ಜೀವ ಈಗ ನನ್ನ ಕೈಲಿದೆ. ನನ್ನ ಮಾಯದಿಂದಾಗಿ ಅವಳಿಗೆ ಖಾಯಿಲೆ ಮಲಗಿದ್ದಾಳೆ. ರಾಜ ತನ್ನ ಮಗಳು ಗುಣವಾಗಲೆಂದು ಕಾತುರನಾಗಿದ್ದಾನೆ. ತನ್ನ ರಾಜ್ಯದ ಅತ್ಯುತ್ತಮ ವೈದ್ಯರನ್ನು ಅವಳ ಖಾಯಿಲೆ ಹುಷಾರು ಮಾಡಲು ನೇಮಿಸಿದ್ದಾನೆ. ಆದರೂ ಆ ಹುಡುಗಿ ಹುಷಾರಾಗಿಲ್ಲ. ಅವಳು ದಿನದಿನಕ್ಕೆ – ಸಣ್ಣಗಾಗುತ್ತಿದ್ದಾಳೆ. ಇನ್ನು ಮೂರು ದಿನಕ್ಕೆ ಅವಳು ಸಾಯುತ್ತಾಳೆ” ಎಂದಿತು ಹಿರಿಯ ದೆವ್ವ.

“ಏನು? ಈ ಪ್ರಪಂಚದಲ್ಲಿ ಆ ಖಾಯಿಲೆ ವಾಸಿ ಮಾಡುವ ಔಷದಿಯೇ ಇಲ್ಲವೇ? ಅದೆಂಥಾದಕ್ಕೆ ಆ ವಿಚಿತ್ರವಾದ ಖಾಯಿಲೆ” ಎಂದಿತು ಕಿರಿಯ ದೆವ್ವ.

“ನನಗೆ ಮಾತ್ರ ಆ ಖಾಯಿಲೆಗೆ ಔಷದಿಗೊತ್ತು. ಅದು ತೀರ ಆ ಸಣ್ಣ ವಿಷಯ. ಆ ರಾಜನ ದಡ್ಡ ವೈದ್ಯರಿಗೆ ತಿಳಿಯದು ಅಷ್ಟೆ! ಇಲ್ಲಿ ಬೆಳೆದಿರೋ ಬೇವಿನ ಮರದ ಎರಡು ಎಲೆ ಕಿತ್ತುಕೊಂಡು ಹೋಗಿ ಆ ಹುಡುಗಿಗೆ ಮೂಸಿಸಿದರೆ ಸಾಕು, ಅವಳು ಬದುಕುತ್ತಾಳೆ” ಎಂದು ವಿವರಿಸಿತು ಹಿರಿಯ ದವ್ವ.

ಗೋಕುಲಿ ಗಮನವಿಟ್ಟು ಕೇಳುತ್ತಿದ್ದ. ಅವನಿಗೆ ಕುತೂಹಲ ಉಂಟಾಗಿತ್ತು. ರಾಜನ ವೈದ್ಯರೂ ಮಾಡಲಾರದ ಕೆಲಸ ತನಗೆ ಸಾಧ್ಯವಾಗುತ್ತದೆಯೆಂದು ಅವನ ಸಂತೋಷ ಮೇರೆ ಮೀರಿತ್ತು. ಸಂಜೆಯಾದ ಮೇಲೆ ಆ ದೆವ್ವಗಳು ಅಲ್ಲಿಂದ ಹೊರಟು ಹೋದವು. ಗೋಕುಲಿ ಬಹಳ ಕಷ್ಟದಿಂದ ಮೇಲೆ ಹತ್ತಿಬಂದ.

ಜೇಬಿನಲ್ಲಿ ಆ ಬೇವಿನ ಎಲೆಗಳನ್ನಿಟ್ಟುಕೊಂಡು ರಾಜನ ಅರಮನೆಯತ್ತ ಹೊರಟ. ತಾನು ರಾಜಕುಮಾರಿಯ ಕಾಯಿಲೆಯನ್ನು ವಾಸಿಮಾಡುವುದಾಗಿ ಸಾರಿದ.

ಅಷ್ಟು ಹೊತ್ತಿಗೆ ಎಲ್ಲಾ ರೀತಿಯಲ್ಲೂ ಪ್ರಯತ್ನಮಾಡಿದ್ದ ರಾಜ ಸಂತೋಷದಿಂದಲೇ ಗೋಕುಲಿಗೂ ರಾಜಕುಮಾರಿಗೆ ಔಷದಿ ಕೊಡಲು ಅನುಮತಿ ಕೊಟ್ಟ. ಗೋಕುಲಿ ಔಷದಿ ಕೊಟ್ಟನಂತರ ರಾಜಕುಮಾರಿ ಹುಷಾರಾದಳು. ಅರಮನೆಯಲ್ಲಿ ದೊಡ್ಡ ಹಬ್ಬ ನಡೆಯಿತು. ರಾಜನಿಗೆ ಬಹಳ ಸಂತೋಷವಾಗಿತ್ತು. 'ಗೋಕುಲಿ ಯುವಕನಾಗಿದ್ದನು, ನೋಡಲು ಸುಂದರನಾಗಿದ್ದುದರಿಂದ ರಾಜ ತನ್ನ ಮಗಳನ್ನು ಅವನಿಗೆ ಕೊಟ್ಟು ಮದುವೆ ಮಾಡಲು ತೀರ್ಮಾನಿಸಿದ. ರಾಜಕುಮಾರಿ ಹುಷಾರಾದ ಒಂದು ವಾರದ ನಂತರ ಅವಳ ಮದುವೆ ವಿಜೃಂಭಣೆಯಿಂದ ನಡೆಯಿತು. ಗೋಕಲಿ ರಾಜನ ಅಳಿಯನಾದ ಅವರಿಗೆ ಒಂದು ಸುಂದರವಾದ ಅರಮನೆಯನ್ನು ಕಟ್ಟಲಾಯಿತು. ಅಲ್ಲಿ ಗೋಕುಲಿ ರಾಜಕುಮಾರಿಯೊಂದಿಗೆ ಸುಖವಾಗಿದ್ದನು.

ಅದೇ ಸಮಯದಲ್ಲಿ, ಈ ಕಡೆ ಹಣದ ಚೌರಿಯೊಂದಿಗೆ ಓಡಿಹೋದ ಮೊಗುಣಿ ಆ ಹಣವನ್ನೆಲ್ಲಾ ವ್ಯಾಪಾರದಲ್ಲಿ ಹಾಕಲು ತೀರ್ಮಾನಿಸಿದನು. ಅವನ ದೋಣಿಗಳು ಸಾಮಾನುಗಳನ್ನು ಹೊತ್ತು ಸಮುದ್ರದ ಮೇಲೆ ಬಹಳ ದೂರ ಹೋದವು.

ಒಂದು ಸಾರಿ ಬಿರುಗಾಳಿ ಎದ್ದು ಮೊಗುಣಿಯ ಹಡಗು ಒಡೆದು ಅವನು ಹೇಗೋ ದಡಕ್ಕೆ ಬಂದು ಬಿದ್ದನು. ಅವನು ಜ್ಞಾನ ತಪ್ಪಿ ಬಿದ್ದಿದ್ದ ಸ್ಥಳಕ್ಕೆ ಸ್ವಲ್ಪ ದೂರದಲ್ಲಿಯೇ ಗೋಕುಲಿಯ ಅರಮನೆಯಿತ್ತು. ಸಮುದ್ರ ತೀರದಲ್ಲಿ ಒಬ್ಬ ಅಪರಿಚಿತ ಮನುಷ್ಯ ಜ್ಞಾನ ತಪ್ಪಿ ಬಿದ್ದಿರುವುದಾಗಿ ಗೋಕುಲಿಯ ಸೇವಕರು ಬಂದು ಹೇಳಿದರು. ಗೋಕುಲಿ ಬೇಸರದಿಂದಲೇ ಬಂದು ನೋಡಿದನು. ಆದರೆ ಅವನ ಸ್ನೇಹಿತ, ಬಾಲ್ಯದ ಒಡನಾಡಿ ಅಲ್ಲಿ ಜ್ಞಾನ ತಪ್ಪಿ ಬಿದ್ದಿದ್ದಾನೆ! ತನ್ನ ಸ್ನೇಹಿತರ ಸ್ಥಿತಿಯನ್ನು ಕಂಡು ಗೋಕುಲಿಯ ಹೃದಯ ಕರಗಿತು. ಆನಂತರ ಗೋಕುಲಿ ಅತ್ಯಾದರದಿಂದ ಮೊಗುಣಿಯನ್ನು ತನ್ನ ಅರಮನೆಗೆ ಆಹ್ವಾನಿಸಿದರು. ದುರಾದೃಷ್ಟ ಮತ್ತು ತೊಂದರೆಗಳು ಮೊಗುಣಿಯಲ್ಲಿದ್ದ ಮೋಸದ ಬುದ್ದಿಯನ್ನು ಅಳಿಸಿಹಾಕಿದ್ದವು. ಅವನು ದುರಾಸೆ, ಮೋಸ ವಂಚನೆಗಳಿಂದ ಕೆಟ್ಟದ್ದೇ ವಿನಃ ಒಳ್ಳೆಯದಾಗುವುದಿಲ್ಲ ಎಂಬುದನ್ನು ಅರಿತುಕೊಂಡಿದ್ದನು. ಹೀಗೆ ಆ ಇಬ್ಬರೂ ತಮ್ಮಲ್ಲಿದ್ದ ಕೆಟ್ಟತನವನ್ನು ಬಿಟ್ಟು ಮುಂದೆ ನಿಜವಾದ ಸ್ನೇಹಿತರಾಗಿ ಸುಖದಿಂದ ಬಾಳಿದರು.

**ಆಕರ :** ಜಗತ್ತಿನ ಜನಪದ ಕಥೆಗಳು,
ಕನ್ನಡ ಸಾಹಿತ್ಯ ಪರಿಷತ್

ಸಂ. : **ಹ.ಕ.ರಾಜೇಗೌಡ**

ಓದು ಪತ್ರ

# 4. ಕರಗುವ ಕನಸುಗಳು

– ನೇಮಿಚಂದ್ರ

ಪ್ರಿಯ ಸ್ನೇಹಿತ ಸುಮಿ,

ನಿನ್ನ ಪತ್ರ ತಲುಪಿ ವಾರಗಳೇ ಉರುಳಿವೆ. ಹಲವು ದಿನಗಳ ಆಳ ಚಿಂತನೆಯ ನಂತರ ಕೊನೆಗೆ ಈ ನಿರ್ಧಾರಕ್ಕೆ ಬಂದಿರುವ, ಏನೆಂದು ತಿಳಿಯುವ ಕುತೂಹಲವೆ....? ಸುಮಿ, ಐ ಆಮ್ ಸಾರಿ, ನಿನ್ನ ಪ್ರೇಮದ ಕರೆಗೆ ನಾನೆಂದೆಂದೂ ಕಿವುಡ. 'ಪ್ರೇಮ' ನನ್ನ ದೃಷ್ಟಿಯಲ್ಲಿ ಅರ್ಥವಿಲ್ಲದ ಪದಪುಂಜ. ನಿನ್ನ–ನನ್ನ ಹಲವು ವರ್ಷಗಳ ಈ ಸ್ನೇಹ ಈ ಹಾದಿ ಹಿಡಿಯಬಹುದೆಂದು ನಾನು ಕಲ್ಪಿಸಿರಲಿಲ್ಲ. ನೀನು ಏಕಿಷ್ಟು ನನ್ನನ್ನು ಹಚ್ಚಿಕೊಂಡಿರುವೆಯಂದೇ ಅರ್ಥವಾಗುತ್ತಿಲ್ಲ. ನಿನ್ನೀ ಭಾವನೆಗೆ ನಾನು ಪ್ರೋತ್ಸಾಹಿಸಿದ ನೆನಪಿಲ್ಲ. ನೀನು ಬರೆಯುತ್ತಿದ್ದೆ ನಿಜ – 'ಮಧುರ್, ನಿಮ್ಮನ್ನು ತುಂಬಾ ಮೆಚ್ಚುತ್ತೇನೆ, ಒಂದು ರೀತಿಯ ಪ್ರೀತಿಯ ಭಾವನೆ....' ಬಹುಶಃ ನೀನು ಏನು ನೆನೆಸಿ ಹೀಗೆ ಬರೆದೆಯೋ ತಿಳಿಯದು. ತಿಳಿದುಕೊಳ್ಳೋ ತಲೆಕೆಡಿಸಿಕೊಳ್ಳೋ ವ್ಯರ್ಥಕಾಲಹರಣ ನನಗೆ ಹಿಡಿಸದು. ಕೇವಲ ಹುಚ್ಚು ಹುಡುಗಿ, what she Writes, she may not mean it ಎಂದು ಹಗುರವಾಗಿ ಹಾರಿಸಿದ. ಪದೇ ಪದೇ ಅವೇ ಪದಗಳು ಪುನರಾವರ್ತನೆಗೊಂಡಾಗ ಆ ಪದಗಳು ತಮ್ಮ ತೀಕ್ಷ್ಣತೆ, ಚೈತನ್ಯವನ್ನೆಲ್ಲ ಕಳಕೊಂಡು ಕೇವಲ ಔಪಚಾರಿಕ, ಶಿಷ್ಟಾಚಾರದ, ಬರಿಯ ಶಬ್ದಗಳಾದವು. ನನ್ನ ಎದೆಯ ಕಬ್ಬಿಣದ ಕೋಟೆ ಬರಿಯ ದುರ್ಬಲ ಹಸ್ತಗಳು ಕುಟ್ಟಿದರೆ ತೆಗೆಯುವಂತಹದಲ್ಲವೇನೋ. ಸರಿ ನೀನು ನನ್ನ ಮೌನವನ್ನು ಏನೆಂದು ತಿಳಿದೆಯೋ ತಿಳಿದಿಲ್ಲ. ಒಂದು ಮಾತು ಸುಮಿ, ಪ್ರತಿ ಸ್ನೇಹ ಪ್ರೇಮವಾಗಿ, ಮದುವೆಯಲ್ಲೇ ಕೊನೆಗೊಳ್ಳಬೇಕೇಕೆ ? ಸ್ತ್ರೀ ಪುರುಷರ ಸಂಬಂಧ ಈ ವಿವಾಹ ಬಂಧನ'ದ ಹೊರತಾಗಿ ಬೇರೆ ಏನೂ ಆಗಲು ಸಾಧ್ಯವಿಲ್ಲವೆ? ಈ ಸ್ನೇಹವನ್ನು ನೀನೇಕೆ ಅಪಾರ್ಥಮಾಡಿಕೊಳ್ಳಬೇಕು. ಬುನಾದಿಯೇ ಇಲ್ಲದೆ ಮನೆ ಕಟ್ಟುವ ಆತುರ ಮನಸ್ಸು ನಿನ್ನದು. ನಿನ್ನಲ್ಲಿ ವಾಸ್ತವಿಕ ಜ್ಞಾನ ಸ್ವಲ್ಪವಾದರೂ ಇರುತ್ತಿದ್ದರೆ ನಾ ಇಷ್ಟು ಸ್ಪಷ್ಟವಾಗಿ ಬರದ ಅವಶ್ಯಕತೆಯೇ ಇರುತ್ತಿರಲಿಲ್ಲ. ಪರಿಸ್ಥಿತಿ ಈ ಪರಮಾವಧಿ ತಲುಪುತ್ತಿರಲಿಲ್ಲ. ನಿನ್ನ ಯೌವನದ ಹುಚ್ಚು ಕನಸುಗಳು, ವೈಚಾರಿಕತೆ ಮರೆತ ಲಗಾಮಿಲ್ಲದ ಮನಸ್ಸು, ನಿನ್ನನ್ನು ಅಂಬರದ ಅರಮನೆಗೇ ಎಳದೊಯ್ದಿರಬೇಕು.

ಆದರೆ ಸುಮಿ, ನನ್ನ ಬದುಕಿನಲ್ಲಿ ಸ್ನೇಹಕ್ಕೆ ಮಾತ್ರ ಮೌಲ್ಯವಿದೆ. ಪ್ರೇಮ ಎಂದೂ ಪ್ರಾಮುಖ್ಯ ಪಡೆಯಲಾರದು. ವಸ್ತುವಿನ ಮೇಲಿರುವ ಅತಿ ವ್ಯಾಮೋಹದ, ನಮ್ಮ ಸ್ವಾರ್ಥದ ಮತ್ತೊಂದು ಮುಖವಷ್ಟೆ ಈ ಪ್ರೇಮ. ಜೆ. ಕೃಷ್ಣಮೂರ್ತಿಯ ಮಾತುಗಳು ನೆನಪಾಗುತ್ತವೆ. "ವ್ಯಕ್ತಿ ಸತ್ತಾಗ ಉಕ್ಕುವ ದುಃಖವೂ

ಕೇವಲ ಸ್ವಾರ್ಥ, ಅಸಹಾಯಕತೆ, ಒಂಟಿತನ. ಸ್ವಯಂ ಮರುಕ ನಮ್ಮನ್ನು ಆಲಿಸುತ್ತದೆ. ಒರಗಿದ ಮರ ಉರುಳಿದಾಗ ಆಧಾರ ಕಳಕೊಂಡ ಆ ಅನುಭವ ಪ್ರೇಮವೆ?" ಅಂದಮೇಲೆ ನಿನ್ನ ಬರಿಯ ಹುಚ್ಚುಗನಸುಗಳಿಗೆ ಈ ಪ್ರೇಮವೆಂಬ ನಾಮಕರಣವೇಕೆ ?

ಸುಮಿ, ನನ್ನ ಜೀವನದಲ್ಲಿ ಪ್ರೇಮಕ್ಕೊಂದು ಸ್ಥಾನವಿದ್ದರೆ ಅದೋ ನೋಡು ಕಿಟಕಿಯಾಚೆ ಹೆಪ್ಪುಗಟ್ಟಿ ನಿಂತಿದೆಯಲ್ಲ ಆ ಪ್ರಕೃತಿಯಲ್ಲಿದೆ. ಜೆ.ಕೆ. ಮಾತುಗಳೇ ನನ್ನನ್ನು ಬೇಟೆಯಾಡುತ್ತಿವೆ – ಪ್ರೇಮ, ಸೌಂದರ್ಯ, ಹಿಡಿತಕ್ಕೆ ಸಿಗದ ಇಂದ್ರಿಯಾತೀತ ಅನುಭವಗಳು'. ಮಸುಕಾಗುತ್ತಿರುವ ದಿಗಂತ, ಹಗಲು ಸತ್ತು, ಇರುಳು ಚರಮಗೀತೆ ಹಾಡುವ ಹೊತ್ತು. ಸಂಜೆಯ ಬಣ್ಣಗಳೆಲ್ಲ ಕ್ಷಣಿಕ ಕುಣಿತದ ನಂತರ ದಿಗಂತದಾಚೆಗೆ ಜಾರಿವೆ. ದೂರದಿಂದಲೇ ಒಂಟಿಯಾದ ಹಕ್ಕಿಯ ಕಾತರದ ಕೂಗು. ಅದೇ ತೆಳುವಾದ ತಂಗಾಳಿ, ಮಿನುಗುತ್ತಿರುವ "ವೀನಸ್'. ಅಲ್ಲೊಂದು ಇಲ್ಲೊಂದು ಆಲಸ್ಯದಿಂದ ತೇಲಾಡೊ ಮೋಡಗಳು, ಮೆಲ್ಲ ಮೆಲ್ಲನ ಕಣ್ಣು ಬಿಡುವ ಪುಡಿ ನಕ್ಷತ್ರಗಳು... ಇವೆ... ಇಷ್ಟೇ ನನ್ನ ಜಗತ್ತು. 'ಸ್ನೇಹ ಸತ್ಯ ಸೌಂದರ್ಯ' ಏನಿದ್ದರೂ ಅಲ್ಲಿ ಆ ಪ್ರಕೃತಿಯಲ್ಲಿ ಮಾತ್ರ ಉಳಿದಿವೆ.

ಏನೋ ವೇದಾಂತಿಯಂತೆ, ನಿನ್ನ ಭಾವನೆಗಳನ್ನೆಲ್ಲ ಶುದ್ಧ ಒರಟನಂತೆ ಮುರುಟು ತಿರುವನೆಂದುಕೊಳ್ಳಬೇಡ. ನೀನು ಎಷ್ಟೋ ಬಾರಿ ಬರೆದಿದ್ದೆ–ಆಲ್ಬರ್ಟ್ ಕಾಮು, ಸಾತ್ರೆ, ಜೆ.ಕೆ., ಉಮರ್ ಎಲ್ಲರ ಫಿಲಾಸಫಿ ನನ್ನ ತಲೆಯಲ್ಲಿ ದೊಂಬಿ ಎಬ್ಬಿಸಿ, ನನ್ನನ್ನು ವಿಚಿತ್ರ ವೇದಾಂತಿಯಾಗಿಸಿದೆ' ಎಂದ. ಯಾವ ಪುಸ್ತಕವೂ ನನ್ನಲ್ಲಿ ಯಾವ ಪರಿಣಾಮವನ್ನೂ ಬೀರಿಲ್ಲ. ನೋಡು ಸುಮಿ, ಈ ತತ್ವಜ್ಞಾನ ಪುಸ್ತಕಗಳಿಗಿಂತ ಹೆಚ್ಚು ತಿಳಿಯದು ಜೀವನದ ಅನುಭವದಿಂದ, ಪ್ರತಿಯೊಂದೂ ಸ್ವಾನುಭವವಾಗಬೇಕಿಲ್ಲ ನಿಜ ಜೀವನವನ್ನೇಕಿಷ್ಟು ಆಳವಾಗಿ ತೆಗೆದುಕೊಳ್ಳಬೇಕು ಎಂದು ಕೇಳಿದ್ದೆ. ಜೀವನದ ಅರ್ಥವೇ ಆಳವಾಗಿದೆ. ಹಗುರವಾಗಿ ಹಾರಿ ಹೋದವರು ಜೀವನವನ್ನು ಬಹಳಷ್ಟು ಅರಿತಿಲ್ಲ. ನಾನು ಹೀಗೆಲ್ಲ ಬರೆದರೆ ನಿನಗೆ ಗ್ರೀಕ್ ಅಂಡ್ ಲ್ಯಾಟಿನ್ ಆಗುತ್ತೆ. ನನ್ನ ವಿಚಾರ, ವಿಮರ್ಶೆ, ವಿಶ್ಲೇಷಣೆ ಎಲ್ಲ ನಿನ್ನ... ತಲೆಗೆ ತುರುಕಬೇಕೆಂದಿಲ್ಲ, ಅದು ಆಗುವ ಮಾತೂ ಅಲ್ಲ. ಆದರ–ಸ್ನೇಹ ಸ್ವಾರ್ಥವಾಗಬಾರದಲ್ಲ. ನಿನ್ನ ಸ್ನೇಹದಲ್ಲಿ ಯಾವುದೋ ಕಾಣದ ಶಾಂತಿ ನೆಮ್ಮದಿ ದೊರಕಿರಬಹುದು. ಅವೇ ಸುಖದ ಕ್ಷಣಗಳನ್ನು ಶಾಶ್ವತವಾಗಿಸಿಕೊಳ್ಳುವ ಹಟವೇಕೆ ಬೇಕು. ಕ್ಷಣಕ್ಷಣಕ್ಕೂ ರಂಗು ಬದಲಾಗುವ ಈ ರಂಗದಲ್ಲಿ ಶಾಶ್ವತ ಯಾವುದು...? ನೀನೂ... ನಾನೂ... ಈ ಪ್ರೇಮ.... ಪ್ರೀತಿ.... ಪ್ರತಿಯೊಂದೂ ಸುಳ್ಳು. ಮನುಷ್ಯನ ಮೂಲಭೂತ ವಿಕೃತ ಮನೋಭಾವಗಳಿಗೆ, ಪ್ರೇಮದ ಮುಖವಾಡ ತೊಡಿಸಿ ಕುಣಿವ ಯಕ್ಷಗಾನ ಈ ಬದುಕು ಸುಮಿ, ನಾ ಬೆಳೆದದ್ದೇ ಸಾಮರಸ್ಯವಿಲ್ಲದ ಸಂಸಾರದಲ್ಲಿ ಅದೊಂದು ವಿರಸದ ಕೊಚ್ಚೆಯಲ್ಲೇ ಹರಿದ ಕಾಗದದ ದೋಣಿ, ಯಾವ ಸಮೀಕರಣಕ್ಕೂ ಜಗ್ಗದ ಸಮಸ್ಯೆಗಳು!

ಇದು ನನ್ನನ್ನು ಶುದ್ದ ಒರಟಾಗಿಸಿದವು. ಸಂಬಂಧಗಳಲ್ಲ ಯಾಂತ್ರಿಕ ಅಷ್ಟೆ. ಬಿಡಿಸಿಕೊಳ್ಳಲು ಸಾಧ್ಯವಾಗದಾಗ ಅವಕ್ಕೆ ವಾತ್ಸಲ್ಯದ ಸೂರು ಕಟ್ಟಿ, ಕುಣಿಯೋದು ಆತ್ಮವಂಚನೆ.

ಹೀಗೆ ನಾನೂ ಬೆಳದೆ, ಅಪ್ಪ, ಅಮ್ಮ, ಅಕ್ಕ, ತಂಗಿಯರ ಪ್ರೇಮವೆಂಬ ಭ್ರಮೆಯಲ್ಲಿ ವರುಷಗಳೇ ಉರುಳಿದವು. ಅವರವರ ಹಾದಿಯಲ್ಲಿ ಅವರವರ ಸುಖದ ದಿಕ್ಕಿನಲ್ಲಿ ಎಲ್ಲ ಪುರ್ರನೆ ಹಾರಿದ ಹಕ್ಕಿಗಳು. ಇನ್ನೂ ನೆನಪಿದೆ. ದೂರದ ಈ ಊರಿಗೆ ಹೊರಟು ನಿಂತಾಗ ಅಮ್ಮನನ್ನೂ ಕರೆತರುವ ಯೋಚನೆ ಇತ್ತು. ಆದರೆ... ಅಕ್ಕನ ಮಗುವಿನ ಲಾಲನೆಯಲ್ಲಿ ಸ್ವರ್ಗ ಸುಖ ಕಂಡ ಅವಳಿಗೆ ನನ್ನೊಡನೆಯ ಬದುಕು ಬೇಸರದ ಸಾಗರ. ನಾ ಬಲವಂತ ಮಾಡಲಿಲ್ಲ ಬದಲು ಬದುಕಿನ ಬಗ್ಗೆ ನನಗಿದ್ದ ಭಾವನೆಗಳಲ್ಲಿ ಬದಲಾದವು. ನಂತರವೂ ಅಪ್ಪ, ಅಮ್ಮ, ಅಪ್ಪ ಸಂಪೂರ್ಣ ಬದಲಾಗಿದ್ದರು. ಹಿರಿಯ ಮಗ, ಸೊಸೆ, ಮೊಮ್ಮಕ್ಕಳ ಅವರ ಪುಟ್ಟ ಪ್ರಪಂಚದಲ್ಲಿ ನಾನೊಬ್ಬ ಅನಪೇಕ್ಷಿತ ಅತಿಥಿಯಾದೆ. ಏಕೋ ತಿಳಿಯದು. ದೊಡ್ಡ ಕುಟುಂಬದಲ್ಲಿ ಕಿರಿಯವನಾಗಿ ಹುಟ್ಟಿದ್ದರ ಫಲವೇನೋ. ಸುಮಿ, ನಿನ್ನಂತ ಒಂದು ಕಾಲದಲ್ಲಿ ಪ್ರೇಮದ ಉತ್ಕೃಷ್ಟ ಕಲ್ಪನೆಯಲ್ಲಿ ವಿಹರಿಸಿದ್ದೆ. ಕಾಲೇಜು ದಿನಗಳು ನೆನಪಾಗುತ್ತವೆ. ಆ ಕಿಶೋರ ವಯಸ್ಸು, ಶೆಲ್ಲಿ, ಕೀಟ್ಸ್‌ರ  ದುರಂತ ಗೀತೆಗಳು, ಗಾಲಿಬ್, ಉಮರ್ ಖಯ್ಯಾಮ್‌ರ ಪ್ರೇಮ ಕವನಗಳು, ಹೊಸ ಲೋಕದ ಸೃಷ್ಟಿಯ ಕಾಲ. ಆದರೆ ಈಗ.... ಪ್ರೇಮ ಆಡಿ ಬೇಸತ್ತ ಆಟಿಗೆಯಂತೆ, ಯಾವ ರೀತಿಯಲ್ಲೂ ಆಕರ್ಷಿಸುವುದಿಲ್ಲ. 'ಯು ಆರ್ ಟೂ ಸ್ಮಾರ್ಟ್' ಎಂದು ನನ್ಹಿಂದೆ ಸುತ್ತುತ್ತಿದ್ದ ತಾರಾ, 'ಹುಡುಗನಿಗೆ ಸಾವಿರ ಸಂಬಳವಂತೆ' ಎಂದು ಹೆಣ್ಣು ಕೊಡಲು ಧಾವಿಸಿದ ಮಾವ, ನನ್ನೊಂದಿಗೆ ಬರಲು ನಿರಾಕರಿಸಿದ ಅಮ್ಮ, ಹೀಗೆ ಎಲ್ಲ ಮುಖಗಳಲ್ಲೂ ಕಂಡದ್ದು ಕೇವಲ ಸ್ವಾರ್ಥ ! ಎದೆಯ ತುಂಬ ಉರುಟು ಕಲ್ಲು ಹಾಕಿ ಕುಲುಕಿದ ಅನುಭವ. ನಂತರ ನಾನೇ ಕಲ್ಲಾದೆ. ಅಂದಿನ ನಲ್ಗಾವ್ಯಗಳೆಲ್ಲ ಮೂಲೆಗುಂಪಾದವು. ಉಮರನ ಮಾತು–"ನಿನ್ನೆ ಸತ್ತಿಹದೀಗ, ನಾಳೆ ಹುಟ್ಟದೆಯಿಹುದು; ಇಂದು ಸೊಗವಿರಲವನು ನೆನೆದಳುವುದೇಕೆ...?" ವೇದವಾಕ್ಯವಾಯಿತು. "ಆಡುವವನೆಸೆವಂತೆ ಬೀಳ್ವ ಚಂಡಿಗದೇಕೆ?" ಮತ್ತದೇ ಉಮರನ ಒಸಗೆ, ವೈರಾಗ್ಯದ ತುತ್ತತುದಿಗೇರಿಸಿದವು. ದುಸ್ಸಾಧ್ಯವನ್ನೂ ಸಾಧ್ಯವೆಂದು ವಾದಿಸುವ 'ಕಾಮು'ವಿನ ಅಬ್ಬರ್ಡ್ ಕತೆಗಳೇ ಆದರ್ಶವಾದವು. ನಿರ್ಮಲ ಎನ್ನುವ ಮಾತೃಪ್ರೇಮದಲ್ಲೂ 'ಈಡಿಪಸ್ ಕಾಂಪ್ಲೆಕ್ಸ್' ನಂತರ ಕಳಂಕ ಕದಕುವ ಫ್ರಾಯಿಡ್‌ನ ಸಿದ್ಧಾಂತಗಳೆಲ್ಲ ಸರಿ ಎನಿಸತೊಡಗಿತು. ನಾನೊಂದು ಅಸಂಬದ್ಧ ಕತೆಯ ನಾಯಕನಾದೆ. ಈ ಪ್ರಪಂಚವೇ ಅರ್ಥವಿಲ್ಲದ ತಾಣವಾಯ್ತು. ತಿಳಿಯಾದ ಗೃಹಸ್ಥ ಜೀವನ ಕೇವಲ 'ಸಿಲ್ಲಿ ಸೆಂಟಿಮೆಂಟಲ್, ಫೆಮಿನೈನ್' ಎನಿಸತೊಡಗಿದೆ. ಅಲ್ಲಿಗೆ ಸಂಪೂರ್ಣ ನನ್ನ ಬದುಕಿನ ದಿಕ್ಕೇ ಬದಲಾಯಿತು. ಹೀಗೆ ಸುಮಿ, ವಾಸ್ತವದ ಬಿಸಿಗೆ ಕನಸುಗಳು ಕರಗುತ್ತದೆ, ಕೊರಗುಗಳು ಇಣುಕುತ್ತವೆ. ಆದರ್ಶಗಳು ತುಳಿಯುವುದು ಎಂದೆಂದೂ ದುರಂತದ ಹಾದಿಯನ್ನೇ, ಅದು ತಿಳಿದು ಮತ್ತೇಕೆ ಮರೀಚಿಕೆಯ ಬೆನ್ನು!

ಬದುಕಿನ ಹಲವು ಘಟನೆಗಳಿಗೆ ಕಾರಣ ಹುಡುಕೋದೇ ವ್ಯರ್ಥ. ಜೀವನ 'ಹೇಗೆ?' ಅನ್ನುವುದಕ್ಕೆ ಮಾತ್ರ ಉತ್ತರಿಸಬಲ್ಲದು, 'ಏಕೆ ?" ನಿರಂತರ ನಿರುತ್ತರಗೊಂಡ ಪ್ರಶ್ನೆ. ಪ್ರತಿಘಟನೆ ಆ ಕ್ಷಣಕ್ಕಷ್ಟೇ ಸತ್ಯ. ನಂತರ ಕೇವಲ ಹಿಡಿ ನೆನಪು ಅಷ್ಟೆ, ಸುಮಿ, ಒಂದು ರೀತಿ ಒಬ್ಬ ವ್ಯಕ್ತಿಯನ್ನು 'ಪ್ಯಾರಸೈಟ್' ತರಹ ಬಿಗಿಯುವುದೇ ಪ್ರೇಮವೇ...? ಈ ಪ್ರೇಮದ 'ಆಕ್ಟೋಪಸ್' ಹಿಡಿತವೇಕೆ ? ಅದರಿಂದ ನೋವೇ ಹೆಚ್ಚು. ಬದುಕನ್ನು ಸೀಮಿತಗೊಳಿಸಲು, ಗುರಿಮುಟ್ಟಿಸಲು ನನಗಿಷ್ಟವಿಲ್ಲ. ದಿನಕ್ಕೆ ಸಾವಿರ ಹುಟ್ಟಿ ಸಾವಿರ ಸಾಯುವ, ಸಾಮಾನ್ಯರಲ್ಲಿ ಸಾಮಾನ್ಯರಂತೆ, ಅದೇ ಸವೆದ ಶಿಥಿಲ ಸಂಸಾರದ ಹಾದಿಯ ಪಯಣ ನನಗೆ ಬೇಸರ.

ನಿಂತ ನೀರಿನಂತ ಕೊಳವ ಏಕತಾನದ ಬದುಕು ಅದು. ಬಂಧನಗಳು ಕಳಚಿದಾಗ ಮಾತ್ರ ಸ್ವಾತಂತ್ರದ ಅನುಭವ. ಹುಚ್ಚು ಭಾವುಕತೆ, ಸುಳ್ಳು ನಂಬಿಕೆಯ ಬದುಕಿಗಿಂತ ಸಾವೇ ಹಿತ. ಚಿಕ್ಕವನಿದ್ದಾಗ ಅಮ್ಮ ಅಪ್ಪನನ್ನು ತೀರಾ ಹಚ್ಚಿಕೊಂಡಿದ್ದೆ. ಈಗ ದ್ವೇಷಿಸುತ್ತಿರುವುದೂ ಅಷ್ಟೇ ಸತ್ಯ. ಒಂದು ರೀತಿ ಇದೂ 'ಒಡೆದ ವ್ಯಕ್ತಿತ್ವ, ಅವರ–ನನ್ನ ಹಾದಿಗಳ ಅಂತರ ದೊಡ್ಡ ಕಂದರವಾದಾಗ ಅಲ್ಲಿ ಪ್ರೇಮ ಮೌಲ್ಯ ಕಳಕೊಂಡಿತು. ಶೆಲ್ಲಿ ಹೇಳುವಂತೆ– Joy once lost is pain'.. ಆ ಬಾಲ್ಯದ ನೆನಪುಗಳು ಇಂದು ಕಹಿಯಾಗಿ ಕಾಡುತ್ತವೆ.

ಸುಮಿ, ಭಾವನೆಗಳನ್ನು ಶೂನ್ಯದವರೆಗೆ ಡಿಸೆಕ್ಟ್ ಮಾಡಬಾರದು. ಬದುಕಿನ ತೀರಾ ಆಳಕ್ಕಿಳಿಯಬಾರದು. ಆಗ ಎಲ್ಲ ಬರಿದು. ನಿನ್ನಲ್ಲಿನ್ನೂ ಹಸಿಯಾಗಿರುವ ಭಾವುಕತೆ, ಹೃದಯವಂತಿಕೆ ನನ್ನಲ್ಲೆಂದೋ ಆರಿಹೋಗಿದೆ. ಈಗ ಕೇವಲ ವೈಜ್ಞಾನಿಕವಾಗಿ ಯೋಚಿಸಬಲ್ಲೆ. ಪ್ರತಿಯೊಂದನ್ನೂ ವಾದವಿವಾದ ತರ್ಕ, ತತ್ವಗಳ, ಸರಪಳಿಯಲ್ಲಿ ಎಳದಾಡುವೆ, ವಿಚಾರ, ವಿವಾದ ಎಂದು ಹೊಡೆದುಕೊಳ್ಳುವ ನನ್ನ ಮನಸ್ಸೊಂದು ನಿರ್ಜೀವ ಯಂತ್ರ, ಹೃದಯ ನನ್ನ 'ಎಕ್ಸರೇ' ದೃಷ್ಟಿಗೆ, ಕೇವಲ ರಕ್ತವನ್ನು ಪಂಪ್ ಮಾಡುವ ಮಷಿನ್ ಅಷ್ಟೆ.

ಬದುಕಿನಲ್ಲಿ ಹಲವರನ್ನು ಸಂಧಿಸುತ್ತೇವೆ, ಕೆಲವರನ್ನು ಒಳ್ಳೆಯವರನ್ನುತ್ತೇವೆ, ಮೆಚ್ಚುತ್ತೇವೆ. ಮೆಚ್ಚುವ ವ್ಯಕ್ತಿ ಮುದುಕನೋ ವಿವಾಹಿತನೋ ಆದಲ್ಲಿ ಅಲ್ಲಿ ಭಾತೃಪ್ರೇಮ, ಪಿತೃಪ್ರೇಮಗಳ ರೂಪಾಂತರ ಕಾಣುತ್ತೇವೆ. ಅದೇ ವ್ಯಕ್ತಿ ತರುಣನೋ ಅವಿವಾಹಿತನೂ ಆದಾಗ ಮೆಚ್ಚುಗೆ ಬೇರೊಂದೇ ದಾರಿ ತುಳಿಯುತ್ತದೆ. ಏನೀ ಮನಸ್ಸು... ಫ್ರಾಯಿಡ್‌ನ ಸಿದ್ಧಾಂತಗಳೆಲ್ಲ ಮತ್ತೊಮ್ಮೆ ಇಣುಕುತ್ತಿವೆ.

ನನ್ನೀ ಪತ್ರ ನಿರಾಶ ತರಿಸಿರಬಹುದು. ನಿನ್ನ ಯೋಚನೆ ಆತ್ಮಹತ್ಯೆಯ ಗಡಿಯನ್ನು ದಾಟಿರಬಹುದು. ಹಾಗಾಗಲೇಬೇಕಿದ್ದಲ್ಲಿ ತಪ್ಪಿಸುವ ಪ್ರಯತ್ನವೂ ಮೂರ್ಖತನ. ಯಾರಿಗಾಗಿ ಯಾರೂ ಹುಟ್ಟುವುದಿಲ್ಲ. ಯಾರೊಬ್ಬರಿಂದಲೂ ನಿಲ್ಲುವ ಉಸಿರನ್ನು ತುಂಬಲಾಗದು. ಮನುಷ್ಯ ಬದುಕುವುದೇ ತನ್ನ ಸ್ವಾರ್ಥಕ್ಕಾಗಿ, ತನ್ನ ಸುಖದ ಲೋಪವಾದಾಗ ಸಾಯಬಯಸುತ್ತಾನೆ. ಸುಮಿ, ಅತಿ ಸಂತೋಷದಲ್ಲಿರುವ ವ್ಯಕ್ತಿ ಯಾರಿಗಾಗಿಯಾದರೂ ಸಾವನ್ನು ಸ್ವಾಗತಿಸುವನೇ ಯೋಚಿಸು? ಹೀಗೇ ಭಾವನೆಗಳನ್ನೆಲ್ಲ ಡಿಸೆಕ್ಟ್ ಮಾಡುತ್ತಾ ಹೋದರೆ, ಹೇಳಿದೆನಲ್ಲ, ಕಡೆಗೆ ಉಳಿಯುವುದು ಬರೀ ಶೂನ್ಯ!

ನೀ ಇಷ್ಟು ದಿನ ತಿಳಿದದ್ದಕ್ಕಿಂತ ವಿಭಿನ್ನ ವ್ಯಕ್ತಿ ಚಿತ್ರಣ ಇಲ್ಲಿದೆ. ಇನ್ನು ನೀ ಏನು ತಿಳಿದರೂ ಚಿಂತೆಯಿಲ್ಲ. ಓಹ್! ನೋಡು ಆಗಲೆ ಮುಸುಕಿದ ಕತ್ತಲು ಮತ್ತೂ ದಟ್ಟವಾಗುತ್ತಿದೆ. ಒಂಟಿ ಹಕ್ಕಿಯ ಕೂಗು ಕ್ಷೀಣವಾಗಿ, ಕೊನೆಗೊಮ್ಮೆ ರಾತ್ರಿಯ ನೀರವತೆಯಲ್ಲಿ ಲೀನವಾಯ್ತು. 'ವೀನಸ್' ಆಗಲೇ ಮುಳುಗುತ್ತಿದೆ. ತಾರೆಗಳು ಕಾಲೆಳೆಯುತ್ತಾ ಅಂಬರದ ಹಾದಿ ಹಿಡಿದಿವೆ... ಕೊನೆಯಿಲ್ಲದ ಪಯಣ... ಆದರೂ ಅಲ್ಲೇನೋ ಆಹ್ಲಾದತೆ... "ಸ್ನೇಹ, ಸತ್ಯ, ಸೌಂದರ್ಯ".... ಅದೋ ಅಲ್ಲಿ ಆ ಪ್ರಕೃತಿಯಲ್ಲಿ.... ನಾನು... ನಾನು... ಅಸಂಬದ್ಧ ಕತಯೊಂದರ ನಾಯಕ ಮಾತ್ರ!

**ಸ್ನೇಹದಿಂದ – ಮಧುರ್**

**ಆಯ್ಕೆ : ನೇಮಿಚಂದ್ರರ ಕಥೆಗಳು**

# ಭಾಗ–2

# ಯುದ್ಧ


| | | | |
|---|---|---|---|
| 1. | ತಪಶ್ಚರಣ ನಿಶ್ಚಯಮನನಾದಂ | – | ಪಂಪ |
| 2. | ರಾಮರಾವಣರ ಯುದ್ಧ | – | ಕುವೆಂಪು |
| 3. | ಅಣ್ವಸ್ತ್ರ ಯುದ್ಧ | – | ಡಾ॥ ಜೆ. ಬಾಲಕೃಷ್ಣ |
| | ಓದು ಪಠ್ಯ | | |
| 4. | ನನ್ನ ಕತೆಯೇ ನನ್ನ ಆಯುಧ | – | ಮೂಲ – ನಾದಿಯಾ ಮುರಾದ್<br>ಅನುವಾದ – ಹೇಮಾ ಎಸ್. |

## ಆಶಯ

# ಯುದ್ಧ

ಇತಿಹಾಸ ಮಾನವನು ಸಾಧಿಸಿದ ಪ್ರಗತಿಯ ದಾಖಲೆ, ಸಾವಿರಾರು ವರ್ಷಗಳ ಆತ ಸಾಗಿ ಬಂದ ಬದುಕಿನ ಹಿನ್ನೋಟದ ಚಿತ್ರ. ಆದಿಮಾನವನ ಸಂಘರ್ಷಪೂರ್ಣ ಜೀವನಪದ್ಧತಿ ಕಾಲಕಾಲಕ್ಕೆ ಆವಿಷ್ಕಾರಗೊಳ್ಳುತ್ತಾ ಬಂದ ಅಭಿವೃದ್ಧಿಯ ಕಥೆ. ಆಧುನಿಕ ಕಾಲದ ಹೋರಾಟದಲ್ಲಿನ ಯಾಂತ್ರಿಕತೆ ಪ್ರಾಚೀನ ಯುದ್ಧಗಳಲ್ಲಿ ಇರಲಿಲ್ಲ. ಅಲ್ಲಿ ವೀರಯೋಧನ ಧೈರ್ಯ, ಸಾಹಸ, ಪರಾಕ್ರಮ, ವ್ಯಕ್ತಿಯ ವೈಯಕ್ತಿಕ ಮುಂದಾಳುತನಕ್ಕೆ ವಿಶೇಷ ಪ್ರಾಶಸ್ತ್ಯವಿತ್ತು. ಅದು ಅಪೇಕ್ಷಣೀಯವೂ ಆಗಿತ್ತು. ಪ್ರಾಚೀನ ಭಾರತೀಯ ಸಂಸ್ಕೃತಿ, ಜನಜೀವನ, ಸಾವಿರಾರು ವರ್ಷಗಳಿಂದ ಈ ಹಿನ್ನೆಲೆಯಲ್ಲಿ ಮೂಡಿಬಂದಿದೆ.

ಪ್ರಾಚೀನ ಭಾರತದಲ್ಲಿ ಆಗಾಗ ಯುದ್ಧಗಳು ನಡೆಯುತ್ತಿದ್ದುದಕ್ಕೆ ಹಲವು ಕಾರಣಗಳಿವೆ. ಸಮಾಜದಲ್ಲಿ ಬದುಕುವ ಪ್ರತಿಯೊಬ್ಬ ವ್ಯಕ್ತಿಯೂ ಆತನದೇ ಆದ ಆಲೋಚನಾ ಕ್ರಮವನ್ನು ಹೊಂದಿರುತ್ತಾನೆ. ಸಮೂಹ ಮತ್ತು ವ್ಯಕ್ತಿಯ ವೈಯಕ್ತಿಕ ಆಲೋಚನಾ ರೀತಿಗಳ ನಡುವೆ ವ್ಯತ್ಯಾಸವಿದೆ. ಮುಖ್ಯವಾಗಿ ಮಾನಸಿಕ ಸ್ಥಿತಿಯೇ ಆತನ ಎಲ್ಲಾ ಚಟುವಟಿಕೆಗಳಿಗೆ ಕಾರಣ.

ಬಲಾತ್ಕರಿಸುವ ಗುಣ ಮಾನವನ ಸಹಜ ಪ್ರವೃತ್ತಿ. ಈ ಸ್ವಭಾವವೇ ಪ್ರಾಚೀನ ಭಾರತೀಯ ಜನಾಂಗವನ್ನು ನಿಯತವಾಗಿ ಯುದ್ಧೋನ್ಮುಖಿಯನ್ನಾಗಿ ಮಾಡಿದೆ. ಪ್ರಾಚೀನರು ಯುದ್ಧವನ್ನು ಒಂದು ಪತ್ರದ ಕೆಲಸವೆಂದು ಭಾವಿಸಿದ್ದರು. ಆದ್ದರಿಂದ ಯುದ್ಧಕ್ಕೆ ಮುನ್ನ ದೇವರಿಗೆ ಕಾಣಿಕೆ ನೀಡುತ್ತಿದ್ದರು. ಕಾಣಿಕೆಯ ರೂಪದಲ್ಲಿ ಪ್ರಾಣತ್ಯಾಗ ಮಾಡುತ್ತಿದ್ದರು. ಸರ್ವಶಕ್ತನಾದ ಭಗವಂತ ಸೈನಿಕರ ಪ್ರಾಣವನ್ನು ರಕ್ಷಿಸಿ ಯುದ್ಧದ ವಿಜಯಗಳಿಸಲು ನೆರವಾಗುವನೆಂದು ಅವರು ನಂಬಿದ್ದರು.

ಪ್ರಾಚೀನ ಕರ್ನಾಟಕದ ಸಾಮಾಜಿಕ ಮೌಲ್ಯಗಳಲ್ಲಿ ಸತ್ಯ, ಶೌಚ, ಅಭಿಮಾನ, ಧರ್ಮ, ತ್ಯಾಗ ಮತ್ತು ವೀರ ಮಹತ್ತ್ವದ ಸ್ಥಾನವಿದೆ. ಈ ಮೌಲ್ಯಗಳನ್ನು ಬದುಕಿನ ಉಸಿರನ್ನಾಗಿ ಮಾಡಿಕೊಂಡು ಅತ್ಯುನ್ನತಿಯನ್ನು ಸಾಧಿಸಬೇಕೆಂಬ ಹಂಬಲ ಕನ್ನಡಿಗರದು. ಇದರಲ್ಲಿಯೂ ತ್ಯಾಗ ಮತ್ತು ವೀರಕ್ಕೆ ಅಪಾರ ಗೌರವ ಮನ್ನಣೆ. ಈ ಮೌಲ್ಯಗಳ ರಕ್ಷಣೆಗೆಂದು ಆತ್ಮಾರ್ಪಣೆ ಮಾಡಿದ ಯೋಧರ ಬದುಕು ಇಂದು ನಮ್ಮೆದುರಿದೆ.

ಯುದ್ಧವನ್ನುವುದು ಅತ್ಯಂತ ಸಂಕೀರ್ಣ ಘಟನೆ. ಹಲವು ಅಂಶಗಳು ಇದರಲ್ಲಿ ಸಮಾವೇಶಗೊಳ್ಳುತ್ತವೆ. ರಾಜಕೀಯ, ರಾಜನೀತಿ, ರಾಯಭಾರ, ಪ್ರಯಾಣ, ಗಜ, ಅಶ್ವ, ಪದಾತಿಗಳಿಗೆ ಯುದ್ಧ ಶಿಕ್ಷಣ, ಯುದ್ಧಸಿದ್ಧತೆ, ಬಯಲುಕಾಳಗ, ಕೋಟೆಯುದ್ಧ, ವಿಜಯೋತ್ಸವ, ವೀರಸ್ವರ್ಗ ಅಥವಾ ಸೋಲು ಇತ್ಯಾದಿ ಹಲವು ಅಂಶಗಳನ್ನು ಇಲ್ಲಿ ಪರಿಗಣಿಸಬೇಕಾಗುತ್ತದೆ. ಹಾಗೆ ನೋಡಿದರೆ ಪ್ರಾಚೀನ ಕರ್ನಾಟಕದಲ್ಲಿ ನಡೆದ ಹಲವು ಸಂಘರ್ಷಗಳನ್ನು ಯುದ್ಧ ಎಂದು ಹೇಳುವಂತಿಲ್ಲ. ಅವು ಅವರನ್ನು ಎರಡು ಊರುಗಳ ನಡುವೆ ನಡೆದ ದೊಡ್ಡ ಜಗಳಗಳೆನ್ನಬಹುದು. ಕೆಲವೊಮ್ಮೆ ತರುಗಳನ್ನು ಅಪಹರಿಸುವಾಗ ನಡೆದ ರಕ್ಷಣಾತ್ಮಕ ಹೊಡೆದಾಟವಾಗಿರುವ ಸಾಧ್ಯತೆಯೂ ಇದೆ. ಒಟ್ಟಿನಲ್ಲಿ ಯುದ್ಧ ನಮ್ಮ ಸಾಮಾಜಿಕ ಬದುಕಿನ ಅವಿಭಾಜ್ಯ ಅಂಗವಾಗಿದ್ದ ಸಮಯವದು.

* * *

# 1. ತಪಶ್ಚರಣ ನಿಶ್ಚಯಮನನಾದಂ

– ಪಂಪ

ಬಾಹುಬಲಿ ತನ್ನ ದಕ್ಷಿಣ
ಬಾಹುವ ಕೆಲದಲ್ಲಿ ನಿಂದ ಚಕ್ರಮನಾಗಳ್
ಸಾಹಸರಸಿಕಂ ಕಂಡೀ
ಸಾಹಸಮಂ ನೆಗಳ್ದಿನೆನ್ನೊಳಂ ಭರತೇಶಂ ॥ 1 ॥

ಕಳೆದಿಡುವುದೆ ಕಷ್ಟಂ ಭೂ
ತಳ ರಾಜ್ಯ ವಿಮೋಹಮಚಿರರುಚಿ ಸಂಚಳಮಿಂ
ತೆಳವುಗಿಡಿಸದುದು ಮನಕುಲ
ತಿಳಕನುಮಂ ಖಳಮಹೀಶರು ದವರಳವೇ ॥ 2 ॥

ಸೋದರರೊಳ್ ಸೋದರರಂ
ಕಾದಿಸುವುದು ಸುತನ ತಂದೆಯೆಡೆಯೊಳ್ ಬಿಡದು
ತ್ಪಾದಿಸುವುದು ಕೋಪಮನಳ
ವೀ ದೊರೆತನೆ ತೊಡರ್ವುದೆಂತು ರಾಜ್ಯಶ್ರೀಯೊಳ್ ॥ 3 ॥

ಪಾತಕಿಯೊಳ್ ಲಕ್ಷ್ಮಿಯೊಳತಿ
ಕಾತರಕಾಪುರುಷ ಗಣನೆಯೊಳ್ ನೆರೆಯಲ್ಕಿಂ
ತೀತನೆ ಬಗೆಗಾಂ ಪುರುತನು
ಜಾತರ ಬಗೆದುದನೆ ಬಗೆವೆನಳಿಪಂ ಬಗೆಯಂ ॥ 4 ॥

ಇನಿಯವು ಮೊದಲೊಳ್ ನಂಜಿನ
ಪನಿವೊಲ್ ಬ ರುಕೆಯ್ದೆ ಮುಳಿದು ಕೊಂದಿಕ್ಕುವುವಿಂ
ತೆನೆಯನೆ ವಿಷಯಸುಖಾಸ್ವಾ
ದನದೊಳ್ ಲಂಪಟರಿದೇಕೆಯೋ ನರಪಶುಗಳ್ ॥ 5 ॥

ಕಿವಿ ಮೆಯ್ ಕಣ್ ನಾಲಗೆ ಮೂ
ಗಿವು ಶಬ್ದ ಸ್ಪರ್ಶ ರೂಪರಸಗಂಧ ಸಮು
ದ್ಭವಸುಖದೊಳ್ ತೊಡರ್ವುದೆ ಸುಖ
ಮವಿಲ್ಲದಂದಿಲ್ಲದರ್ಕತೀಂದ್ರಿಯಮೆ ಸುಖಂ ॥ 6 ॥

ಕಿಡುವೊಡಲ ಕಿಡುವ ರಾಜ್ಯದ
ಪಡೆಮಾತುಗೊಳಲ್ಕಮೆನ್ನ ಮೆಯ್ಯಗಿದಪುದೀ
ಗಡೆ ಜೈನದೀಕ್ಷೆಯಂ ಕೊಂ
ಡಡಿಗೆ  ಗಿಸುವೆಂ ಸಮಸ್ತ ಸುರಸಮುದಯಮಂ ॥ 7 ॥

ಎಂದಿಂತು ಬಗೆದು ಭರತನ
ನೆಂದಂ ಚಕ್ರೇಶ, ಸಿಗ್ಗನು  ಮುಳಿಸಂ ನೀ
ನೆಂದಿಂಗಂ ಬಿಸುಡೀ ತ
ಮ್ಮಂದಿರೊಳಿಂತಿಂತು ಕಡ್ಡರಪ್ಪುದು, ಪೆಂಪೇ ॥ 8 ॥

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮೀ ಭಟಖಡ್ಗಮಂಡಲೋ
ತ್ಪಲವನವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
ವಲಯಮನಯ್ಯನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗಮಾಟಿಸಿದಂದು ನೆಗ ಮಾಸದೇ ॥ 9 ॥

ಅವಧರಿಸದೆ ನಿನ್ನೊಳ್ ಪಿರಿ
ದವಿನಯಮಂ ನೆಗರ್ದಿ ದೋಷಮಂ ತಪದೊಳ್ ನೀ
ಗುವೆನಸದಾಗ್ರಹಮಂ ಬಿಸು
ಡುವುದೊರ್ಮೆಗೆ ಮ  ವುದೆನ್ನ ದುರ್ವಿಳಸನಮಂ ॥ 10 ॥

ವಚನ ॥ ಎಂದು ಬಾಹುಬಲಿಕುಮಾರಂ ತಪಶ್ಚರಣ ನಿಶ್ಚಯಮನನಾದಂ

**ಆಕರ : ಆದಿಪುರಾಣ – ಪಂಪ**

# 2. ರಾಮ ರಾವಣರ ಯುದ್ಧ

– ಕುವೆಂಪು

ಬೈಗಿನಿಂದ ಬೆಳಗಾಗುವವರೆಗೂ ಪೆರಡೂರು ಮೇಳದ ಭಾಗವತರ ಆಟ ನೋಡಿ ಬಂದು, ಅಡುಗೆ ಮನೆಯ ಒಲೆಯ ಬಳಿ ಚಳಿ ಕಾಯಿಸುತ್ತ, ಕಾಫಿ ಕುಡಿಯುತ್ತ ಹರಟುತ್ತಿದ್ದೆವು. ನಮ್ಮೂರ ಕಡೆ ಬಯಲಾಟವನ್ನು ಭಾಗವತರಾಟ ಎಂದು ಕರೆಯುತ್ತಾರೆ. ರಾತ್ರಿ ನಾವು ನೋಡಿದ್ದ 'ಕಾಳಗ' ರಾಮರಾವಣರದು. ಹುಡುಗರಿಗೆ ಕಂಡಿದ್ದನ್ನೆಲ್ಲ ಬಿಡದೆ ಅನುಸರಿಸುವುದೊಂದು ಹುಚ್ಚಷ್ಟೆ! ಅದರಂತೆಯೇ ನಾವೆಲ್ಲ—ನಾನು, ತಿಮ್ಮು, ಮಾನು. ಓಬು, ಎಂಕ್ಟು, ವಾಸು, ದಾನಿ, ರಾಜಿ–ಆ ದಿನ ರಾಮರಾವಣರ 'ಕಾಳಗ' ಆಡಬೇಕೆಂದು ಮಸಲತ್ತು ಮಾಡಿದೆವು. ಹುಡುಗರ ಲೋಕದಲ್ಲಿ ಯೋಚನೆ ಮಾಡಿದ್ದೆಲ್ಲ ಆಗಿಯೇ ಆಗುತ್ತದೆ. ಕಾಫಿ ಉಪ್ಪಿಟ್ಟುಗಳನ್ನು ಬೇಗಬೇಗ ಹೊಟ್ಟೆಗೆ ಸುರಿದುಕೊಂಡು, ಮನೆಯ ಹೊರ ಅಂಗಳಕ್ಕೆ ಹೊರಟೆವು. ಅಮ್ಮ, ಚಿಕ್ಕಮ್ಮ, ಅಕ್ಕಯ್ಯ ಇವರೆಲ್ಲ 'ರಾತ್ರಿ ನಿದ್ದೆಗೆಟ್ಟಿದ್ದೀರಿ. ಮಲಗಿಕೊಳ್ಳಿ' ಎಂದು ಬಯ್ದರು. ದೊಡ್ಡವರು ಹುಡುಗರನ್ನು ತಮ್ಮಂತೆಯೆ ಎಂದು ಭಾವಿಸುವುದು ಶುದ್ಧ ತಪ್ಪು. ಅವರಿಗೆ ಆಯಾಸವಾಗಿದ್ದರೆ ನಮಗೂ ಆಯಾಸವೇ? ನಮ್ಮ ರಾಮರಾವಣರ ಯುದ್ಧದ ಮುಂದೆ ಅವರ ನಿದ್ದೆಯೇ? ಅವರ ಮಾತನ್ನು ಕಸದ ಮೂಲೆಗೆ ಒತ್ತಿ, ಹೊರ ಅಂಗಳಕ್ಕೆ ಓಡಿದೆವು. ಒಬ್ಬರನ್ನೊಬ್ಬರು ಆತುರದಿಂದ ಹರಿದುಂಬಿ ಸುತ್ತ, ಕೇಕೆಹಾಕುತ್ತ ನುಗ್ಗಿದೆವು. ರಾಜಿ ಹೊಸಲನ್ನು ಎಡವಿಬಿದ್ದವಳು, ಮೆಲ್ಲನೆ ಎದ್ದು, ಸುತ್ತಲೂ ನೋಡಿ, ಯಾರೂ ನೋಡದೆ ಇದ್ದುದರಿಂದ ಪದ್ಧತಿಯಂತೆ ಬಿಕ್ಕಿಬಿಕ್ಕಿ ಅಳುವುದನ್ನು ತಡೆದು ಗುಂಪನ್ನು ಸೇರಿಕೊಂಡಳು.

ಹೊತ್ತಾರೆಯ ಹೊತ್ತು ಮಲೆನಾಡಿನ ಹಸುರಾದ ಬೆಟ್ಟಗಳ ತುದಿಯಿಂದ ಎಳೆಬಿಸಿಲನ್ನು ಚಿಮುಕಿಸುತ್ತಿತ್ತು. ಹೊರ ಅಂಗಳದಲ್ಲಿದ್ದ ದೊಡ್ಡ ಬಸಿರಿಮರದಲ್ಲಿಯೂ ಹುಣಿಸೆಮರಲ್ಲಿಯೂ ಹಕ್ಕಿಗಳ ಹಿಂಡು ಚಿಲಿಪಿಲಿಗುಟ್ಟುತ್ತಿತ್ತು. ಹಸುಳೆ ಬಿಸಿಲು ತುಸು ದಟ್ಟವಾದ ತಳಿರ ನಡುವೆ ನುಗ್ಗಿ ಬರುತ್ತಿದ್ದುದರಿಂದ ಮರದ ನೆರಳು ಬಲೆಬಲೆಯಾಗಿತ್ತು. ಆ ಬಲೆ ನೆರಳೆ ನಮ್ಮ 'ರಂಗಸ್ಥಳ'ವಾಯಿತು. ಈಗ ನಮ್ಮ ಮನೆಗೆ ಹೋಗಿ ನೋಡಿದರೆ ಆ ಹುಣಿಸೆಮರವೂ ಮಾಯವಾಗಿದೆ, ಆ ಬಸಿರಿಮರವೂ ಮಾಯವಾಗಿದೆ. ಜೊತೆಗೆ ಅಂದು ನನ್ನೊಡನೆ ಭಾಗವತರಾಟವಾಡಿದ ಸೋದರ ಸೋದರಿಯರೂ ಅನಂತ ವಿಶ್ವದಲ್ಲಿ ಅಡಗಿ ಮಾಯವಾಗಿದ್ದಾರೆ. ಅಂದಿನ ಜನ, ಅಂದಿನ ಮನ, ಅಂದಿನ ದನ ಎಲ್ಲವೂ ಅಂತರ್ಧಾನವಾದಂತಿವೆ. 'ಹಾಳೂರು' ಆಗದಿದ್ದರೂ ಆದರ ನೆನಪು ತರುವಂತಿದೆ. ಕಾಲದ ಮಹಿಮೆ! 'ಕಾಲೋಸ್ಮಿ ಲೋಕಕ್ಷಯ ಕೃತ್' ಎಂದು ಶ್ರೀಕೃಷ್ಣ ಹೇಳಿಲ್ಲವೆ? "ಕಾಲಾಯ ತಸ್ಮೈ ನಮ:— ಆ ಕಾಲವೊಂದಿತ್ತು!

**ಆ ಕಾಲವೊಂದಿತ್ತು! ದಿವ್ಯ ತಾನಾಗಿತ್ತು! ಬಾಲ್ಯವಾಗಿತ್ತು!**
**ಮಣ್ಣು ಹೊನ್ನಾಗಿ, ಕಲ್ಲೆ ಹೂವಾಗಿ, ನೀರಮೃತವಾಗಿ.**
**ಮನೆ ಮೇರುವಾಗಿ, ಕವಿಶೈಲ ತಾನೇ ಕೈಲಾಸವಾಗಿ,**
**ಕಾಡೆ ನಂದನವಾಗಿ, ನೆಲವೆ ನಾಕವ ನಗುವ ಕಾಲವೊಂದಿತ್ತು!**
**ಆ ಕಾಲವೊಂದಿತ್ತು! ದಿವ್ಯ ತಾನಾಗಿತ್ತು! ಬಾಲ್ಯವಾಗಿತ್ತು!**

ನಾನು ಮಾತ್ರ ನನ್ನ ತಾತ ಮುತ್ತಾತರನ್ನಾದರೂ ಮರತೇನು! ಆದರೆ ಆ ಹುಣಸೆಮರ ಬಸಿರಿ ಮರಗಳನ್ನು ಮಾತ್ರ ಎಂದೆಂದಿಗೂ ಮರೆಯಲಾರೆ. ಆ ಬಸಿರಿಮರ ಹೋದುದೇ ನನಗೊಂದು ದೊಡ್ಡ ಸೋಜಿಗ! ಮಹಾ ಸಮಸ್ಯೆ ಅಂದು ನಾವು ಆ ಬಸಿರಿಮರದ ರಾಕ್ಷಸಗಾತ್ರವನ್ನು ಕಂಡು, ಅದನ್ನು ಕಡಿಯಲು ಯಾರಿಂದಲೂ ಸಾಧ್ಯವಿಲ್ಲ, ತೋಟದಾಚೆಯ ಭೂತನಿಂದಲೂ ಸಾಧ್ಯವಿಲ್ಲ ಎಂದು ಯೋಚಿಸಿ ಹಿಗ್ಗುತ್ತಿದ್ದೆವು. ಆದರೆ ವಿಧಿವಿಲಾಸ ಅಂದು ಅಸಾಧ್ಯವೆಂದು ತೋರಿದುದು ಇಂದು ಸಾಧ್ಯವಾಗಿದೆ. ಅಂದು ಸಾಧ್ಯವಾದದು ಮಾತ್ರ ಇಂದು ಅಸಾಧ್ಯವಾಗಿ ಪರಿಣಮಿಸಿದೆ!

ಆ ಹುಣಿಸೆಮರ ಬಸಿರಿಮರಗಳ ಅಡಿಯಲ್ಲಿ ಎಷ್ಟು ಸೊಗಸಾದ ಪ್ರಾತಃಕಾಲಗಳನ್ನು ಕಳೆದಿದ್ದೇವೆ! ಎಷ್ಟು ಸಾರಿ ನಮ್ಮ ಜೀವನದ ಭವಿಷ್ಯದ ಬಲೆಯನ್ನು ನಾವರಿಯದಂತೆಯೆ ನೆಯ್ದಿದ್ದೇವೆ! ಎಷ್ಟು ಸಾರಿ ಹೊಂಬಿಸಿಲಿನಲ್ಲಿ ನೆಲದ ಮೇಲೆ ಉದ್ದವಾಗಿ ಮಲಗಿದ್ದ ನಮ್ಮ ನೆಳಲನ್ನು ಅಳೆದಿದ್ದೇವೆ! ಪೂರಯಿಸದಿದ್ದುದಂತಿರಲಿ! ಎಷ್ಟು ಸಾರಿ ಒಬ್ಬರೊಬ್ಬರ ನೆಳಲಿನ ತಲೆಗಳನ್ನು ತುಳಿದು ಜಗಳವಾಡಿದ್ದೇವೆ! ಆಹಾ, ಆ ಇಂಪಾದ ಸನ್ನಿವೇಶಗಳನ್ನು ನೆನದು ಕೊಂಡರೆ, 'ಬಾಲ್ಯವೇ ಹೋದೆಯಾ!' ಎಂದು ಎದೆ ಒಳಗೊಳಗೆ ರೋಧಿಸಿ ಮರುಗದಿರುವುದಿಲ್ಲ.

ಬಸಿರಿಮರದ ನೆಳಲಿನ 'ರಂಗಸ್ಥಳ'ವನ್ನು ಸೇರಿದಮೇಲೆ ರಾಮರಾವಣರ ಯುದ್ಧಕ್ಕೆ ಮುನ್ನುಡಿಯ ರೂಪವಾದ ಸಂಭಾಷಣೆ ಪ್ರಾರಂಭವಾಯಿತು. ಮೊದಲು ಯಾರು ಯಾವ ಯಾವ ಪಾತ್ರಗಳನ್ನು ವಹಿಸಬೇಕೆಂಬ ಪ್ರಬಲವಾದ ಚರ್ಚೆ ನಡೆಯಿತು.

ತಿಮ್ಮು 'ನಾನು ರಾಮನ 'ಪಾರ್ಟ್' ಹಾಕುತ್ತೇನೆ' ಎಂದು ಹಟ ಹಿಡಿದ. ಓಬು (ಸ್ವಲ್ಪ ಕಿಲಾಡಿ) ತಿಮ್ಮು ಹೇಳಿದ್ದು ಕೇಳಿ 'ಚೋಟುದ್ದ ಇದಾನೆ ಇವನಿಗೆ ರಾಮನ ವೇಷವಂತೇ'! ಎಂದ.

ಎಂಕ್ಟು ಅದನ್ನು ಸಮ್ಮತಿಸಿ 'ಹೌದೊ. ತಿಮ್ಮಣ್ಣಯ್ಯ. ನಿನ್ನೆ ಭಾಗವತರಾಟದಲ್ಲಿ ರಾಮನ ವೇಷ ಹಾಕಿದ್ದವನು ಭೀಮನ ಹಾಂಗಿದ್ದೆ ಎಂದ.

ರಾಮನ ವೇಷದ ಹಕ್ಕು ನಿರ್ಣಯವಾಗುವ ಮುನ್ನವೇ, ವಾಸು ತಾನು ಲಕ್ಷ್ಮಣನಾಗುತ್ತೇನೆ ಎಂದ. ಓಬು ಮತ್ತೆ 'ಒಂದು ಮಣ ತಪಕಾನೂ ಇಲ್ಲ. ಲಕ್ಷ್ಮಣ ಆಗ್ತಾನಂತೆ! ನೀನು ಹನುಮಂತನ ಪಾರ್ಟಿಗೆ

ಲಾಯಖ್ಖು! ನಿನ್ನ ಮುಖಾನೂ ಹಾಂಗೇ ಇದೆ ಕಾಣೊ' ಎಂದ.

ವಾಸುವಿಗೆ ಎಂದೂ ಒರದ ಸಿಟ್ಟುಬಂದು ಓಬುವನ್ನು ಹೊಡೆಯಲು ಹೋದ. ಆದರೆ ವಾಸುವಿನ ಸಿಟ್ಟಿಗಿಂತ ಓಬುವಿನ ರಟ್ಟೆಯೇ ಬಲವಾಗಿತ್ತು. ಪೆಟ್ಟು ಬೀಳಲು ಸಿಟ್ಟು ಓಡಿತು.

ಅಷ್ಟರಲ್ಲಿ ನಾನು (ಸುಮ್ಮನಿರಬೇಕೋ ಇಲ್ಲವೋ) ರಾಜಿಯನ್ನು ಕುರಿತು 'ರಾಜಿ. ನೀನು ಲಂಕಿಣಿಯ ಪಾರ್ಟು ಹಾಕೇ' ಎಂದು ತಡೆಯಲಾರದೆ ನಕ್ಕುಬಿಟ್ಟೆ. ರಾಜಿ ತನಗೆ ಲಂಕಣಿಯ ವೇಷ ಬೇಡವೆಂದು ಹೇಳುವ ಸಿಟ್ಟಿನ ರಭಸದಲ್ಲಿ ಸಾಕ್ಷಾತ್ ಲಂಕಣೀಯೇ ಆಗಿಬಿಟ್ಟು ಬಾಯಿಗೆ ಬಂದಂತೆ ನನ್ನ ಮೇಲೆ ಬೈಗುಳದ ಮಳೆಗರೆದಳು.

ಮಾನು (ಕುಚೇಷ್ಟೆಯ ಹುಡುಗ) ರಾಜಿಯನ್ನು ಮತ್ತೂ ಕೆಣಕಬೇಕೆಂದು ಯೋಚಿಸಿ ಒಂದು ವಿಧವಾಗ ಅಣಕಿಸುವ ದನಿಯಿಂದ "ಒಹೋ, ಮತ್ತೇನು ನಿನಗೆ ಸೀತೆಯ ಪಾರ್ಟು ಕೊಡ್ತಾರೆ ಎಂದು ಹಾರೈಸಿಕೊಂಡಿದ್ದೆಯಾ? ಏನಪ್ಪಾ. ಈ ಹುಡುಗಿಯರಿಗೆ ಈಗಾಗಲೇ ಗಂಡರ ಯೋಚನೆ' ಎಂದ.

ಸೀತೆಯ ವೇಷವನ್ನು ಬಯಸಿದ ರಾಜಿಯ ಮುಖ ಆಗಲೇ ಹನುಮಂತನ ಮುಖವಾಗುತ್ತ ಇತ್ತು. ಅಷ್ಟರಲ್ಲಿ ಓಬು 'ಅವಳ ಮುಖವಾದರೂ ಚೆನ್ನಾಗಿದೆಯೇ? ತಿಮ್ಮು ನೀನೇ ಹೇಳೋ. ಅವಳ ಮುಖ ಯಾರ ವೇಷಕ್ಕೆ ಲಾಯಖ್ಖಾದುದೆಂದು' ಎಂದು ಹೇಳಿ ಕುಣಿಕುಣಿದು ನಕ್ಕ.

ತಿಮ್ಮು ಅವಳ ಮುಖದ ಕಡೆಗೆ ಸ್ವಲ್ಪ ಹೊತ್ತು ನಿಟ್ಟಿಸಿ ನೋಡಿದ ರಾಜಿ ಮುಖ ಮುಚ್ಚಿಕೊಂಡಳು. ಆದರೂ ತಿಮ್ಮು ಓಬುವಿನ ಕಡೆಗೆ ತಿರುಗಿ 'ಆಲ್ಲೋ ಒಬು, ನೀನು ಯಾವ ವೇಷ ಹಾಕ್ತೀಯೋ ಆ ವೇಷದ ತಂಗಿ ಪಾರ್ಟಿಗೆ ರಾಜಿಯೇ ಸರಿ. ಎಂದ

ಎಲ್ಲರೂ ಗೊಳ್ಳೆಂದು ಕೈಚಪ್ಪಾಳೆ ಹೊಡೆದು ನಕ್ಕರು. ಓಬುವಿಗೆ ಮುಖ ಭಂಗವಾಯಿತು. ರಾಜಿಗೂ ಮುಯ್ಯಿತೀರಿಸಿಕೊಂಡ ಹಾಗಾಗಿ ಸಮಾಧಾನವಾಯಿತು. ಕಡೆಗೆ ಎಲ್ಲರೂ ಸೇರಿ ಮಾನುವೇ ರಾಮನ ಪಾರ್ಟಹಾಕುವುದು ಎಂದು ನಿರ್ಣಯಿಸಿದೆವು. ದಾನಿಯೇ ಸೀತೆಯ ಪಾರ್ಟು ಹಾಕಬಹುದೆಂದು ಕೆಲವರು ಸೂಚನೆ ಕೊಟ್ಟರು. ಆದರೆ ನನಗೇಕೋ ಅದು ಸರಿಬೀಳಲಿಲ್ಲ. ದಾನಿಗೆ ಮಾನು ಕಕ್ಕ. ದಾನಿ ಮಾನುಗೆ ಮಗಳಾದ ಹಾಗಾಯಿತು. ಹಾಗೆಂದ ಮೇಲೆ ಮಾನು ರಾಮನ ವೇಷ ಹಾಕಿದರೆ ದಾನಿ ಸೀತೆ ವೇಷ ಹಾಕುವುದು ನನಗೆ ಸರಿಬೀಳಲಿಲ್ಲ. ಕಡೆಗೆ ಓಬು ಬಂದು ಸಮಾಧಾನ ಹೇಳಿದ: ಆಟದ ರಾಮ,

ಆಟದ ಸೀತೆ: ಆದ್ದರಿಂದ ಪರವಾ ಇಲ್ಲೆಂದು ನನಗೂ ಅವನ ಸಿದ್ಧಾಂತ ಮನಸ್ಸಿಗೆ ಒಪ್ಪಿತು. ಹುಂ ಎಂದೆ.

ಕಡೆಗೆ ಅತ್ತ ಬಿದ್ದು ಇತ್ತ  ಬಿದ್ದು ರಾವಣನ ಪಾರ್ಟ ನನ್ನ ಮೇಲೆ ಬಿತ್ತು. ನನಗೆ ಹೇಗಾದರೂ

ರಾವಣನ ವೇಷ ಬಿಟ್ಟಿಬಿಡಬೇಕೆಂದು ಆಸೆ. ಆದರಿಂದ ನನಗೆ ಒಂಬತ್ತು ತಲೆ ತಂದುಕೊಟ್ಟ ಹೊರತೂ ನಾನು ರಾವಣವಾಗುವುದೇ ಇಲ್ಲ ಎಂದು ಹಟಹಿಡಿದುಬಿಟ್ಟೆ. ಸೂತ್ರಧಾರನಾದ ಮಾನುವಂತೂ ಕಂಗೆಟ್ಟು ಹೋದ. ದಾನಿಗೂ ತುಂಬಾ ಉದ್ವೇಗ–ತನ್ನ ಸೀತೆಯ ಪಾರ್ಟು ರಾವಣನಿಲ್ಲದೆ ಎಲ್ಲಿ ನಿಂತು ಹೋಗುವುದೋ ಎಂದು.

ಓಬು ರಾವಣನಿಗೆ ಹತ್ತು ತಲೆ ಇರಲೇ ಇಲ್ಲವೆಂದು ಸಾಧಿಸಲು ಬಹಳ ಪ್ರಯತ್ನ ಪಟ್ಟ ನಾನು ಅವನಿಗೆ ಬಿಟ್ಟು ಕೊಡುವೆನೇ?

"ಕಣ್ಣಿಂಗಿ ಹೋಗಿತ್ತೇನೊ ನಿನಗೆ? ನಿನ್ನೆ ಭಾಗವತರಾಟದಲ್ಲಿ ರಾವಣನಿಗೆ ಹತ್ತು ತಲೆ ಇರಲಿಲ್ಲವೇನೋ? ಎಂದು ಕೋಪದಿಂದ ನುಡಿದೆ.

ಅಷ್ಟು ಹೊತ್ತಿಗೆ, ನನ್ನ ದುರದೃಷ್ಟಕ್ಕೆ ಸರಿಯಾಗಿ, ಹಿಂದಿನ ರಾತ್ರಿ ರಾವಣನ ವೇಷ ಹಾಕಿದ್ದ ಸೀನಪ್ಪಯ್ಯನವರು ದೂರದಲ್ಲಿ ಹೋಗುತ್ತಿದ್ದರು. ಓಬು ಅವರನ್ನು ಕಂಡು "ನೋಡಿ, ಎಲ್ಲಾ ನೋಡಿ, ನಿನ್ನೆ ಸೀನಪಯ್ಯನವರೆ ರಾವಣನಾಗಿದ್ದದ್ದು. ಅವರಿಗೆ ಹತ್ತು ತಲೆ ಇದೆಯೆ? ಒಂದೂ ಪೂರ್ತಿಯಾಗಿಲ್ಲ' ಎಂದ.

ವಾಸ್ತವವಾಗಿಯೂ ಸೀನಪ್ಪಯ್ಯನವರಿಗೆ ಒಂದು ತಲೆಯೂ ಮೂರ್ತಿಯಾಗಿರಲಿಲ್ಲ. ಏನೋ ಆಗಿ ಸ್ವಲ್ಪ ಮುಕ್ಕಾಗಿತ್ತು. ನನಗಂತೂ ಪೇಚಾಟಕ್ಕೆ ಬಂತು. ಓಬುವಿನ ಪ್ರತ್ಯಕ್ಷ ಪ್ರಮಾಣದ ಮುಂದೆ ನನ್ನಾಟ ನಡೆಯದೆ ಹೋಯಿತು. ರಾವಣನಾಗಲು ಒಪ್ಪಿಕೊಂಡೆ.

ನನಗೆ ರಾವಣನ ವೇಷ ಕೊಡಲು ಮುಖ್ಯ ಕಾರಣನಾದ ಓಬುವಿನ ಮೇಲೆ ರಚ್ಚೆಟ್ಟು ಮುಯ್ಯಿತೀರಿಸಿದೆ. ಆದು ಹೇಗೆನ್ನುವಿರೋ? ಓಬು ಹನುಮಂತನಾದರೆ ನಾನು ರಾವಣನಾಗುವೆ ಇಲ್ಲದಿದ್ದರೆ ಇಲ್ಲವೆಂದು ಹಟಹಿಡಿದೆ. ಅದರ ಒಳಗುಟ್ಟು ಬೇರೆ. ಏನು ಅನ್ನುತ್ತೀರೋ! ಓಬು ಹನುಮಂತನಾದರೆ ರಾವಣನ ಮೇಲೆ ಯುದ್ಧಕ್ಕೆ ಹೋಗುತ್ತಾನೆ. ಆಗ . ನನಗೆ ಅವನನ್ನು ಹೊಡೆಯಲು ಒಂದು ಸುಸಮಯ ದೊರಕುತ್ತದೆ ಎಂದು.

ಓಬು ಹನುಮಂತನಾದ. (ಹೊಸದಾಗೇನೂ ಆಗಲಿಲ್ಲ!) ಬಲಾತ್ಕಾರದಿಂದ ರಾಜಿಗೆ ಲಂಕಿಣಿ ಪಾರ್ಟು ಕೊಟ್ಟೆವು. ನಮ್ಮದೆಲ್ಲಾ ಒಂದೇ ಮದ್ದು: ರಾಜಿ ಲಂಕಿಣಿ ಪಾರ್ಟು ವಹಿಸಿಕೊಂಡರೆ ನಮ್ಮ ಜೊತೆ ಸೇರಿಸಿಕೊಳ್ಳುತ್ತೇವೆ: ಇಲ್ಲದಿದ್ದರೆ ಅವಳ ಸಂಗ ಬಿಟ್ಟುಬಿಡುತ್ತೇವೆ ಎಂದು ಎಲ್ಲರೂ ಹೇಳಿಬಿಟ್ಟೆವು. ಹುಡುಗರ ಭಾಗಕ್ಕೆ ಸಂಗ ಬಿಡುವುದೆಂದರೆ ಗಡಿ ಪಾರು ಮಾಡಿಸಿಕೊಳ್ಳವುದಕ್ಕಿಂತಲೂ ಕಠಿಣತರವಾದ ಶಿಕ್ಷೆ ರಾಜಿ ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಕೊಂಡಳು: ಲಂಕಿಣಿಯಾದಳು.

ರಾಮನ ಪಾರ್ಟಾಯಿತು: ಸೀತೆಯ ಪಾರ್ಟಾಯಿತು: ಹನುಮಂತ ರಾವಣರ ಪಾರ್ಟಗಳೂ ಆದುವು. ಲಂಕಿಣಿಯೂ ಸಿಕ್ಕಿದ ಹಾಗಾಯಿತು. ನಾನು ರಾವಣ: ಮಾನು ರಾಮ ದಾಣಿ ಸೀತೆ ಓಬು ಹನುಮಂತ; ರಾಜಿ ಲಂಕಿಣಿ ಇನ್ನು ಉಳಿದವರು ಯಾರು?

ಆಗ ನಮಗೆ ವಾಲ್ಮೀಕಿ ರಾಮಾಯಣವೇ ಪ್ರಮಾಣ ಗ್ರಂಥವಾಗಿರಲಿಲ್ಲ. ಬೇಕಾದರೆ ನಮ್ಮದೇ ಒಂದು ಹೊಸ ರಾಮಾಯಣವನ್ನು ರಚಿಸುತ್ತಿದ್ದೆವು. ಏಕಿ ರಚಿಸಬಾರದು? ಕೋಟ್ಯಾಂತರ ರಾಮಾಯಣಗಳಿದ್ದುವಂತೆ. ನಮ್ಮ ರಾಮಾಯಣ ಕಳೆದುಹೋದ ರಾಮಾಯಣಗಳಲ್ಲಿ ಒಂದು!

ರಾಮಾಯಣದಲ್ಲಿ ನ್ಯಾಯವಾಗಿ ಭೀಮ ಬರುವುದಿಲ್ಲ. ಆದರೂ ಚೋಟುದ್ದ ವಾಸು ಭೀಮನಾಗುತ್ತೇನೆ ಎಂದು ಹಟಹಿಡಿದ. ನಾವು ಎಷ್ಟೆಷ್ಟೋ ಹೇಳಿದೆವು. ರಾಮಾಯಣ ಭೀಮಾಯಣವಲ್ಲವೆಂದು. ಆದರೇನು ಮಾಡುವುದು? ಅವನಿಗೆ ಭೀಮನ ಪಾರ್ಟು ಎಂದರೆ ಬಹಳ ಖುಷಿ ಎಂದೋ ಒಂದು ಸಾರಿ ಭಾಗವತರಾಟದಲ್ಲಿ ಭೀಮ ಮಂಡಕ್ಕಿ (ಪುರಿ) ಕಡಲೆ ಮುಕ್ಕುತ್ತಿದ್ದದನ್ನು ನೋಡಿಬಿಟ್ಟಿದ್ದ. ಭೀಮನ ವೇಷ ಹಾಕಿದಾಗಲೆಲ್ಲ ಕಡಲೆ ಮಂಡಕ್ಕಿ ಸಿದ್ದುವುದೆಂದೂ ಅವನ ಮಹದಾಕಾಂಕ್ಷೆ! ಆಡುವುದು ರಾಮಾಯಣವಾಗಲಿ, ಶಾಕುಂತಲವಾಗಲಿ, ಚಂದ್ರಹಾಸವಾಗಲಿ, ಮತ್ತೇನೇ ಆಗಲಿ, ವಾಸುವಂತೂ ಭೀಮನ ಪಾರ್ಟು ಹಾಕಲೇಬೇಕು!

ನಮಗೆಲ್ಲ ಒಳ್ಳೆ ರಗಳೆಗೆ ಇಟ್ಟುಕೊಂಡಿತು. ಭೀಮನನ್ನು ರಾಮ ರಾವಣರ ಯುದ್ಧದಲ್ಲಿ ಹೇಗೆ ತರುವುದು ಎಂದು ರಾಮಾಯಣದಲ್ಲಿ ಭೀಮ ಬರುವುದಿಲ್ಲ ಎಂದರೆ ವಾಸು ಕೇಳಲಿಲ್ಲ. ಅಷ್ಟಕ್ಕೇ ನಿಲ್ಲದೇ ಬಂದೇ ಬರುತ್ತದೆ ಎಂದೂ ಸಾಧಿಸಿಬಿಟ್ಟ. ನಮ್ಮಲ್ಲಿ ಯಾರೂ ರಾಮಾಯಣ ಓದಿರಲಿಲ್ಲ: ನಾವು ಆಡಿದ್ದೆ ರಾಮಾಯಣ! ಆದ್ದರಿಂದ ವಾಸು ಹೇಳಿದ್ದೇ ರಾಮಾಯಣವಾಗಬೇಕಾಗಿ ಬಂತು ಸರಿ, ಅಭಿನವ ವಾಲ್ಮೀಕಿಯಾದ ಅವನನ್ನೇ ಕೇಳಿದೆವು‒‒ರಾಮಾಯಣದಲ್ಲಿ ಭೀಮನ ವೇಷ ತರುವುದು ಹೇಗೆ ಎಂದು. ಅವನೂ ಸ್ವಲ್ಪ ಯೋಚಿಸಿದ. ಹೊಸ ಕವಿತೆ ಬರೆಯಬೇಕಾದರೆ ಪಾಪ, ಆವೇಶ ಬರಬೇಕಷ್ಟೇ! ಕಡೆಗೂ ಆವೇಶ ಬಂತು. ರಾಮ ರಾವಣರಿಬ್ಬರೂ ಯುದ್ದಕ್ಕೆ ಹೊರಡುವ ಮುಂಚೆ ಭೀಮಪೂಜೆ ಮಾಡಿ, ಬೇಕಾದ ಭಕ್ಷ್ಯ ಭೋಜ್ಯಗಳನ್ನು ನಿವೇದಿಸಬೇಕೆಂದು ವಾಸು ಸಲಹೆ ಕೊಟ್ಟ.

ಅಯ್ಯೋ ಅವನ ಮಸಣ! ಭಕ್ಷ್ಯಭೋಜ್ಯವೆಂದರೇನು? ಮಂಡಕ್ಕಿ, ಕಡಲೆ! ಅಂತೂ ಅಭಿನವವಾಲ್ಮೀಕಿಗಳು ಹೇಳುವಾಗ, ಅಲ್ಲ ಎನ್ನುವುದಕ್ಕಾದೀತೆ? ಹುಂ ಎಂದು ಸಮ್ಮತ ಕೊಟ್ಟುಬಿಟ್ಟೆವು. ಇನ್ನು ಉಳಿದವರು ಎಂಕ್ಬು, ತಿಮ್ಮು, ಅವರಿಗೆ ಪಾರ್ಟು ಕೊಡದಿದ್ದರೆ ಅವರೇನೂ ಸುಮ್ಮನಿರುವುದಿಲ್ಲ. ರಾಮಾಯಣವನ್ನೇ ನಿಲ್ಲಿಸಿಯೂ ಬಿಡಬಹುದು ಎಂಬ ಭಯ ಬೇರೆ. ಎಂಕ್ಪು ವಿಭೀಷಣನಾದ; ತಿಮ್ಮು ಕುಂಭಕರ್ಣನಾದ (ತನ್ನ ಸ್ವಭಾವಕ್ಕೆ ತಕ್ಕಂತೆ) ಅಂತೂ ರಾಮಾಯಣದಲ್ಲಿರುವ ಪಾತ್ರಗಳಿಗೆ ನಮ್ಮ ಪಾತ್ರಗಳನ್ನು ಜೋಡಿಸುವುದಕ್ಕೆ ಬದಲಾಗಿ, ನಮ್ಮ ನಮ್ಮ ಮನಸ್ಸಿಗೆ ಬಂದ ಪಾತ್ರಗಳನ್ನು ಆರಿಸಿಕೊಂಡು

ಹೊಸ ರಾಮಾಯಣ ಮಾಡಿದೆವು.

ರಾಮರಾವಣರು ಯುದ್ಧಕ್ಕೆ ಹೊರಡುವ ಮುನ್ನ 'ಭೀಮ ಪೂಜೆ'ಗೆ ಆರಂಭವಾಯಿತು.. ವಾಸು (ನಮ್ಮ ಗಾಳಿ ಭೀಮ) ಹುಣಿಸೆಯ ಮರದ ಬೇರಿನ ಮೇಲೆ ಕಲ್ಲಿನ ಮೂರ್ತಿಯಾಗಿ ಕುಳಿತುಕೊಂಡ. ರಾಮರಾವಣರು ಇಬ್ಬರೂ ಒಟ್ಟಿಗೆ ಬಂದು ಪೂಜೆ ಮಾಡಬೇಕೋ ಅಥವಾ ಬೇರೆಬೇರೆಯಾಗಿ ಬಂದು ಪೂಜೆಮಾಡಬೇಕೋ ಎಂದು ಅಭಿನವವಾಲ್ಮೀಕಿಯನ್ನು ಕೇಳಿದವು. ಭೀಮನಾಗಿದ್ದ ವಾಸು 'ಬೇರೆ ಬೇರೆಯಾಗಿಯೇ ಬಂದು ಪೂಜೆ ಮಾಡಬೇಕು' ಎಂದು ಅಪ್ಪಣೆ ಮಾಡಿದ. ಇಬ್ಬರೂ ಒಟ್ಟಿಗೆ ಬಂದು ಪೂಜೆಮಾಡಿದರೆ ನೈವೇದ್ಯ, ಎಲ್ಲಿ ಕಡಿಮೆಯಾಗುವುದೋ ಎಂದು ಅವನಿಗೆ ದೊಡ್ಡ ಭಯ. ಪೂಜೆಗೆ ಮೊದಲು ರಾಮ ಬರಬೇಕೋ? ರಾವಣ ಬರಬೇಕೋ? ಎಂದು ಕೇಳಿದೆವು. ವಾಸುವಿಗೆ ಸ್ವಲ್ಪ ರಗಳೆಗಿಟ್ಟು ಕೊಂಡಿತು; ಹಾಗೆಯೇ ಯೋಚನೆಮಾಡಿ 'ರಾವಣನೇ ಮೊದಲು ಬರಲಿ' ಎಂದ. ವನವಾಸದಲ್ಲಿದ್ದ ರಾಮನಿಗೆ ಹೆಚ್ಚಾದ ತಿಂಡಿಯ ಪದಾರ್ಥಗಳು ಸಿಕ್ಕುವುದಾದರೂ ಹೇಗೆ? ಲಂಕಾಧೀಪತಿಯಾದ ರಾವಣನಾದರೋ ರಾಕ್ಷಸ, ದೊಡ್ಡ ಹೊಟ್ಟೆ, ದೊಡ್ಡ ಕೈ, ದೊಡ್ಡ ತಟ್ಟೆ! ಆದ್ದರಿಂದ ತಿಂಡಿ ಹೆಚ್ಚಾಗಿ ಸಿಕ್ಕುವುದೆಂದು ಯೋಚಿಸಿದ.

ವಾಸುವಿನ ಅಂತರಂಗವನ್ನು ಅರಿತ ಓಬು ಒಂದು ಉಪಾಯ ಹುಡುಕಿದ. ನಾನೇ ರಾವಣನಾಗಿದ್ದೆನಷ್ಟೆ? ನನ್ನ ಕಿವಿಯ ಹತ್ತಿರ ಬಂದು ಪಿಸುಮಾತಿನಲ್ಲಿ ಒಂದೆರಡು ಕಟ್ಟಿರುವೆ. ಗೊದ್ದ, ಗೆದ್ದಲು, ಮಿಡತೆ, ಕುಂಬಾರ್ತಿ ಹುಳ ಇವುಗಳನ್ನು ನೈವೇದ್ಯಕ್ಕೆ ತೆಗೆದುಕೊಂಡ ಹೋಗುವಂತೆ ಹೇಳಿದ. ಏಕೆಂದರೆ ರಾವಣ ಮಾಂಸಾಹಾರಿಯಷ್ಟೆ! ಉಪಾಯದ ಸೂಚಿಸಿದ ಓಬವೇ ಹುಳುಗಳನ್ನೂ 'ಸಪ್ಲೈ' ಮಾಡಿದ. ರಾವಣನಾಗಿದ್ದ ನಾನು ಹುಳುಗಳನ್ನು ಎಲೆಯಲ್ಲಿ ಮುಚ್ಚಿಕೊಂಡು ಹೋಗಿ ಭೀಮದೇವರ ಎದುರು ನಿಂತೆ. ಅದು ರಾವಣ ಮಾಡುವ ಪೂಜೆಯಾಗಿದ್ದರೂ ಹನುಮಂತನಾದ ಓಬು ಹತ್ತಿರದಲ್ಲಿಯೇ ನಿಂತಿದ್ದ.

ಅವನು ಭೀಮನಾಗಿದ್ದ ವಾಸುವಿಗೆ 'ದೇವರು ಯಾವಾಗಲೂ ಕಣ್ಣು ಮುಚ್ಚಿಕೊಂಡೆ ಇರಬೇಕು' ಎಂದನು.

ವಾಸು ಕಣ್ಣುಮುಚ್ಚಿಕೊಂಡ, ರಾವಣನ 'ಪೂಜೆ'ಗೆ ಪ್ರಾರಂಭವಾಯಿತು. ನೈವೇದ್ಯವನ್ನು ದೇವರ ಮುಂದಿಟ್ಟ, ದೇವರಿಗೆ ತಿನ್ನುವಂತೆಯೂ ಹೇಳಿದ. ವಾಸು ಕಣ್ಣು ಮುಚ್ಚಿಕೊಂಡೇ ಇದ್ದ. ನಮಗೆಲ್ಲ ಅಳ್ಳೆಬಿರಿಯುವ ನಗು. ಆದರೂ ಎರಡು ಕೈಗಳಿಂದಲೂ ಬಾಯಿ ಮುಚ್ಚಿ ಹಿಡಿದುಕೊಂಡಿದ್ದೆವು. ಭೀಮದೇವನು ನೈವೇದ್ಯಕ್ಕೆ ಕೈ ಹಾಕಿದನು. ಕಣ್ಣು ಮುಚ್ಚಿಕೊಂಡಿದ್ದ ಅವನ ಚಿತ್ತಭಿತ್ತಿಯಲ್ಲಿ ತನ್ನ ಮುಂದೆ ಮಂಡಕ್ಕಿಯ ರಾಶಿಯೇ ತೋರಿರಬಹುದು! ಅವನ ಸಂತೋಷಕ್ಕೆ ಪಾರವೇ ಇಲ್ಲ!

ಓಬು ಇರುವೆಗಳನ್ನು ಸರಿಯಾಗಿ ಕೊಂದಿರಲಿಲ್ಲ. ಒಂದು ಮಿಡತೆಗೂ ಅರೆಜೀವವಿತ್ತು. ಭೀಮದೇವರಿಗೆ ತಕ್ಕ ನೈವೇದ್ಯ! ವಾಸು ಕೈಯಿಟ್ಟನೋ ಇಲ್ಲವೋ ನೋವು ಸಿಟ್ಟುಗಳಿಂದ ಒದ್ದಾಡುತ್ತಿದ್ದ ಕಟ್ಟಿರುವೆಯೊಂದು ಕಡಿಯಿತು! ಅನಾಹುತವೋ ಅನಾಹುತ! ವಾಸು ಎಲ್ಲಿಯಾದರೂ ನಿಜವಾದ ಭೀಮನೇ ಆಗಿದ್ದ ಪಕ್ಷದಲ್ಲಿ ನಮಗೆಲ್ಲ  ಏನು ಪರಿಣಾಮವಾಗುತ್ತಿತ್ತೋ ದೇವರಿಗೆ ಗೊತ್ತು! ಸ್ವಲ್ಪ ಊಹಿಸಿದರೆ ರಾಮರಾವಣರ ಯುದ್ಧವೇ ನಡೆಯುತ್ತಿರಲಿಲ್ಲ ಎನ್ನಬಹುದು. ವಾಸು ಕಿಟ್ಟನೆ ಕಿರಿಚಿಕೊಂಡು, ಕೋವಿಯ ಮದ್ದಿಗೆ ಕಿಡಿಬಿದ್ದಂತೆ  ಎದ್ದು ನಿಂತ!  ಓಬು ಬರಿಯ ಹೈಲು: ಯಾವಾಗ ಹೇಗೆ ನಡೆದುಕೊಳ್ಳಬೇಕೆಂದು ಆವನಿಗೆ ತಿಳಿಯದು. ವಾಸುವನ್ನು ಸಂಬೋಧಿಸಿ 'ಭೀಮದೇವರೇ, ಕಲ್ಲಾದ ದೇವರು ಅಲ್ಲಾಡಬಾರದು. ಕೂತುಕೊಳ್ಳಿ! ಕೂತುಕೊಳ್ಳಿ' ಎಂದು ಕೂಗಿಕೊಂಡು ನಗಲಾರಂಭಿಸಿದರು. ಭೀಮ ಗೊಳೋ ಎಂದು ಅಳಲಾರಂಭಿಸಿದ. ದಾನಿ ಸೀತೆಯಾಗಿದ್ದವಳು ಸೀತೆತನವನ್ನು ಬಿಟ್ಟು ಓಡಿಬಂದು ಭೀಮನ ಬಾಯಿ ಮುಚ್ಚಿ ಹಿಡಿದು ಅಳಬೇಡ ಎಂದು ಎಷ್ಟು ಹೇಳಿ ಕೊಂಡರೂ ಭೀಮ ಬೇರೆ ಕೇಳಲಿಲ್ಲ. ಭೀಮಗರ್ಜನೆ ಅಂತರಿಕ್ಷಕ್ಕೂ ಏರಿತು. ಇಂದ್ರನಿಗೆ ಗಾಬರಿಯಾಗಿರಬಹುದು! ರಾಮನಾಗಿದ್ದ ಮಾನುವೂ ಓಡಿಬಂದು ಭೀಮನನ್ನು ಸಂತೈಸಿದ. ರಾಜಿ ಮಾನುವಿಗೆ "ನೀನೆಂಥ ರಾಮನೋ? ಕಟ್ಟಿರುವ ಕಡಿದದ್ದನ್ನೂ ಕೂಡಾ ಫಕ್ಕನೆ  ಗುಣಮಾಡಲಾರೆ!' ಎಂದು ಹೇಳಿ 'ವಾಸಣ್ಣಯ್ಯಾ, ಅಳಬೇಡ' ಎಂದು ಸಂತವಿಟ್ಟಳು.  ಅವನೇನೋ ಬೊಬ್ಬೆ ಹಾಕಿದ! ಭೀಮನ ಕೂಗಿಗೆ ತಡೆಯುಂಟೆ? ಆಕಾಶಕ್ಕೆ ಮುಟ್ಟಿದ ಭೀಮನ ಕೂಗು ಅಡುಗೆ ಮನೆಗೆ ಮುಟ್ಟುವುದೊಂದು ದೊಡ್ಡ ಮಾತೇ? ಚಿಕ್ಕಮ್ಮ ಗಾಬರಿಯಿಂದ, ಕೈಲಿ ಹಿಡಿದುಕೊಂಡಿದ್ದ ಒಗ್ಗರಣೆ ಸೌಟನ್ನು ಹಿಡಿದುಕೊಂಡೇ ಹೊರ ಅಂಗಳಕ್ಕೆ ಬಂದರು. ಬಿಸಿಬಿಸಿಯಾದ ಸಾರಿಗೆ ಅದ್ದಿದ್ದ ಸೌಟಿನಿಂದ ಇನ್ನೂ ಹಬೆಯಾಡುತ್ತಿತ್ತು. ಪಾಪ, ಅವರಿಗೆ ನಮ್ಮ ರಾಮಾಯಣದ ಪೂರ್ವೋತ್ತರವೇನು ಗೊತ್ತು. 'ಕುಶಾಲು ಹೋಗಿ ಅಸಾಲಾಯಿತು!' ಆಟಕ್ಕೆ ಬದಲು ಅಟಮಟವಾಯಿತು. ರಾವಣನಾದ ನನ್ನನ್ನು ರಾಮ ಹೊಡೆಯುವ ಬದಲು ಚಿಕ್ಕಮ್ಮ ಗುದ್ದಿದರು. ಬಿಕ್ಕಿಬಿಕ್ಕಿ ಆಳುತ್ತಿದ್ದ ಅಭಿನವ ವಾಲ್ಮೀಕಿಯನ್ನು ಚಿಕ್ಕಮ್ಮ ಅಡುಗೆಮನೆಗೆ ಎಳೆದುಕೊಂಡು ಹೋದರು; ಅಲ್ಲಿ ಸರಿಯಾದ "ಭೀಮಪೂಜೆ'ಯಾಗಿರಬೇಕು!

ಭೀಮ ಹೋದರೆ ರಾಮಾಯಣ ನಿಲ್ಲುವುದೇ? ನಾವೇನೋ ರಾಮರಾವಣರ ಯುದ್ದ ಮಾಡಿಯೇ ಬಿಡಬೇಕೆಂದು ಹಟಸಾಧಿಸಿದೆವು. ಆಟ ಪ್ರಾರಂಭವಾಯಿತು. ಎಲ್ಲಿ? ಲಂಕೆಯಲ್ಲಲ್ಲ! ಬಸಿರಿಮರದ ಬಲೆಬಲೆಯಾದ ತಣ್ಣೆಳಲಲ್ಲಿ! ಭೀಮ ಪೂಜೋಪಾಖ್ಯಾನ ಕೊನೆಗಂಡ ಮೇಲೆ ಸೇತು ಬಂಧನವಾಯಿತು. ಸೇತು ಬಂಧನಕ್ಕೆ ರಾವಣ, ಕುಂಭಕರ್ಣ. ಲಂಕಿಣಿ ಎಲ್ಲರೂ ಸಹಾಯಮಾಢಿದರು!  ಸಮಯಕ್ಕೆ ತಕ್ಕ ಹಾಗೆ ರಾಮ ಮೊದಲಾದವರು ಮಂಗಗಳಾದರು. ಹನುಮಂತನಾದ ಓಬು ಸಣ್ಣ ಸಣ್ಣ ಪುಡಿಗಲ್ಲುಗಳನ್ನು ತರುತ್ತಿದ್ದುದನ್ನು ಕಂಡು ನಾನು "ನೀನೆಂಥಾ ಹನುಮಂತಪ್ಪ!  ವಡೆಗಳಂಥ ಕಲ್ಲು ತರುತ್ತಿದ್ದೀಯಲ್ಲ!' ಎಂದೆ.

ಹನುಮಂತ ಕೈಲಾಸ ಪರ್ವತವನ್ನು ಎತ್ತಲು ಹೋಗಿ ಕೈ ಸಿಕ್ಕಿಸಿಕೊಂಡದ್ದನ್ನು (ನಮ್ಮ ರಾಮಾಯಣದ ಪ್ರಕಾರ) ಅಭಿನಯಿಸಲೇಬೇಕೆಂದು ತಿಮ್ಮು ಹಟ ಹಿಡಿದ. ಸದ್ಯಕ್ಕೆ ಆವನೇ ಶಿವನಾದ. ಲಂಕಿಣಿಯಾಗಿದ್ದ ರಾಜಿ ಪಾರ್ವತಿಯಾದಳು. ಶಿವ ಪಾರ್ವತಿ ಇಬ್ಬರೂ ಮನೆಕಟ್ಟುವುದಕ್ಕೆ ಹೊಸದಾಗಿ ತಂದು ಹಾಕಿದ್ದ ಕಲ್ಲುಚಪ್ಪಡಿಗಳ ಮೇಲೆ ಕುಳಿತರು. ಕಲ್ಲುಚಪ್ಪಡಿಯೇ ಕೈಲಾಸವಾಯಿತು. ಹನುಮಂತ ಕೈಲಾಸದ ಬಳಿಗೆ ಹೋಗಿ ಅದನ್ನು ಎತ್ತುವಂತೆ ನಟಿಸಿ ಸಂದಿಯೊಳಗೆ ಕೈಯಿಟ್ಟನು. ಶಿವ ಕೈಲಾಸವನ್ನು ಕಾಲುಬೆರಳಿನಿಂದ ಒತ್ತಬೇಕಷ್ಟೇ! ಹಾಗೇಯೇ ತಿಮ್ಮು ಹಾಸರೆಯನ್ನು ಬಲವಾಗಿ ಒತ್ತಿ ಹಿಡಿದನು. ಓಬುವಿಗೆ ಅತಿ ನೋವಾಗಿ "ರಾಮ ರಾಮ! ರಾಮ ರಾಮ!' ಎನ್ನುತ್ತಿದ್ದವನು ಇದ್ದಕ್ಕಿದ್ದ ಹಾಗೆ ಸ್ವರ ಬದಲಾಯಿಸಿ "ತಿಮ್ಮು! ತಿಮ್ಮ! ಕೈ! ಕೈ! ಎಂದು ಕೂಗಿಕೊಂಡನು. ಬೆರಳಿನ ಚರ್ಮ ಸುಲಿದುಹೋಯಿತು. ಅದರೂ ಶಿವ ಕೈಲಾಸವನ್ನೂ ಇನ್ನೂ ಬಲವಾಗಿ ಒತ್ತಿದನು. ಹನುಮನ ಕೂಗು ನಟನೆಯೆಂದೇ ಭಾವಿಸಿ ತಿಮ್ಮು ಇನ್ನೂ ಬಲವಾಗಿ ಆದುಮಿದನು. ಓಬು ಗೊಳೋ ಎಂದು ಅತ್ತನು. ಕಣ್ಣಿನಲ್ಲಿ ನೀರೂ ಜಲಜಲನೆ ಉಕ್ಕಿ ಹರಿಯಿತು. ಬಳಿಯಲ್ಲಿ ನಿಂತಿದ್ದ ನಾವೆಲ್ಲರೂ ಆವನ ಅಭಿನಯ ಕೌಶಲವನ್ನು ನೋಡಿ ಮೆಚ್ಚಿದವು. ಅಷ್ಟು ಸಹಜವಾಗಿ ಆಳಲು ಯಾವ ನಟಶ್ರೇಷ್ಠನಿಂದಾದರೂ ಸಾಧ್ಯವಾಗುವುದೇ?

ದೇವರ ಕೃಪೆಯಿಂದ ನಮ್ಮ ರಾಮಾಯಣದಲ್ಲಿ ಕೈಲಾಸದಡಿಯಲ್ಲಿ ಕೈ ಸಿಕ್ಕಿ ಕೂಗಿದವನು ಹನುಮಂತ: ರಾವಣನಲ್ಲ! ಎಲ್ಲಿಯಾದರೂ ರಾವಣನಾಗಿದ್ದ ಪಕ್ಷದಲ್ಲಿ ಈ ಕತೆ ಬರೆಯುವುದಕ್ಕೂ ನನಗೆ ಕೈಬೆರಳು ಇರುತ್ತಿರಲಿಲ್ಲ; ನನ್ನ ಅದೃಷ್ಟ ಚೆನ್ನಾಗಿತ್ತು.

ಓಬು ಕೂಗಿದ, ತಿಮ್ಮು ಅದುಮಿದ; ಹನುಮ ಅರಚಿದ, ಶಿವ ಒತ್ತಿದ. ನಿಂತ ನಾವೆಲ್ಲ ನಟನಗೆ ಬಹಳ ಹಿಗ್ಗಿದೆವು! ನಮ್ಮ ಪುಣ್ಯಕ್ಕೆ ಸರಿಯಾಗಿ, ರಾಮಾಯಣದಲ್ಲಿ ಗಲ್ಲಿಗೆ ಹಾಕುವ ಪದ್ಧತಿ ಇರಲಿಲ್ಲವೆಂದು ತೋರುತ್ತದೆ. ಅದು ಎಲ್ಲಿಯಾದರೂ ಇದ್ದಿದ್ದರೆ ನಮ್ಮಲ್ಲಿ ಯಾವನಾದರೂ ಒಬ್ಬನ ಗತಿ ಮುಗಿಯುತ್ತಿತ್ತು. ಯಾವನಾದರೂ ಏಕೆ? ನನ್ನ ಗತಿಯೇ ಪೂರೈಸುತ್ತಿತ್ತು. ಏಕೆನ್ನುವಿರೋ? ನಾನು ರಾವಣ. ಈಗಿನ ಕಾಲದಲ್ಲಿ ಸೋತ ರಾಜರನ್ನು ಗಲ್ಲಿಗೆ ಹಾಕುವುದೇ ಧರ್ಮವಷ್ಟೇ! ಹಾಗೆಯೇ ರಾವಣನನ್ನು ಗೆದ್ದ ರಾಮನು ಸುಮ್ಮನೆ ಇರುತ್ತಿದ್ದನೇ? ರಾವಣನನ್ನು ಗಲ್ಲಿಗೆ ಹಾಕಿಸಿಯೇ ಬಿಡುತ್ತಿದ್ದ. ಅಂದರೆ ನನ್ನ ವ್ಯಾಪಾರ ಮುಗಿಯುತ್ತಿತ್ತು!

ಓಬುವಿನ ಕೂಗು ಕೇಳಿ ಅಲ್ಲೆಲ್ಲಿಯೋ ಬಳಿಯಿಂದ ಕಕ್ಕಯ್ಯ ಓಡಿ ಬಂದರು. ಬಂದವರು ದೂರ ನಿಂತು 'ಏನ್ರೋ ಅದು, ಗಲಾಟೆ! ಎಂದರು.' ತಿಮ್ಮು ಚಪ್ಪಡಿ ಕಲ್ಲನ್ನು ಒಂದಾಗಿ ಅದುಮುತ್ತ 'ಏನೂ ಇಲ್ಲ. ಕಕ್ಕಯ್ಯ! ರಾಮಾಯಣ ಆಡ್ತೇವೆ! ಹನುಮಂತನ ಕೈ ಕೈಲಾಸದಡಿ ಸಿಕ್ಕಿಕೊಂಡಿದೆ; ಶಿವ ಅಮುಕುತ್ತ ಇದ್ದಾನೆ!' ಎಂದನು. ಓಬು ಮಾತ್ರ ಅಯ್ಯಯ್ಯೋ! ಅಣ್ಣಯ್ಯ, ಸತ್ತೇ !' ಸತ್ತೇ' ಎಂದು ಕೂಗಿಕೊಂಡನು.

ಕಕ್ಕಯ್ಯ ಓಡಿಬಂದು ಕೈಲಾಸದ ಮೇಲೆ ಕುಳಿತು ದರ್ಬಾರು ಮಾಡುತ್ತಿದ್ದ ಶಿವ ಪಾರ್ವತಿಯರಿಬ್ಬರನ್ನೂ

ಈಚೆಗೆ ಎಳೆದು ಹಾಕಿ, ಕೈಲಾಸವನ್ನು ಎತ್ತಿದರು; ಓಬು ಕೈ ಕೈ ಎಳೆದುಕೊಂಡ. ಚರ್ಮ ಸುಲಿದು ಕೈಬೆರಳೆಲ್ಲ ರಕ್ತಮಯವಾಗಿತ್ತು. ಕಕ್ಕಯ್ಯ ಎಲ್ಲರಿಗೂ ಹುಣಿಸೆಯ ಬರಲಿನಿಂದ ಎರಡೆರಡು 'ಚಡಿ ಕೊಟ್ಟು' ಹನುಮಂತನ ಕೈಗೆ ಔಷಧಿ ಮಾಡಲು ಅವನನ್ನು ಎಳೆದುಕೊಂಡು ಹೋದರು. ಚಳಿಗಾಲ ಪ್ರಾತಃಕಾಲ! ಹುಣಿಸೆಯ ಬರಲಿನ ಪೆಟ್ಟು! ನೀವೇ ಊಹಿಸಿಕೊಳ್ಳಿ!

ರಾಮರಾವಣರ ಯುದ್ಧ ಇಷ್ಟಕ್ಕೇ ಪೂರೈಸಲಿಲ್ಲ. ನಾನು ಮಾನವನ್ನು ಕುರಿತು " ನೀನೆಂಥ ರಾಮನೋ1 ಕೈಲಾಗದ ರಾಮ! ನಿನ್ನ ಭಕ್ತ ಹನುಮಂತ ಒರಲಿದರೆ ನೀನು ಬಂದು ಬಿಡಿಸಬೇಕೋ ಬೇಡವೋ? ಕಲ್ಲು ನಿಂತಂತೆ ನಿಂತುಕೊಂಡು ನೋಡ್ತಾ ಇದ್ದೆ ನಿನ್ನ ದೆಸೆಯಿಂದ ಭಾಗವತರಾಟ ಆಡದಿದ್ದ ಹಾಗೂ ಆಯಿತು' ಎಂದೆ–ಪೆಟ್ಟು ಬಿದ್ದ ಸಿಟ್ಟಿನಿಂದ.

ಮಾನುಗೆ ಸಿಟ್ಟು ಬಂತು. ಮೈಮೇಲೆ ಬಿದ್ದ, ನನಗೂ ಅವನಿಗೂ ಹೊಡೆದಾಟವಾಯಿತು. ನ್ಯಾಯವಾಗಿ ಕತೆಯಂತೆ ನೋಡಿದರೆ ರಾವಣ ಸೋಲಬೇಕು. ವಾಸ್ತವವಾಗಿ ನಾನೇ ಬಲವಾಗಿದ್ದೆ; ರಾಮ ಬಿದ್ದ; ರಾವಣ ಗೆದ್ದ, ಕೆಳಗೆ ಬಿದ್ದ ಮಾನುವಿನ ಮೇಲೆ ನಾನು ಬಲವಾಗಿ ಜಗ್ಗಿಸಿ ಕೂತುಕೊಂಡೆ; ಅವನು ಅಳ ಅಳುತ್ತ 'ಲೋ ಪಟ್ಟು, ನಾನು ರಾಮ ಕಣೋ! ನೀನು ರಾವಣ ಕಣೋ! ಬಿಡೋ, ನನ್ನ ಮೇಲೆ ನೀನು ಕೂತುಕೊಳ್ಳಬಾರದು!' ಎಂದ.

ನಾನು ಇನ್ನೂ ಬಲವಾಗಿ ಜಗ್ಗಿಸಿ 'ಹೋಗೋ ನಿನ್ನ ರಾಮಾಯಣಕ್ಕೆ ಬೆಂಕಿಹಾಕ! ನನ್ನ ರಾಮಾಯಣದಲ್ಲಿ ನಾನೇ ಗೆದ್ದಿದ್ದು' ಎಂದೆ.

ಕೆಳಗೆ ಬಿದ್ದ ರಾಮನನ್ನು ಬಿಡಿಸಿಕೊಳ್ಳಲು ಲಂಕಿಣಿ, ಸೀತೆ, ಲಕ್ಷ್ಮಣ, ಕುಂಭಕರ್ಣ, ವಿಭೀಷಣ ಎಲ್ಲರೂ ಬಂದರು. ಆದರೂ ನಾನು ಬೇರೆ ಜಗ್ಗಲಿಲ್ಲ. ಕಡೆಗೆ ಕುಂಭಕರ್ಣ ಓಡಿಹೋಗಿ ನಮ್ಮಾಳು ಲಿಂಗನನ್ನು ಕರೆತಂದ. ಅವನು ರಾವಣನನ್ನು ಹಿಡಿದೆಳೆದು ರಾಮನನ್ನು ಬಿಡಿಸಿದ. ಆದರೂ ರಾವಣವಧೆಗೆ ಬದಲಾಗಿ ರಾಮವದೆ ಆಗಲಿಲ್ಲ!

ಅಂದು ನಾವಾಡಿದ ಹೊಸ ರಾಮಾಯಣದ ಪ್ರಕಾರ, ರಾಮರಾವಣರ ಯುದ್ಧದಲ್ಲಿ ರಾಮನೇ ಸೋಲುತ್ತಾನೆ! ಭೀಮನು ಕಟ್ಟಿರುವ ಕೈಲಿ ಕಡಿಸಿಕೊಂಡು ಹೋಗುತ್ತಾನೆ! ಹನುಮಂತನು ಕೈಲಾಸದ ಕೆಳಗೆ ಕೈ ಚರ್ಮ ಸುಲಿಸಿಕೊಳ್ಳುತ್ತಾನೆ! ರಾಮ ಬಿದ್ದ! ರಾವಣ ಗೆದ್ದು–ಇದೇ ನಮ್ಮ 'ರಾಮರಾವಣರ ಯುದ್ದ!'

**ಆಕರ** : ಕುವೆಂಪು ಸಮಗ್ರ ಹೊಸಗನ್ನಡ ಪ್ರಬಂಧ ಸಂಕಲನ

# 3. ಅಣ್ವಸ್ತ್ರ ಯುದ್ಧ

– ಡಾ॥ ಜೆ.ಬಾಲಕೃಷ್ಣ

ಅಣ್ವಸ್ತ್ರಗಳನ್ನು (Nuclear Weapons) ಬಳಸಿದಲ್ಲಿ ನಮಗೆ ಉಳಿಗಾಲವಿದೆಯ? 'ನಮಗೆ' ಎಂದರೆ ಭಾರತೀಯರಿಗೆ ಎಂದು ಮಾತ್ರ ಅರ್ಥವಲ್ಲ, 'ನಾವು' ಎಂದರೆ ಇಡೀ ಮಾನವಕುಲ, ಭೂಮಿಯ ಸಮಸ್ತ ಜೀವಜಾಲ. ನಮಗೆ ಅಣುಯುದ್ಧದಿಂದಾಗುವ ಪರಿಣಾಮಗಳ ಅರಿವಿದೆಯೆ? ಅಣುಯುದ್ಧದಿಂದಾಗುವ ಭೀಕರ ಪರಿಣಾಮಗಳು ನಮ್ಮೆಲ್ಲರ ಊಹೆಯನ್ನು ಮೀರಿದುದು. ಒಂದು ಅಂದಾಜಿನ ಪ್ರಕಾರ ಮಾನವ ಚರಿತ್ರೆಯಲ್ಲಿ ಸುಮಾರು ಮೂವತ್ತು ಸಾವಿರ ಯುದ್ಧಗಳು ನಡೆದಿವೆ. ಕೆಲವು ಯುದ್ಧಗಳು ಇಡೀ ದೇಶಗಳನ್ನೇ ನಿರ್ನಾಮ ಮಾಡಿವೆ. ಮಾನವಕುಲ ಅವುಗಳೆಲ್ಲದರಿಂದಲೂ ಬದುಕುಳಿದಿದೆ. ಆದರೆ ಅಣುಯುದ್ಧವಾದಲ್ಲಿ ಅದೇ ಮಾನವಚರಿತ್ರೆಯ ಕೊನೆಯ ಯುದ್ಧವಾಗಬಹುದು. ಅದರಿಂದ ಚೇತರಿಸಿಕೊಳ್ಳುವ ಪ್ರಶ್ನೆಯೇ ಇಲ್ಲ. ನಾಗರಿಕತೆಯ ಹಾಗೂ ಜೀವಸಂಕುಲದ ಇಡೀ ವ್ಯವಸ್ಥೆಯೇ ಕುಸಿದುಬೀಳುತ್ತದೆ.

ಅಮೆರಿಕದ ಪ್ರಖ್ಯಾತ ವಿಜ್ಞಾನಿ ದಿವಂಗತ ಕಾರ್ಲ್ ‚ಸೇಗನ್, 'ಯಾವುದಾದರೂ ದೇಶ ತನ್ನ ಶತ್ರು ದೇಶದ ಮೇಲೆ ಮೊದಲು ಅಣುಬಾಂಬ್ ಹಾಕಿ ತನ್ನ ವಿರುದ್ಧ ತಿರುಗೇಳದಂತೆ ಅದರ ಶಕ್ತಿಯನ್ನು ಕುಂದಿಸಲು ಯತ್ನಿಸಿದರೂ ಸಹ ಆ ಪ್ರಯತ್ನ ಆತ್ಮಹತ್ಯೆಯೇ ಸರಿ. ಏಕೆಂದರೆ ಅದರಿಂದ ವಾತಾವರಣ, ಪರಿಸರ ಹಾಗೂ ಜೀವಸಂಕುಲದ ಮೇಲಾಗುವ ಪರಿಣಾಮಗಳು ನಿರ್ನಾಮವಾದ ದೇಶಕ್ಕಷ್ಟೇ ಸೀಮಿತವಾಗಿರುವುದಿಲ್ಲ. ಬಾಂಬ್ ಹಾಕಿದ ದೇಶವೂ ಸೇರಿದಂತೆ ಇಡೀ ಭೂಮಿಯೇ ತತ್ತರಿಸಿಹೋಗುತ್ತದೆ. ಆದುದರಿಂದಲೇ ಇದನ್ನು 'MAD' (Mutually Assured Destruction) ಎನ್ನುತ್ತಾರೆ. 'ನೀನೂ ಸಾಯಿ. ನಾನೂ ಸಾಯುತ್ತೇನೆ' ಎನ್ನುವ ಹುಚ್ಚುತನ.

ಮೂರನೇ ವಿಶ್ವಯುದ್ಧವಾದಲ್ಲಿ ಅದೇ ಕೊನೆಯ ಯುದ್ಧವಾಗುತ್ತದೆ. ಏಕೆಂದರೆ ಆ ಯುದ್ಧ ನಮ್ಮ ಭೂಮಿಯ ವಿರುದ್ಧವೇ ಆಗಿರುತ್ತದೆ. ಆ ಯುದ್ಧದ ಕೊನೆಯಲ್ಲಿ ಭೂಮಿಯ ಮೇಲೆ ಎಷ್ಟು ಜನ ಬದುಕುಳಿಯುತ್ತಾರೆ ಎನ್ನುವುದು ಮುಖ್ಯವಲ್ಲ, ಆದರೆ ಬದುಕುಳಿದಿರುವವರಿಗೆ ಸಾವು ಎಷ್ಟು ಬೇಗ ಬರುತ್ತದೆ ಎಂಬುದು.

ನಮಗೆ ಇಂತಹ ಬಾಂಬ್‌ಗಳಿಂದಾಗುವ ಪರಿಣಾಮಗಳ ಅರಿವಿರುವುದು ಹಿರೋಷಿಮಾ ಮತ್ತು ನಾಗಸಾಕಿಯ ಮೇಲೆ ಹಾಕಿದ್ದ ಬಾಂಬ್‌ಗಳಿಂದಷ್ಟೆ. ಆದರೆ ಅವು ಪರಮಾಣು ಬಾಂಬ್ (Atom Bomb) ಗಳಾಗಿದ್ದವು. ಆದರೆ ಅಣುಬಾಂಬ್‌ಗಳು ಪರಮಾಣು ಬಾಂಬ್‌ಗಳಿಗಿಂತ ಸಾವಿರಾರು ಪಟ್ಟು ಹೆಚ್ಚು ವಿಧ್ವಂಸಕಾರಿಯಾಗಿವೆ.

ಮನೋವಿಜ್ಞಾನಿಗಳು ಹೇಳುವಂತೆ, ಅಣ್ವಸ್ತ್ರ ಯುದ್ಧದಲ್ಲಿ ಕೆಲವರು ಬದುಕುಳಿಯಬಹುದು. ಆದರೆ ಆಗ ಯಾವುದೇ ಸಾಮಾಜಿಕ ವ್ಯವಸ್ಥೆಯಾಗಲಿ, ಆರೋಗ್ಯ ವ್ಯವಸ್ಥೆಯಾಗಲಿ ಇರುವುದಿಲ್ಲ. ಸಾಯುತ್ತಿರುವವರಿಗೆ, ರೋಗಿಗಳಿಗೆ ಆರೈಕೆ ಮಾಡಲಾಗದೆ, ಸಾಂತ್ವನ ನೀಡಲಾಗದೆ ನೈತಿಕತೆ ಅಧೋಗತಿಗೆ ಇಳಿದಿರುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಬದುಕುವುದೇ ಅತ್ಯಂತ ಭಯಂಕರ ಅನುಭವ. ಆ ಭೀಕರತೆಯನ್ನು ಮನುಷ್ಯನ ಮನಸ್ಸು ಸಹಿಸಿಕೊಳ್ಳಲಾರದು ಹಾಗೂ ಮನುಷ್ಯನ ಮೆದುಳು ಈಗ ಆತನಿಗೆ ಸಹಾಯ ಮಾಡುವಂತೆ ಮುಂದೆ ಎಂದು ಮಾಡಲಾರದು.

ಅಣುಸ್ಫೋಟದಿಂದ ಉದ್ಭವಿಸುವ ವಿಕಿರಣ (Radiation) ಮೋಡಗಳು ಸಾವಿರಾರು ಕಿಲೋಮೀಟರ್‌ಗಳಷ್ಟು ಪಸರಿಸುತ್ತವೆ. ಭೂಮಿಯ ಮೇಲ್ಮೈನಲ್ಲಿನ ಸ್ಫೋಟ ಇನ್ನೂ ಹೆಚ್ಚಿನ ವಿಕಿರಣ ಮಲಿನತೆ ಉಂಟು ಮಾಡುತ್ತದೆ. ಈ ಮಟ್ಟದ ವಿಕಿರಣ ಮಲಿನತೆ ಇಡೀ ಜೀವರಾಶಿಗೆ ಹಾನಿಕರವಾದುದು. ಪರಿಸರದ ಸಮತೋಲನದಲ್ಲಿ ಏರುಪೇರಾಗತೊಡಗುತ್ತದೆ. ಐಯೋಡಿನ್–131 ರಂತಹ ಕೆಲವು ರೇಡಿಯೋ ಐಸೋಟೋಪ್‌ಗಳು ಚಲಿಸಬಲ್ಲವಾದುದರಿಂದ ಪ್ರದೇಶದಿಂದ ಪ್ರದೇಶಕ್ಕೆ ಅಂತರ್ಜಲ ಹಾಗೂ ಮೇಲ್ಮೈ ಜಲದ ಮೂಲಕ ಹರಡುತ್ತದೆ. ಟಂಗ್‌ಸ್ಟನ್, ವೈಟ್ರಿಯಂ, ಸ್ಟ್ರಾಂನ್ಷಿಯಂ ಮತ್ತು ರಥೆನಿಯಂ ಅನ್ನು ಸಸ್ಯಗಳು ಬೇರುಗಳು ಮೂಲಕ ಹೀರಿಕೊಳ್ಳುತ್ತವೆ. ಈ ಸಸ್ಯಗಳ ಮೂಲಕ ಪ್ರಾಣಿ, ಮನುಷ್ಯರಿಗೆ ಆಹಾರದ ಮೂಲಕ ತಲುಪಿ ಮತ್ತಷ್ಟು ಹಾನಿಯುಂಟಾಗುತ್ತದೆ.

ವಿಕಿರಣದಿಂದಾಗುವ ಉತ್ಪರಿವರ್ತನೆ (Mutation) ಬಹುತೇಕ ಎಲ್ಲ ಜೀವಿಗಳ ಮೇಲೂ ಆಗುತ್ತದೆ. ಹಾಗಾಗಿ ಬದುಕುಳಿಯುವ ಮನುಷ್ಯ ಬದಲಾದ ಸಸ್ಯ, ಪ್ರಾಣಿ ಹಾಗೂ ಸೂಕ್ಷ್ಮಾಣುಜೀವಿಗಳಿಗೆ ಹೊಂದಿಕೊಳ್ಳಲೇಬೇಕಾಗುತ್ತದೆ, ಎಂದೂ ಕಂಡರಿಯದ ಹೊಸಹೊಸ ಕಾಯಿಲೆಗಳಿಗೆ ಬಲಿಯಾಗಬೇಕಾಗುತ್ತದೆ. ವಿಕಿರಣಕ್ಕೆ ಬಲಿಯಾದಲ್ಲಿ ಕಣ್ಣಿನ ಪೊರೆ, ಶೀಘ್ರ ಮುದಿಯಾಗುವಿಕೆ, ರೋಗನಿರೋಧಕ ಶಕ್ತಿ ಕುಂಠಿತವಾಗುವುದು, ಭ್ರೂಣ ಕ್ಯಾನ್ಸರ್, ಭ್ರೂಣ ವಿಕೃತಿ. ಮಾನಸಿಕ ಕಾಯಿಲೆಗಳು...... ಹೀಗೆ ರೋಗಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಹಾಗಾಗಿ ಅಣುಯುದ್ಧದಲ್ಲಿ ಅವರಿಗರಿವಿಲ್ಲದೆ ಸತ್ತವರೇ ಅದೃಷ್ಟವಂತರು, ಬದುಕುಳಿಯುವವರ ಹಾಗೆ ನರಳಿನರಳಿ ಸಾಯಬೇಕಾಗಿರುವುದಿಲ್ಲ. ಸತ್ತವರನ್ನು ಕಂಡು ಬದುಕಿರುವವರು ಕರುಬುವಂತಾಗುತ್ತದೆ.

ವಿಕಿರಣಕ್ಕೆ ಬಲಿಯಾದ ಆಹಾರ ತಿನ್ನುವವರ ಪರಿಸ್ಥಿತಿಯೂ ಸಹ ಅಷ್ಟೇ ಘೋರವಾಗಿರುತ್ತದೆ. ವಿಕಿರಣದ ತೀಕ್ಷ್ಣತೆಯನ್ನನುಸರಿಸಿ ವಿವಿಧ ತರಹದ ಕ್ಯಾನ್ಸರ್ ರೋಗಗಳುಂಟಾಗುತ್ತವೆ – ರಕ್ತದ ಕ್ಯಾನ್ಸರ್, ಪುಪ್ಪುಸದ ಕ್ಯಾನ್ಸರ್, ಥೈರಾಯ್ಡ್ ಕ್ಯಾನ್ಸರ್, ಚರ್ಮದ ಕ್ಯಾನ್ಸರ್.... ಮುಂತಾದುವು.

ಅಣುಸ್ಫೋಟದ ನಂತರ ನಗರಗಳು, ಕಾಡುಗಳು ಹಾಗೂ ತೈಲದ ಬಾವಿಗಳು ಬೆಂಕಿಯಿಂದ ಹತ್ತಿ ಉರಿದು ಬಹಳಷ್ಟು ಪ್ರಮಾಣದ ಇಂಗಾಲದ ಮಾನಾಕ್ಸೈಡ್ ಬೂದಿ, ಇತರ ಅನಿಲಗಳು ಹಾಗೂ ಏರೋಸಾಲ್

ಕಣಗಳು ಉತ್ಪತ್ತಿಯಾಗುತ್ತವೆ. ಇವು ಭೂಮಿಯಿಂದ 5–6 ಕಿ.ಮೀ.ಗಳವರೆಗೂ ವಾತಾವರಣದಲ್ಲಿ ಏರಿ ವಾಯುಮಂಡಲ ಪ್ರವೇಶಿಸುತ್ತವೆ. ಇವು ಇಲ್ಲಿ ದೀರ್ಘಕಾಲ ಉಳಿಯುತ್ತವೆ. ಈ ಹೊಗೆ, ಧೂಳುಕವಿದು ಸೂರ್ಯನ ಬೆಳಕು ಭೂಮಿಯನ್ನು ಪ್ರವೇಶಿಸದಂತೆ ತಡೆಯುತ್ತವೆ. ಈ ರೀತಿ ಭೂಮಿಗೆ ತಲುಪುವ ಸೂರ್ಯನ ಬೆಳಕು ಮತ್ತು ಶಾಖ ಸುಮಾರು 150 ಪಟ್ಟು ಕಡಿತಗೊಳ್ಳುತ್ತದೆಂಬುದು ಒಂದು ಅಂದಾಜು. ಇದರಿಂದಾಗಿ **'ಅಣುಚಳಿಗಾಲ'** (Atomic winter) ಪ್ರಾರಂಭವಾಗಿ ಇಡೀ ಜೀವರಾಶಿ ಚಳಿಯಿಂದ ತತ್ತರಿಸುತ್ತದೆ. ಒಂದು ಅಂದಾಜಿನ ಪ್ರಕಾರ 3ರಿಂದ 4 ವಾರಗಳಲ್ಲಿ ವಾತಾವರಣದ ಉಷ್ಣತೆ 30 ಸೆ.ನಷ್ಟು ಕುಸಿದು–23"ಸೆ. ನಷ್ಟಾಗುತ್ತದೆ. ಈ ಚಳಿಗಾಲ ಹಾಗೂ ಅಂಧಕಾರ ಸ್ಫೋಟದ ತೀಕ್ಷ್ಣತೆಯನ್ನನುಸರಿಸಿ ಒಂದು ವರ್ಷಕ್ಕೂ ಹೆಚ್ಚಿನ ಸಮಯವಿರಬಹುದು ಅಥವಾ ದಶಕಗಳೇ ಮುಂದುವರಿಯಬಹುದು. ಈ ಶೀತಲ ವಾತಾವರಣ ಹಾಗೂ ಅಂಧಕಾರದಿಂದ ಸಸ್ಯಜೀವರಾಶಿಯ ದ್ಯುತಿಸಂಶ್ಲೇಷಣಾ ಕ್ರಿಯ (Photo synthesis) ನಿಂತುಹೋಗಿ ಅವು ಸಾಯತೊಡಗುತ್ತವೆ ಹಾಗೂ ಅವುಗಳ ಮೇಲೆ ಅವಲಂಬಿಸಿದ ಜೀವರಾಶಿಯೂ ಸಹ ನಿರ್ನಾಮವಾಗಿಬಿಡುತ್ತದೆ.

ಬೂದಿ ಹಾಗೂ ಧೂಳಿನ ಕಣಗಳು ಹಿಮಗಡ್ಡೆಗಳ ಮೇಲೆ ಹಾಗೂ ಹಿಮಚ್ಛಾದಿತ ಪರ್ವತಗಳ ಮೇಲೆ ಬಿದ್ದು ಮಂಜು ಕರಗಿ ನೀರಾಗಿ ನದಿಗಳ ಪ್ರವಾಹ ಹೆಚ್ಚಾಗುತ್ತದೆ. ಪ್ರವಾಹದ ಹಾದಿಯಲ್ಲಿನ ನಗರಗಳೆಲ್ಲಾ ಕೊಚ್ಚಿಹೋಗುತ್ತವೆ, ಅರಣ್ಯಗಳು ಮುಳುಗಡೆಯಾಗುತ್ತವೆ.

ಅಣುಸ್ಫೋಟದಿಂದ ಉತ್ಪಾದಿತವಾಗುವ ಸಾರಜನಕದ ಆಕ್ಸೈಡ್ ಅಣುಗಳು ವಾತಾವರಣ ಸೇರಿ ಭೂಮಿಯನ್ನು ಅಲ್ಟ್ರಾವಯಲೆಟ್ ಕಿರಣಗಳಿಂದ ರಕ್ಷಿಸುತ್ತಿರುವ ಓಜೋನ್ ಪದರದ ಶೇ.30ರಿಂದ 70ರಷ್ಟನ್ನು ನಾಶಪಡಿಸಿರುತ್ತದೆ. ನಂತರ ಯಾವ ಅಡೆತಡೆಯಿಲ್ಲದೆ ಭೂಮಿಯನ್ನು ಪ್ರವೇಶಿಸುವ ಅಲ್ಟ್ರಾವಯಲೆಟ್ ಕಿರಣಗಳು ಜೀವಿಗಳ ಜೀವಕೋಶಗಳ ನ್ಯೂಕ್ಲಿಯಿಕ್ ಆಮ್ಲಗಳು ಹೀರಿಕೊಳ್ಳುವುದರಿಂದ ಅವುಗಳಲ್ಲಿ ಕ್ಯಾನ್ಸರ್‌ನಂತಹ ಕಾಯಿಲೆಗಳು ಉಂಟಾಗುತ್ತವೆ.

ಇದರಿಂದ ಒಂದಂತೂ ಸ್ಪಷ್ಟ– ಆ ಯುದ್ಧದಲ್ಲಿ ಗೆಲ್ಲುವವರೇ ಇಲ್ಲ, ಅಣುಸ್ಫೋಟದ ತಕ್ಷಣ ಏನೇನಾಗುತ್ತದೆ? ಸ್ಫೋಟದ ಕೇಂದ್ರದಿಂದ 3 ಚದರ ಕಿಲೋಮೀಟರ್ ಒಳಗಿನ ಜನ ಸ್ಫೋಟದಿಂದ ಹೊರಸೂಸುವ ಗ್ಯಾಮಾ ಕಿರಣಗಳಿಂದಲೇ ಸತ್ತುಹೋಗುತ್ತಾರೆ. ಅವರೇ ಅದೃಷ್ಟವಂತರು. ಏಕೆಂದರೆ, ಏನಾಗಿದೆಯೆಂದು ತಿಳಿಯುವ ಮುನ್ನವೇ ಅವರಿಗೆ ಸಾವು ಬಂದಿರುತ್ತದೆ– ಕ್ಷಣಾರ್ಧದಲ್ಲಿ ಅವರ ಇಡಿ ದೇಹವೆ ಆವಿಯಾಗಿಬಿಟ್ಟಿರುತ್ತದೆ. ಸ್ಫೋಟದ ಪ್ರಖರ ಹಾಗೂ ಪ್ರಜ್ವಲ ಬೆಳಕು ಸೂರ್ಯನೂ ನಾಚುವಂತಿರುತ್ತದೆ. ಸುಮಾರು 25 ಚದರ ಕಿಲೋಮೀಟರ್ ಒಳಗಿನ ಮನುಷ್ಯರು. ಜಾನುವಾರು ಹಾಗೂ ಇತರ ಪ್ರಾಣಿಗಳು ಆ ಪ್ರಖರತೆಗೆ ಸಂಪೂರ್ಣ ಕುರುಡರಾಗಿಬಿಡುತ್ತವೆ. ತಾವು ಕಣ್ಣು ಮುಚ್ಚಿಕೊಂಡಿದ್ದರೂ ಸಹ. ಈ ಸ್ಫೋಟದ ನೋಟ 150 ಕಿ.ಮೀ. ದೂರದಿಂದ ನೋಡುವವರಿಗೆ ನಡುನೆತ್ತಿಯ ಸೂರ್ಯನಿಗಿಂತ ಹೆಚ್ಚು ಪ್ರಖರವಾಗಿ ಕಂಡು ಅವರ ಅಕ್ಷಿಪಟ ಸುಟ್ಟುಹೋಗುತ್ತದೆ. ಬಹುಶ: ಅವರು ನೋಡುವ ಕೊನೆಯ

ಪಕ್ಷ ಚಿತ್ರ ಅದೇ ಆಗಿರುತ್ತದೆ.

ಸ್ಫೋಟದ ಮೊದಲ ಗ್ಯಾಮಾ ಕಿರಣಗಳ ಸಿಡಿತದ ನಂತರ ಕ್ಷಣಾರ್ಧದಲ್ಲಿ ಅತ್ಯಂತ ಬಿಸಿಯ ಅಲೆಯು ಬೀಸುತ್ತದೆ. ನಂತರ ಕೆಲ ಕ್ಷಣಗಳಲ್ಲಿ ಅತಿಯಾದ ಒತ್ತಡದ ಅಲೆಯು ಬೀಸುತ್ತದೆ. ಅಷ್ಟೋತ್ತಿಗೆ ಬದುಕುಳಿದಿರುವ ಮನುಷ್ಯರ ಹಾಗೂ ಪ್ರಾಣಿಗಳ ಎಲ್ಲ ರಂಧ್ರಗಳಲ್ಲಿ ರಕ್ತ ಸುರಿಯಲು ಆರಂಭಿಸಿರುತ್ತದೆ. ಒತ್ತಡದ ಅಲೆಯ ಹಿಂದೆಯೇ ನೂರಾರು ಕಿ.ಮೀ. ವೇಗದ ಬಿರುಗಾಳಿ ಬೀಸತೊಡಗುತ್ತದೆ. ಇದರ ಜೊತೆ ಹಾರಿಬರುವ ವಸ್ತುಗಳ ಚೂರುಗಳು ದೇಹಗಳನ್ನು ಭೇದಿಸಿ ಗಾಯಗಳನ್ನು ಮಾಡಿರುತ್ತವೆ. ನುಜ್ಜುಗುಜ್ಜು ಮಾಡಿರುತ್ತವೆ. ಅತಿಯಾದ ವಿಕಿರಣದಿಂದಾಗಿ ಮನುಷ್ಯ ಹಾಗೂ ಪ್ರಾಣಿಗಳ ದೇಹದ ಜೀವಕೋಶಗಳಲ್ಲಿನ ಅಣು ವ್ಯವಸ್ಥೆಯೇ ಛಿದ್ರವಾಗಿ ಚರ್ಮ ಸುಲಿಯತೊಡಗುತ್ತದೆ. ಕೂದಲು ಗುಚ್ಛಗುಚ್ಛವಾಗಿ ಕಿತ್ತು ಬರುತ್ತದೆ, ವಾಂತಿಯಾಗತೊಡಗುತ್ತದೆ, ತಣಿಸಲಾಗದಂತಹ ಬಾಯಾರಿಕೆ ಕಂಡತೊಡಗುತ್ತದೆ. ಗಾಯಾಳುಗಳನ್ನು ತಕ್ಷಣ ಅಲ್ಲಿಂದ ಸ್ಥಳಾಂತರಿಸಿದರೂ ಯಾರೂ ಇರುವುದಿಲ್ಲ. ಸ್ಫೋಟದ ನಂತರ ಎಲ್ಲವೂ ಹೊತ್ತಿ ಉರಿಯತೊಡಗುತ್ತದೆ. ನಗರಗಳಲ್ಲಿನ ವಾಹನಗಳು, ಗ್ಯಾಸ್ ಸಿಲಿಂಡರ್‌ಗಳು, ಇಂಧನದ ಗೋದಾಮುಗಳು, ಪೆಟ್ರೋಲ್‌ಬಂಕ್‌ಗಳು ಎಲ್ಲವೂ ಬಾಂಬ್‌ಗಳಾಗುತ್ತವೆ. ರಸ್ತೆಗಳ ಡಾಂಬರು ಸಹ ಕರಗಿ ಬೆಂಕಿ ಹತ್ತಿಕೊಂಡು ಉರಿಯತೊಡಗುತ್ತದೆ.

**ಜನರಿಗೆ ಸಾವು ಎಲ್ಲೆಡೆ ಕಾದಿರುತ್ತದೆ.**

ಒಂದು ಮೆಗಾಟನ್ ಅಣುಸ್ಫೋಟದ (ಒಂದು ಮೆಗಾಟನ್ ಸಾಮರ್ಥ್ಯದ ಅಣ್ವಸ್ತ್ರ ಎಂದರೆ ರಾಸಾಯನಿಕ ಸ್ಫೋಟಕ ಟ್ರೈನೈಟ್ರೋ ಸ್ಫೋಟದ 10 ಲಕ್ಷ ಪಟ್ಟು ಹೆಚ್ಚು ಸಾಮರ್ಥ್ಯವಿರುವ ಅಣ್ವಸ್ತ್ರ) ಅಣಬೆಯಾಕಾರದ ಧೂಳು, ಹೊಗೆ 25 ಕಿ.ಮೀ. ಅಗಲ ಪಸರಿಸಿ ಅಷ್ಟೇ ಎತ್ತರಕ್ಕೆ ಏರುತ್ತದೆ. ಮೊದಲನೆಯ ದಿನವೆಲ್ಲಾ ವಿಕಿರಣ ಸೂಸುವ ಚೂರುಗಳ ಮಳೆಗರೆಯುತ್ತದೆ. ಬರುಬರುತ್ತಾ ಚೂರುಗಳು ಸಣ್ಣಗಾಗುತ್ತವೆ. ಆದರೂ ವಿಕಿರಣ ಸೂಸುವ ಅತಿಸಣ್ಣ ಕಣಗಳು ಬೀಳುತ್ತಲೇ ಇರುತ್ತವೆ ಹಾಗೂ ಏರೋಸಾಲ್ ಕಣಗಳು ವಾತಾವರಣದಲ್ಲೇ ಇರುತ್ತವೆ. ಈ ಕಣಗಳು ಉಸಿರಮೂಲಕ ಆರೋಗ್ಯವಂತರ ಪುಪ್ಪುಸದ ಒಳಹೊಕ್ಕರ, ಅವು ಅಲ್ಲೇ ಕೂತು ವಿಕಿರಣ ಸೂಸಿ ಕ್ಯಾನ್ಸರ್ ಉಂಟು ಮಾಡುತ್ತವೆ.

ವಾತಾವರಣದಲ್ಲಿ ಸಿಡಿಯುವ ಅಣ್ವಸ್ತ್ರ ಎಲೆಕ್ಟ್ರೋ ಮ್ಯಾಗ್ನೆಟಿಕ್ ಪಲ್ಸ್ ಉಂಟುಮಾಡುತ್ತದೆ. ಸ್ಫೋಟದ ನಂತರ ಇದು ಎಷ್ಟು ವಿಸ್ತಾರಕ್ಕೆ ಹರಡುತ್ತದೆಂದರೆ ಇದರ ಹರವು ಭಾರತ–ಪಾಕಿಸ್ತಾನಕ್ಕಿಂತ ಹೆಚ್ಚಿರಬಹುದು. ಈ ಪಲ್ಸ್‌ನಿಂದಾಗಿ ಎಲ್ಲಾ ವಿದ್ಯುತ್ ಹಾಗೂ ವಿದ್ಯುನ್ಮಾನ ಉಪಕರಣಗಳು ತಟಸ್ಥವಾಗುತ್ತವೆ. ವಿಮಾನಗಳು ತಮ್ಮ ನಿಯಂತ್ರಣ ಕಳೆದುಕೊಂಡು ನೆಲಕ್ಕುರುಳುತ್ತವೆ. ಕಂಪ್ಯೂಟರ್‌ಗಳು, ದೂರಸಂಪರ್ಕ ಉಪಕರಣಗಳು ನಿಷ್ಕ್ರಿಯವಾಗುತ್ತವೆ. ಇದೇ ಕಾರಣಕ್ಕಾಗಿಯೇ ಅಣು ಪರೀಕ್ಷೆಗಳನ್ನು ಭೂಮಿಯ ಒಳಗಡೆ ನಡೆಸುತ್ತಾರೆ.

ಹತ್ತು ಲಕ್ಷ ಜನರಿರುವ ನಗರದ ಮೇಲೆ ಒಂದು ಮೆಗಾಟನ್ ಅಣ್ವಸ್ತ್ರ ಸ್ಫೋಟಿಸಿದಲ್ಲಿ 2 ರಿಂದ

3 ಲಕ್ಷ ಜನ ತಕ್ಷಣ ಸತ್ತುಹೋಗುತ್ತಾರೆ. 3.1ರಿಂದ 3.8 ಲಕ್ಷಜನ ತೀವ್ರವಾಗಿ ಗಾಯಗೊಳ್ಳುತ್ತಾರೆ ಹಾಗೂ 3.1ರಿಂದ 4.5 ಲಕ್ಷಜನ ಸದ್ಯಕ್ಕೆ ಬದುಕುಳಿಯಬಹುದು. ಇಷ್ಟು ಜನಕ್ಕೆ ಔಷದೋಪಚಾರ ಸಾಧ್ಯವಿದೆಯೆ? ವೈದ್ಯಕೀಯ ಸಿಬ್ಬಂದಿಯೂ ಸಹ ಇತರರಂತೆ ತೊಂದರೆಗೊಳಗಾಗಿರುತ್ತಾರೆ ಹಾಗೂ ವಿಕಿರಣದ ಹಾನಿಗೊಳಗಾದವರಿಗೆ ಚಿಕಿತ್ಸೆ ನೀಡುವಾಗ ತಾವೂ ಸಹ ವಿಕಿರಣಕ್ಕೆ ಒಳಗಾಗುತ್ತಾರೆ. ಆದರೆ ಬಹಳಷ್ಟು ಗಾಯಾಳುಗಳಿಗೆ ಚಿಕಿತ್ಸೆ ಹಾಗೂ ಔಷಧಗಳು ಎಷ್ಟೇ ಸಂಖ್ಯೆ ಹಾಗೂ  ಪ್ರಮಾಣದಲ್ಲಿದ್ದರೂ ಸಾಕಾಗುವುದಿಲ್ಲ, ಗಾಯಾಳುಗಳ ಹಾಗೂ ರೋಗಿಗಳ ಸಾಗಾಣಿಕೆಗೆ ವಾಹನಗಳಿರುವುದಿಲ್ಲ, ರಸ್ತೆಗಳು ಸುಸ್ಥಿತಿಯಲ್ಲಿರುವುದಿಲ್ಲ.

ಲಕ್ಷಾಂತರ ವರ್ಷಗಳ ಜೀವ ವಿಕಾಸ ಹಾಗೂ ಸಾಂಸ್ಕೃತಿಕ ವಿಕಾಸಗಳ ಫಲ ಇಂದಿನ ಮನುಕುಲ. ಕಾಡುಗಳಲ್ಲಿ ವಾಸಿಸುತ್ತಿದ್ದ ಮಾನವ ಇಂದು "ನಾಗರಿಕ'ನಾಗಿದ್ದಾನೆ. 'ಕೇವಲ ಒಂದು ಶತಮಾನದ 'ವಿಜ್ಞಾನ'ದ ಫಲವಾಗಿ ಮನುಷ್ಯ ಎಚ್ಚರ ತಪ್ಪಿದಲ್ಲಿ 'ಕಾಡುಮನುಷ್ಯ'ನಿಗಿಂತಲೂ ಹೀನಾಯ ಪರಿಸ್ಥಿತಿಗೆ ಹಿಂದಿರುಗುತ್ತಾನೆ. ಆಗಿನ ಕಾಡುಮನುಷ್ಯನಿಗೆ 'ವಿಜ್ಞಾನ'ದ ಪರಿಕರಗಳಿರದಿದ್ದರೂ ಅವನಿಗೆ ಬೆಂಬಲವಾಗಿ ಪ್ರಕೃತಿ ಇತ್ತು. ಅಣುಯುದ್ಧದ ನಂತರ ಮನುಷ್ಯ ಉಳಿದಲ್ಲಿ ಅವನ ಒಣಗಿದ ಬಾಯಿ ತೇವ ಮಾಡಲು ತೊಟ್ಟು ನೀರೂ ಸಿಗುವುದಿಲ್ಲ.

ಈಗ ಮನುಷ್ಯನಿಗೆ ಬಹುಶಃ ಮೊಟ್ಟಮೊದಲಿಗೆ ತನ್ನ ಭವಿಷ್ಯವನ್ನು ನಿರ್ಧರಿಸುವ ಅವಕಾಶ ಸಿಕ್ಕಿದೆ– ಮಾನವನಾಗಿ ಮುಂದುವರಿಯುವುದು ಅಥವಾ ಅಣುಬಾಂಬ್‌ಗೆ ಶರಣಾಗಿ ತನ್ನನ್ನು ಒಳಗೊಂಡಂತೆ ಇಡೀ ಜೀವರಾತಿಯನ್ನು ನಾಮಾವಶೇಷ ಮಾಡುವುದು. ರಾಜಕೀಯ, ಧಾರ್ಮಿಕ ಅಥವಾ ಸೈದ್ಧಾಂತಿಕ ಸಂಘರ್ಷಗಳ ತೀರ್ಮಾನಕ್ಕೆ ಅಣ್ವಸ್ತ್ರಕ್ಕೆ ಮೊರೆಹೋಗಬೇಕೆ ಬೇಡವೇ ಎನ್ನುವುದನ್ನು ನಿರ್ಧರಿಸಬೇಕಾಗಿದೆ.

**ಶಬ್ದಾರ್ಥ**

ನಿರ್ನಾಮ = ಸಂಪೂರ್ಣ ನಾಶ, ಕುಂದಿಸಲು = ಕಡಿಮೆ ಮಾಡಲು ಮನೋವಿಜ್ಞಾನಿ = ಮನಶ್ಶಾಸ್ತ್ರಜ್ಞ, ಮನಸ್ಸಿನ ವಿಜ್ಞಾನದ ಅಧ್ಯಯನ ಮಾಡುವ ವಿಜ್ಞಾನಿ, ಪ್ರಖರ = ತೀಕ್ಷ ಬೆಳಕು, ಅಕ್ಷಿಪಟ= ಕಣ್ಣಿನಲ್ಲಿ ದೃಶ್ಯಬಿಂಬ ಮೂಡುವ ತೆರೆ, ಗೋದಾಮು= ಉಗ್ರಾಣ, ಶೇಖರಣಾ ಕೋಣೆ, ಹರವು = ವಿಸ್ತಾರ, ಕರುಬು ಅಸೂಯೆಪಡು, ನಾಮಾವಶೇಷ = ಸಂಪೂರ್ಣ ನಾಶ.

**ಪಠ್ಯ ವಿವರಣೆ**

ಯುದ್ಧಧರ್ಮ ಮತ್ತು ಅಣ್ವಸ್ತ್ರ ಬಳಕೆಯ ವೈರುಧ್ಯ. ಅಣ್ವಸ್ತ್ರದ ಸೃಷ್ಟಿಸುವ ಶೂನ್ಯಫಲದ ಭೀಕರತೆಯನ್ನು ವಿವರಿಸುವುದು.

## ಓದು ಪಠ್ಯ

# 4. ನನ್ನ ಕತೆಯೇ ನನ್ನ ಆಯುಧ

**ಮೂಲ** : ನಾದಿಯಾ ಮುರಾದ್
**ಅನುವಾದ** : ಹೇಮಾ ಎಸ್.

ಆಳುಗಳ ಮಾರುಕಟ್ಟೆ ರಾತ್ರಿಯ ಹೊತ್ತು ಶುರುವಾಗುತ್ತಿತ್ತು. ಮಿಲಿಟರಿಯವರು ಕೆಳಗೆ ನೋಂದಾಯಿಸಿಕೊಳ್ಳುತ್ತಿದ್ದ ಮಾತಾಡುತ್ತಿದ್ದ ಗದ್ದಲ ಕೇಳುತ್ತಿತ್ತು. ಮೊದಲನೆಯ ವ್ಯಕ್ತಿ ಕೋಣೆಯನ್ನು ಪ್ರವೇಶಿಸುತ್ತಿದ್ದಂತೆ ಎಲ್ಲ ಹುಡುಗಿಯರು ಕಿರುಚಿಕೊಳ್ಳಲಾರಂಭಿಸಿದರು. ಅಲ್ಲಿ ಬಾಂಬ್ ಸ್ಫೋಟವಾದಂತೆ ಗಾಬರಿಯಾಗಿದ್ದರು. ಗಾಯಗೊಂಡವರಂತೆ ವಿಲವಿಲ ಒದ್ದಾಡುತ್ತಾ ನೆಲದ ಮೇಲೆ ಉರುಳಾಡುತ್ತ ಮಾಡುತ್ತಿದ್ದರು. ಆದರೆ ಇದ್ಯಾವುದು ಆ ಮಿಲಿಟರಿಯವರನ್ನು ತಡೆಯಲಿಲ್ಲ. ಅವರು ರೂಮಿನಲ್ಲಿ ಓಡಾಡುತ್ತ ನಮ್ಮನ್ನೇ ನೋಡುತ್ತಿದ್ದರು. ನಾವು ಅವರ ಹತ್ತಿರ ಬೇಡಿಕೊಳ್ಳುತ್ತಿದ್ದೆವು. ಅಲ್ಲಿದ್ದವರಲ್ಲಿ ತುಂಬ ಸುಂದರಿಯಾಗಿದ್ದವಳ ಹತ್ತಿರ ಹೋಗಿ ಅವಳ ಕೂದಲು, ಬಾಯಿಯನ್ನು ಪರೀಕ್ಷಿಸುತ್ತಾ "ನಿನ್ನ ವಯಸ್ಸೆಷ್ಟು?" ಎಂದು ಕೇಳುತ್ತಿದ್ದರು. "ಇವರೆಲ್ಲ ಇನ್ನೂ ಕನ್ನೆಯರು ತಾನೇ?" ಕಾವಲುಗಾರನನ್ನು ಪ್ರಶ್ನಿಸುತ್ತಿದ್ದರು. ಅವನು "ಹೌದು!" ಎಂದು ತಲೆಯಾಡಿಸುತ್ತಿದ್ದ. ತನ್ನ ವಸ್ತುಗಳ ಬಗ್ಗೆ ಅವನಿಗೊಂದು ಹೆಮ್ಮೆ. ಆ ಸೈನಿಕರು ನಮ್ಮ ದೇಹವನ್ನು ಅವರಿಗಿಷ್ಟ ಬಂದೆಡೆಯಲ್ಲಿ ಮುಟ್ಟುತ್ತಿದ್ದರು. ನಮ್ಮ ಎದೆ, ಕಾಲುಗಳ ಮೇಲೇ ನಾವು ಪ್ರಾಣಿಗಳೇನೋ ಎಂಬಂತೆ ಕೈಯಾಡಿಸುತ್ತಿದ್ದರು.

ಆವರ ರೂಮಿನಲ್ಲಿ ಓಡಾಡುತ್ತಾ ಹುಡುಗಿಯರನ್ನು ಪರೀಕ್ಷಿಸುತ್ತ ಅರೇಬಿಕ್ ಅಥವಾ ಟರ್ಕಿಶ್ ಭಾಷೆಯಲ್ಲಿ ಪ್ರಶ್ನೆ ಕೇಳುತ್ತಿದ್ದರೆ ಅಲ್ಲಿ ಕೋಲಾಹಲ ಸೃಷ್ಟಿಯಾಗುತ್ತಿತ್ತು.

"ಸದ್ದು! ಶ್! ಸುಮ್ಮನಿರಿ!" ಎಂದು ಅವರು ನಮಗೆ ಗದರುತ್ತಿದ್ದರು. ಅವರು ಹಾಗನ್ನುತ್ತಿದ್ದಂತೆ ನಾವಿನ್ನೂ ಜೋರಾಗಿ ಕೂಗುತ್ತಿದ್ದೆವು. ಯಾರಾದರೂ ನನ್ನನ್ನು ಕರೆದುಕೊಂಡು ಹೋಗಲು ಬಂದರೆ ಸುಲಭಕ್ಕೆ ಅವನಿಗೆ ಅವಕಾಶ ಕೊಡುತ್ತಿರಲಿಲ್ಲ. ಜೋರಾಗಿ ಕೂಗುತ್ತಾ ನನ್ನನ್ನು ಹುಡಿಯಲು ಬಂದ ಕೈಗಳನ್ನು ದೂರ ತಳ್ಳುತ್ತಿದೆ. ಉಳಿದ ಹುಡುಗಿಯರು ಇದೇ ರೀತಿ ಮಾಡುತ್ತಿದ್ದರು. ನೆಲದ ಮೇಲೆ ಬಿದ್ದು ಉರುಳಾಡುತ್ತಿದ್ದರು ಇಲ್ಲವೇ ತಮ್ಮ ತಂಗಿಯರೋ ಅಕ್ಕಂದಿರೋ ಇಲ್ಲವೇ ಸ್ನೇಹಿತರನ್ನು ತಮ್ಮನ್ನು ಕಾಪಾಡಿ ಎನ್ನುವಂತೆ ಬಿಗಿಯಾಗಿ ಹಿಡಿದುಕೊಳ್ಳುತ್ತಿದ್ದರು.

ನಾನಲ್ಲಿದ್ದಾಗ ಮಿಲಿಟರಿಯಲ್ಲಿ ದೊಡ್ಡ ಹುದ್ದೆಯಲ್ಲಿದ್ದ ಸಲ್ವಾನ್ ಎನ್ನುವ ವ್ಯಕ್ತಿ ಹರ್ದಾನ್‌ನ ಯಾಜಿದಿ ಹುಡುಗಿಯೊಂದಿಗೆ ಬಂದ. ಅವಳ ಬದಲಿಗೆ ಮತ್ತೊಬ್ಬ ಹುಡುಗಿಯನ್ನು ಕರೆದೊಯ್ಯಲು ಅಲ್ಲಿಗೆ ಬಂದಿದ್ದ. "ಎದ್ದು ನಿಲ್ಲು" ಎಂದ. ನಾನೇಳದಿದ್ದಾಗ ಜಾಡಿಸಿ ಒದ್ದು "ಗುಲಾಬಿ ಬಣ್ಣದ ಬಟ್ಟೆಯ ಹುಡುಗಿ ನಿನಗೆ ಹೇಳಿದ್ದು ಎದ್ದೇಳು!" ಅಂದ.

ಅವನ ಕಣ್ಣುಗಳು ಅವನ ಅಗಲವಾದ ಮುಖದಲ್ಲಿ ಹೂತು ಹೋದಂತೆ ಕಾಣುತ್ತಿದ್ದವು. ಅವನ ಕಣ್ಣುಗಳನ್ನು ಕೂದಲು ಮುಚ್ಚಿಬಿಟ್ಟಿತ್ತು. ಅವನು ಗಂಡಸಿನಂತೆ ಅಲ್ಲ ರಾಕ್ಷಸನಂತೆ ಕಾಣುತ್ತಿದ್ದ.

ಉತ್ತರ ಇರಾಕಿನ ಸಿಂಜಾರ್ ಮೇಲೆ ದಾಳಿ ಮಾಡಿ ಅಲ್ಲಿನ ಹುಡುಗಿಯರನ್ನು ಲೈಂಗಿಕ ಆಳುಗಳನ್ನಾಗಿ ಮಾಡಿಕೊಳ್ಳುವುದು ಯಾರೋ ದುರಾಸೆಯ ಸೈನಿಕನ ದಿಢೀರ್ ತೀರ್ಮಾನವಾಗಿರಲಿಲ್ಲ. ಇಸ್ಲಾಮಿಕ್ ಸ್ಟೇಟ್‌ನವರು ಇದನ್ನು ಯೋಜಿಸಿದರು. ಅವರು ನಮ್ಮ ಮನೆಗಳಿಗೆ ಹೇಗೆ ಬರಬೇಕು? ಹುಡುಗಿಯೊಬ್ಬಳ ಬೆಲೆ ನಿಗದಿ ಮಾಡೋದು ಹೇಗೆ, ಯಾರಿಗೆ ಸಬಯ (ಲೈಂಗಿಕ ಆಳು)ಳನ್ನು ಒದಗಿಸಬೇಕು ಮತ್ತು ಯಾರಿಗೆ ಹಣ ನೀಡಬೇಕು ಎನ್ನುವುದನ್ನೆಲ್ಲ ಯೋಜಿಸಿದ್ದರು. ಅವರು ಈ ವಿಷಯಗಳನ್ನು ತಮ್ಮ ದಬಿಕ್ ಎನ್ನುವ ಪತ್ರಿಕೆಯಲ್ಲಿ ಹೊಸಬರನ್ನು ತಮ್ಮತ್ತ ಸೆಳೆಯುವ ಸಲುವಾಗಿ ಚರ್ಚಿಸುತ್ತಿದ್ದರು. ಇತಿಹಾಸವನ್ನು ಗಮನಿಸಿದರೆ ಅತ್ಯಾಚಾರವನ್ನು ಯುದ್ಧದಲ್ಲೊಂದು ಅಸ್ತ್ರವಾಗಿ ಬಳಸಿರುವುದನ್ನು ಕಾಣಬಹುದು. ರವಾಂಡ ಮಹಿಳೆಗೂ ನನಗೂ ಸಾಮ್ಯತೆಯಿದೆ ಎಂದು ಆ ಮೊದಲು ತಿಳಿದಿರಲಿಲ್ಲ. ಆ ಹೆಸರಿನ ದೇಶವಿರುವುದು ಕೂಡ ಗೊತ್ತಿರಲಿಲ್ಲ. ಇಂದು ನಮ್ಮ ನಡುವೆ ಕೆಟ್ಟದೊಂದು ಸಾಮ್ಯತೆಯಿದೆ. ನಾವಿಬ್ಬರೂ ಯುದ್ಧಾಪರಾಧದ ಸಂತ್ರಸ್ತರು. ಹದಿನಾರು ವರ್ಷಗಳ ಹಿಂದೆ ಸಿಂಜಾರ್‌ಗೆ ಐಸಿಸ್ ಬರುವ ಮೊದಲು ಯಾರೊಬ್ಬರೂ ಇದರ ಬಗ್ಗೆ ಮಾತಾಡಿರಲಿಲ್ಲ.

ಕೆಳಗಡೆಯ ಮಹಡಿಯಲ್ಲಿ ಒಬ್ಬಾತ ಪುಸ್ತಕದಲ್ಲಿ ನಮ್ಮ ಹೆಸರು ಮತ್ತು ನಮ್ಮನ್ನು ಕರೆದುಕೊಂಡು ಹೋಗುತ್ತಿರುವವರ ಹೆಸರುಗಳನ್ನು ಬರೆದುಕೊಳ್ಳುತ್ತಿದ್ದ. ಸಲ್ವಾನ್‌ನಂತಹ ಗಟ್ಟಿಮುಟ್ಟಾಗಿದ್ದ ಮನುಷ್ಯ ನನ್ನನ್ನು ಬಹಳ ಸುಲಭವಾಗಿ ಹಿಡಿದುಕೊಂಡು ಹೋಗಿಬಿಡಬಹುದಿತ್ತು. ನಾನೆಷ್ಟೇ ಹೋರಾಡಿದರೂ ಅವನಿಂದ ಬಿಡಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಅವನ ಹತ್ತಿರ ಕೊಳೆತ ಮೊಟ್ಟೆಯ ತರಹ ಗಬ್ಬುವಾಸನೆ ಬರುತ್ತಿತ್ತು.

ನಾನು ನೆಲವನ್ನೇ ನೋಡುತ್ತಿದ್ದೆ. ನನ್ನ ಪಕ್ಕ ಹಾದುಹೋಗುತ್ತಿದ್ದ ಸೈನಿಕರು ಮತ್ತು ಹುಡುಗಿಯರ ಪಾದಗಳನ್ನು ಗಮನಿಸುತ್ತಿದ್ದೆ. ಆ ಗುಂಪಿನ ನಡುವೆ ಗಂಡಸಿನ ಜೋಡಿ ಚಪ್ಪಲಿಗಳು ಮತ್ತು ಹಿಮ್ಮಡಿಗಳು ಕಾಣಿಸಿದವು. ಅದು ಸಣಕಲಾಗಿ ಹೆಂಗಸರ ಪಾದಗಳಂತಿತ್ತು. ನಾನೇನು ಮಾಡುತ್ತಿದ್ದೇನೆ ಎಂದು ನನಗೆ ಅರ್ಥವಾಗುವ ಮೊದಲೇ ಅವನ ಕಾಲುಗಳಿಗೆ ಬಿದ್ದುಬಿಟ್ಟಿದ್ದೆ. "ದಯವಿಟ್ಟು ನನ್ನನ್ನು ಕರೆದುಕೊಂಡು

ಹೋಗು. ನನ್ನನ್ನು ಹೇಗಾದರೂ ಬಳಸಿಕೋ ಆದರೆ ಈ ರಾಕ್ಷಸನ ಜೊತೆ ಹೋಗುವುದಿಲ್ಲ" ಎಂದು ಅವನನ್ನು ಬೇಡಿಕೊಳ್ಳಲಾರಂಭಿಸಿದೆ. ಅವನು ಏಕೆ ಒಪ್ಪಿಕೊಂಡನೋ ಗೊತ್ತಿಲ್ಲ. ಆದರೆ ಒಮ್ಮೆ ನನ್ನತ್ತ ನೋಡಿ "ಇವಳು ನನ್ನವಳು" ಎಂದು ಸಲ್ವಾನನಿಗೆ ಹೇಳಿದ. ಸಲ್ವಾನ್ ಪ್ರತಿಯಾಗಿ ಏನೂ ಹೇಳಲಿಲ್ಲ. ಆ ಸಣಕಲು ಮನುಷ್ಯ ಮೊಸುಲ್‌ನಲ್ಲಿ ನ್ಯಾಯಮೂರ್ತಿಯಾಗಿದ್ದ. ಅವನ ಮಾತಿಗೆ ಯಾರೂ ಎದುರಾಡುತ್ತಿರಲಿಲ್ಲ. ಅವನನ್ನು ಹಿಂಬಾಲಿಸಿ ನಡೆದೆ. "ನಿನ್ನ ಹೆಸರೇನು?" ಎಂದು ಕೇಳಿದ. ಅವನ ಧ್ವನಿ ಮೃದುವಾಗಿತ್ತು ಆದರೆ ಅದರಲ್ಲಿ ಕಾಠಿಣ್ಯವಿತ್ತು. "ನಾದಿಯ" ಎಂದೆ. ಪುಸ್ತಕದಲ್ಲಿ ವಿವರಗಳನ್ನು ದಾಖಲು ಮಾಡಿದರು. "ನಾದಿಯ ಹಜ್ಜಿ ಸಲ್ಮಾನ್" ಎಂದು ದಾಖಲು ಮಾಡಿಕೊಳ್ಳುತ್ತಿದ್ದ ವ್ಯಕ್ತಿ ಹೇಳಿದಾಗ ಅವನ ಧ್ವನಿ ಸ್ವಲ್ಪ ಮಟ್ಟಿಗೆ ನಡುಗಿದಂತೆನಿಸಿತು. ಅವನು ಹೆದರಿದ್ದ ಅಂತ ಕಾಣುತ್ತೆ. ನಾನೇನಾದರೂ ದೊಡ್ಡ ತಪ್ಪು ಮಾಡಿಬಿಟ್ಟೆನಾ ಅನ್ನಿಸಿತು.

ಐಸಿಸ್‌ನವರು ಕೋಚೊದ ದಾಳಿ ಮಾಡಿ ಒಂದು ವರ್ಷ ಮೂರುತಿಂಗಳಾಗಿತ್ತು. ವಿಶ್ವಸಂಸ್ಥೆಯಲ್ಲಿ ಅಲ್ಪಾಸಂಖ್ಯಾತರ ಸಮಸ್ಯೆಗಳ ಕುರಿತು ಮಾತಾಡಲು ನವಂಬರ್ 2015ರಂದು ಜರ್ಮನಿಯಿಂದ ಸ್ವಿಟ್ಜರ್‌ಲ್ಯಾಂಡಿಗೆ ಹೋದೆ. ದೊಡ್ಡ ಪ್ರೇಕ್ಷಕ ವೃಂದದ ಎದುರು ಮೊದಲಬಾರಿಗೆ ನನ್ನ ಕತೆ ಹೇಳಲಿದ್ದೆ. ನಿರ್ಜಲೀಕರಣದಿಂದ ಮಕ್ಕಳು ಸಾವನ್ನಪ್ಪಿದ್ದು, ಇಂದಿಗೂ ಪರ್ವತಗಳ ಮೇಲೆ ವಾಸಿಸುತ್ತಿರುವ ಕುಟುಂಬಗಳು, ಸಾವಿರಾರು ಮಹಿಳೆಯರು ಮತ್ತು ಮಕ್ಕಳು ಸೆರೆಯಾಳುಗಳಾಗಿದ್ದು, ದುರ್ಘಟನೆ ನಡೆದ ಸ್ಥಳದಲ್ಲಿ ನನ್ನ ಸಹೋದರರು ನೋಡಿದ್ದೇನು ಈ ಎಲ್ಲ ವಿಷಯಗಳ ಕುರಿತು ಹೇಳಬೇಕೆಂದಿದ್ದೆ . ಸಾವಿರಾರು ಯಾಜಿದಿ ಸಂತ್ರಸ್ತರ ನಡುವೆ ನಾನು ಕೂಡ ಒಬ್ಬಳಾಗಿದ್ದೆ. ನಮ್ಮ ಸಮುದಾಯ ಚದುರಿಹೋಗಿತ್ತು. ನಮ್ಮ ಸಮುದಾಯದವರು ಇರಾಕಿನ ಒಳಗೆ ಮತ್ತು ಹೊರಗೆ ನಿರಾಶ್ರಿತರಂತೆ ಬದುಕುತ್ತಿದ್ದರು. ಕೊಚೊ ಇನ್ನೂ ಐಸಿಸ್‌ನವರ ಹಿಡಿತದಲ್ಲಿತ್ತು. ಯಾಜಿದಿಗಳ ಏನು ನಡೆಯುತ್ತಿದೆ ಎನ್ನುವುದು ಜಗತ್ತಿಗೆ ತಿಳಿಯಬೇಕಿತ್ತು.

ಇರಾಕಿನ ಅಲ್ಪಸಂಖ್ಯಾತರಿಗೊಂದು ಸುರಕ್ಷಿತ ವಲಯವನ್ನು ನಿರ್ಮಿಸಬೇಕಿತ್ತು. ಐಸಿಸ್ ಸಂಘಟನೆಯನ್ನು ಮಟ್ಟಹಾಕಬೇಕಿತ್ತು. ಅವರೊಂದಿಗೆ ಅಪರಾಧ ಎಸಗುತ್ತಿರುವವರು ಮನುಷ್ಯತ್ವಕ್ಕೆ ದ್ರೋಹಬಗೆದಿದ್ದರು. ನನ್ನನ್ನು ಕರೆದುಕೊಂಡ ಹೋದ ಹಜ್ ಸಲ್ಮಾನ್ ನನ್ನ ಮೇಲೆ ಎಷ್ಟುಬಾರಿ ಅತ್ಯಾಚಾರವೆಸಗಿದ, ಏನೆಲ್ಲ ಅವಮಾನಗಳನ್ನು ನಾನು ಸಹಿಸಬೇಕಾಯಿತು ಎನ್ನುವುದನ್ನು ಪ್ರೇಕ್ಷಕರಿಗೆ ತಿಳಿಸಬೇಕಿತ್ತು. ಪ್ರಾಮಾಣಿಕವಾಗಿರಬೇಕು ಎನ್ನುವ ಅತ್ಯಂತ ಕಠಿಣವಾದ ಮತ್ತು ಮುಖ್ಯವಾದ ನಿರ್ಧಾರವನ್ನು ಮಾಡಿದೆ.

ನನ್ನ ಭಾಷಣವನ್ನು ಓದುತ್ತಾ ಗದ್ಗದಿತಳಾದೆ. ಕೊಚೊವನ್ನು ಹೇಗೆ ಆಕ್ರಮಿಸಿಕೊಂಡರು, ಹುಡುಗಿಯರನ್ನು ಹೇಗೆ ಸಬಯಾಗಳಾಗಿ ಮಾಡಿದರು ಎನ್ನುವ ಕುರಿತು ಮಾತನಾಡಿದೆ. ನನ್ನ ಮೇಲೆ

ಹೇಗೆ ಅತ್ಯಾಚಾರವಾಯಿತು, ಹೇಗೆ ಪದೇ ಪದೇ ಹೊಡೆತಗಳನ್ನು ತಿಂದೆ ಮತ್ತು ಹೇಗೆ ಅಲ್ಲಿಂದ ಪಾರಾದೆ ಎನ್ನುವುದನ್ನೆಲ್ಲ ಹೇಳಿದೆ. ನನ್ನ ಸಹೋದರರನ್ನು ಹೇಗೆ ಕೊಂದರು ಎನ್ನುವುದನ್ನು ಹೇಳಿದೆ. ನಿಮ್ಮ ಕತೆಯನ್ನು ಹೇಳಿಕೊಳ್ಳುವುದು ಸುಲಭವಲ್ಲ. ಪ್ರತಿ ಸಾರಿ ಹೇಳಿದಾಗಲೂ ನಿಮ್ಮೆದೆ ಹಗುರಾಗುತ್ತದೆ. ನನ್ನ ಮೇಲಾದ ಅತ್ಯಾಚಾರಗಳು, ಹಜ್ಜಿ ಸಲ್ಮಾನನ ಕೌರ್ಯ, ನೆರೆಹೊರೆಯಲ್ಲಿ ಸಹಾಯಕ್ಕಾಗಿ ಹುಡುಕಿದ್ದು ಇವೆಲ್ಲವೂ ನನ್ನನ್ನು ಹಿಂದಿನ ಆ ಭಯದ ಗಳಿಗೆಗಳಿಗೆ ಕರೆದೊಯ್ದವು. ಉಳಿದ ಯಾಜಿಗಳು ಕೂಡ ತಮ್ಮ ನೆನಪುಗಳಲ್ಲಿ ಮುಳುಗಿದರು.

ಪ್ರಾಮಾಣಿಕವಾಗಿ ನಡೆದದ್ದನ್ನು ನಿರೂಪಿಸುವ ನನ್ನ ಕತೆ ಉಗ್ರವಾದದ ವಿರುದ್ಧ ಹೋರಾಡಲು ನನ್ನ ಬಳಿಯಿರುವ ಶಕ್ತಿಶಾಲಿ ಅಸ್ತ್ರ. ಆ ಉಗ್ರರು ನಾಶವಾಗುವವರೆಗೂ ನಾನು ವಿರಮಿಸುವುದಿಲ್ಲ. ವಿಶ್ವನಾಯಕರು ಅದರಲ್ಲೂ ಮುಸ್ಲಿಂ ನಾಯಕರು  ಮುಂದಾಗಿ ದಮನಿತರನ್ನು ರಕ್ಷಿಸುವ ಪಣ ತೊಡಬೇಕು.

ಭಾಷಣ ಮಾಡಲು ನಾನಿಲ್ಲಿ ನಿಂತಿಲ್ಲ ಎಂದು ಅವರಿಗೆ ಹೇಳಿದೆ. ಪ್ರತಿಯೊಬ್ಬ ಯಾಜಿದಿ ಕೂಡ ಐಸಿಸ್‌ನಿಂದ ದೂರ ಸುರಕ್ಷಿತವಾಗಿರುವ ಬದುಕನ್ನು ಬಯಸುತ್ತಾನೆ. ಪ್ರಪಂಚದಾದ್ಯಂತ ಇರುವ ಅಶಕ್ತ ಸಮುದಾಯಗಳನ್ನು ಕಾಪಾಡುವುದು ಎಲ್ಲರ ಜವಾಬ್ದಾರಿ. ನನ್ನ ಮೇಲೆ ಅತ್ಯಾಚಾರ ಎಸಗಿದವರನ್ನು ನ್ಯಾಯದ ಕಟಕಟೆಯಲ್ಲಿ ನೋಡಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಪ್ರಪಂಚದಲ್ಲಿ ಇಂತಹ ಕತೆಯಿರುವ ಕಟ್ಟಕಡೆಯ ಹುಡುಗಿ ನಾನಾಗಬೇಕು ಎಂದು ಹೇಳಿದೆ.

ಮೂಲ : **I tell my story because it is the best weapon I have**

*****

# ನಾದಿಯಾ ಮುರಾದ್

ನಾದಿಯಾ ಮುರಾದ್ ಉತ್ತರ ಇರಾಕಿನ ಕೊಚೊ ಎನ್ನುವ ಹಳ್ಳಿಯ ರೈತ ಕುಟುಂಬಕ್ಕೆ ಸೇರಿದವಳು. ಈಕೆ ಆ ಪ್ರದೇಶದ ಅಲ್ಪಸಂಖ್ಯಾಂತ ಯಾಜಿದಿ ಜನಾಂಗಕ್ಕೆ ಸೇರಿದವಳು. ಆಕೆಯ ಊರಿನ ಮೇಲೆ ದಾಳಿ ಐಸಿಸ್‌ನವರು 600 ಯಾಜಿದಿಗಳನ್ನು ಭೀಕರವಾಗಿ ಕೊಂದುಹಾಕುತ್ತಾರೆ. ಮಕ್ಕಳನ್ನು ಮತ್ತು ಮಹಿಳೆಯರನ್ನು ಸೆರೆಯಾಳುಗಳಾಗಿಸಿಕೊಳ್ಳುತ್ತಾರೆ. ಹೀಗೆ ಸೆರೆಸಿಕ್ಕ ಮಹಿಳೆಯರನ್ನು ಸಬಯಾಗಳು ಎಂದರೆ ಲೈಂಗಿಕ ಆಳುಗಳಾಗಿ ದುಡಿಸಿಕೊಳ್ಳುತ್ತಾರೆ. ಈ ರೀತಿಯಲ್ಲಿ ಐಸಿಸ್ ಉಗ್ರರ ಕೈಗೆ ಸಿಕ್ಕಿಬಿದ್ದಾಗ ನಾದಿಯಾಳಿಗೆ ಹತ್ತೊಂಬತ್ತು ವರ್ಷ. ನಿರಂತರ ಅತ್ಯಾಚಾರ ಮತ್ತು ದೌರ್ಜನ್ಯಕ್ಕೊಳಗಾಗಿ ಮೂರು ತಿಂಗಳ ಒದ್ದಾಡಿದ ಮೇಲೆ ನೆರೆಹೊರೆಯವರ ನೆರವಿನಿಂದ ನಿರಾಶ್ರಿತ ಶಿಬಿರಕ್ಕೆ ತಪ್ಪಿಸಿಕೊಂಡು ಹೋಗುತ್ತಾಳೆ. ಅಲ್ಲಿ ಆಕೆಗೆ ಜರ್ಮನಿಗೆ ಹೋಗಿ ನೆಲೆಸುವ ಅವಕಾಶ ದಕ್ಕುತ್ತದೆ. ಪ್ರಸ್ತುತ ಆಕೆ ಜರ್ಮನಿಯಲ್ಲಿಯೇ ವಾಸಿಸುತ್ತಿದ್ದಾಳೆ.

ಯುದ್ಧ ಮತ್ತು ಸಶಸ್ತ್ರ ಸಂಘರ್ಷದಲ್ಲಿ ಲೈಂಗಿಕ ಹಿಂಸೆಯನ್ನು ಒಂದು ಅಸ್ತ್ರವಾಗಿ ಬಳಸುವುದರ ವಿರುದ್ಧ ಹೋರಾಟ ಮಾಡುತ್ತಿದ್ದಾಳೆ. 2018ರಲ್ಲಿ ಈಕೆಯ ಈ ಕೆಲಸಕ್ಕಾಗಿಯೇ ನೊಬಲ್ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. The Last Girl: My Story of Captivity, and My Fight Against the Islamic State ಎನ್ನುವುದು ಈಕೆಯ ಆತ್ಮಕತೆ.

**ಆಕರ** : ಉರಿವ ಬನದ ಕೋಗಿಲೆಗಳು

**ಅನು** : ಹೇಮಾ ಎಸ್.

# ಭಾಗ–4

# ಸಮುಷ್ಟಿ

| | | | |
|---|---|---|---|
| 1. | ನಮ್ಮ ಕಡೆಯ ಜನ | : | ಪಿ.ಲಂಕೇಶ್ |
| 2. | ಜೋತಮ್ಮದೇರ ಪ್ರಸಂಗ | : | ದೇವನೂರ ಮಹಾದೇವ |
| 3. | ಮನುಷ್ಯನ ಸಾಮಾಜಿಕ ಸ್ವಭಾವ ಮತ್ತು ಸಮುದಾಯ | : | ಮೂಲ : ಜಯಪ್ರಕಾಶ ನಾರಾಯಣ<br>ಅನುವಾದ : ಬಿ.ವೈ. ಲಲಿತಾಂಬ |
| 4. | ಓದು ಪಠ್ಯ<br>ಅಲ್ಲಿ ಬನ ಬನದಲ್ಲಿ... ಕಾಡಗಿಡದಲ್ಲಿ | : | ಕುಂ. ವೀರಭದ್ರಪ್ಪ |

# ಆಶಯ

ಇವನಾರವ, ಇವನಾರವ
ಇವನಾರವನೆಂದೆನಿಸದಿರಿಯ್ಯ
ಇವ ನಮ್ಮವ, ಇವ ನಮ್ಮವ, ಇವ
ನಮ್ಮವನೆಂದಿಸಯ್ಯ
ಕೂಡಲಸಂಗಮದೇವಯ್ಯ ನಿಮ್ಮಯ ಮನೆ
ಮಗನೆಂದೆನಿಸಯ್ಯ

ನನಗೆ ನಾನೇ ಹಗೆ ನೋಡಯ್ಯ!
ನನಗೆ ನಾನೇ ಕಳೆ ನೋಡಯ್ಯ!
ನಿಮ್ಮ ಸದ್ಭಕ್ತರೊಡನೆ ವಿರೋಧವ ಮಾಡಿದರೆನ್ನ ಕೊಲುವುದಾಗಿ
ನಿಮ್ಮ ಪುರಾತನರಿಗಂಜಿ ಬೆಸಗೊಂಡರೆನ್ನ ಕಾಯ್ವುದಾಗಿ
ಅನ್ಯ ಹಗೆಯಲ್ಲಿ? ಕಳೆಯಲ್ಲಿ?
ಬಾಗಿದ ತಲೆಯ, ಮುಗಿದ ಕೈಯಾಗಿರಿಸು ಕೂಡಲಸಂಗಮದೇವ

# 1. ನಮ್ಮ ಕಡೆಯ ಜನ

– ಪಿ. ಲಂಕೇಶ್

ಹುಚ್ಚು ಪೋಕರಿ, ಕೇಳು, ಬಿಟ್ಟು ಬಿಡು ದೊಡ್ಡಸ್ತಿಕೆಯ
ಕೋಳಿಕತ್ತಿನ ಸೊಕ್ಕ, ಅಕ್ಷರದ ದೌಲತ್ತ
ಇವರು ಸಹ ಘಾಟಿ ಜನ
ನಿನ್ನಾಣೆ: ಇವರಿಗಿದೆ ಗುಲಾಬಿ ಮುಳ್ಳಿನ ಕೆಚ್ಚು
ಸುತ್ತ ಸುಪ್ಪತ್ತಿಗೆಯ ಕಂಪು ವಾಸನೆ...
ಮತ್ತು ಮುಟ್ಟಿದರೆ ಚುರ‍್ರೆನುವ ಕಾಡುಕಿಚ್ಚು.

ಇವರು ಸಹ ಅಪ್ಪಟ ಘಾಟಿ; ಅದರೊಡನೆ
ಬಾಲದ ಹಾಗೆ ಗುಂಡಾಡಿಸುವ 'ಗೊತ್ತು' ನಗೆ;
"ಹಣ್ಣು ಕಾಯಿಯ ಚೌಡಿ, ಕರಿಯವ್ವೆ ಹೋತ;
ಹೌದಯ್ಯ, ಮುಂಚೆ ಬಾಗಿಲಲ್ಲೇಕೆ ಬರಲಿಲ್ಲ
ದೊಂದಿಯ ಕೂಡ ಆಕೆಯ ತಾವ ಬರುವಾತ?"
ಮುಂತಾದ ಮಾತುಗಳ ಗಮ್ಮತ್ತು; ಹೊತ್ತು ಗೊತ್ತು
ನಗೆಯ ಧಡಾಕಿಯಲ್ಲಿ ಗಳಿಗೆ ಫಳೀರು;
ಕಂಡುಂಡ ಬದುಕಿಂದ ಜಾಣ ಮುತ್ತು.

ಅಯನೂರಿನ ಸಂತೆ ಭಾನುವಾರ:
ಗಂಗುವಿಗೆ ಬೆಂಡೋಲೆ; ಜಬ್ಬಾರಗಾಯಿತೆ ಕ್ಷೌರ?
ಗಂಡನಿಗೆ ಬೀಡಿಯ ಕಟ್ಟು
ಬಾಳೆಯ ಗೊನೆಯ ಬಳಿ ಮುತ್ತಿಡುವವಗೆ ಉತ್ತುತ್ತೆ.
ಕೈತುಂಬ ಕೊಬ್ಬರಿ
(ಕದ್ದ ಗಲ್ಲದ ಕಚ್ಚು ನಚ್ಚಗೆ, ಭರ್ಜರಿ)
ಇದ ಬಲ್ಲವನು ಬೇಲಿ ಹಾರಿದ, ಕುಪ್ಪುಸಕ್ಕೆ ಕೈಯಿಟ್ಟು
ಮೇಲೆ ಕಣ್ಣಾಡಿಸಿದ; "ಪಾಪ ಪ್ರಾಯದ ದುಡುಕು"

ಎಂದು ಎಲ್ಲಾ ಮಜಕ್ಕೆ ಕೊಡುತ್ತ ರಹದಾರಿ
ನಡೆಯುವುದು ಸಂತೆದಾರಿ.

ಹೀಗೆಯೇ– ಚಂದ್ರಪ್ಪ ಬಂದನೆನ್ನೋಣ ಶಾನುಭೋಗರ ಕೂಡ:
ಕೊಟ್ಟ ಬೆಣ್ಣೆಯೋ ಎಣ್ಣೆ: ತರಕಾರಿ ಕಸವೆಂದು ಗೊತ್ತಾಗಿ
ಅಬ್ಬರಿಸುರಿವ ದರ್ಪದ ಡೀಸಿ ತೊಲಗಲು, ಹಿಂದೆ,
ಹೊಟ್ಟೆಯ ಹಿಡಿದ ಫಕಫಕ "ಗಸ್ತು ಕೊಟ್ಟೆಯೋ"
ನಗೆಯ ಮಿಣುಕುಗಣ್ಣ–
ಏನೆಂದು ಕರೆಯೋಣ?
ಇವರು ಸಹ ಘಾಟಿ ಜನ.

ಈ ಕವಿತೆಯನ್ನು ಲಂಕೇಶರ ಆಕ್ಷರ ಹೊಸ ಕಾವ್ಯ ಸಂಕಲನದಿಂದ ಆರಿಸಿಕೊಳ್ಳಲಾಗಿದೆ. ಕವಿತೆಯನ್ನು ಓದಬಹುದಾದ ಕೆಲವು ನೆಲೆಗಳನ್ನು ಇಲ್ಲಿ ಸೂಚಿಸಲಾಗಿದೆ. ಗಮನಿಸಿ:

1. ಅಕ್ಷರ ಬಲ್ಲವರು ಮತ್ತು ನಿರಕ್ಷರಿಗಳು ಇವರ ಸ್ತರಗಳ ನಿರಾಕರಣೆ
2. ಬಿಡಿ ಬಿಡಿ ಉಲ್ಲೇಖಗಳನ್ನು ಒಳಗೊಂಡ ಇಡಿ ಪ್ರತಿಮೆ.
3. ಮಾರ್ಕ್ಸ್ ವಾದಿ ಕನಸು.

## ತರಗತಿ ಚಟುವಟಿಕೆ

ಓದಿ–ಓದಿಕೊಳ್ಳಿ

ಈ ಕವಿತೆ ಒಮ್ಮೆ ಓದಿ. ನಂತರ ಮನಸ್ಸಿನಲ್ಲೇ ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಎಲ್ಲರೂ ಸ್ವಲ್ಪ ಹೊತ್ತು ಓದಿಕೊಳ್ಳಿ.

**ಆಕರ** : ಅಕ್ಷರ ಹೊಸಕಾವ್ಯ – ಪಿ. ಲಂಕೇಶ್

# ಜೋತೆಮ್ಮದೇರ ಪ್ರಸಂಗ

– ದೇವನೂರ ಮಹಾದೇವ

...ಹೀಗೆ

ಅಕ್ಕ ಮಹಾದೇವಮ್ಮನು ಗಂಡನ ತಿಥಿಯಾದ ಮಾರನೆಗೇ ತನ್ನ ತೌರಿಗೆ ಹೋದವಳು ಆರು ವರುಷದ ಬಳಿಕ, ಅಪ್ಪ ಸತ್ತ ಹನ್ನೆಡು ತಿಂಗಳಿಗೆ ಹಟ್ಟೀ ಜೀತಗಾರನಿಗೆ ಹುಟ್ಟಿದವನೆಂಬ ಅಪವಾದದ ತನ್ನ ಕುಡಿ ಯಾಡನೊಡನೆ ಗಂಡನ ಮನೆಗೆ ಪಾಲಿಗಾಗಿ ಬರುವಳು. ಆಗ ಬಾವಬಸಪ್ಪ ಸೋಮಿ, ಮೈದುನ ಸಿದ್ದೂರರು ಕುಪಿತರಾಗಿ ಅವಳನ್ನು ಗೋಮಾಳದಲ್ಲಿ ಬಿಸುಡುವರು. ಬಿಸುಟಲ್ಲೆ ನೆಲೆಯಾದ ಅಕ್ಕಮಹಾದೇವಮ್ಮನ ಸುತ್ತ ಒಂದು ಜೋಪಡಿ ಎದ್ದು ಮುಂದೆ ಯಾಡ ಬೆಳೆದಂತೆ ಅವನ ಸಾಮರ್ಥ್ಯವೂ ಸೇರಿ ಆ ಜೋಪಡಿಯು ನಿಧಾನವಾಗಿ ಒಂದು ದೊಡ್ಡ ಮನೆಯಾಗಿ ಆ ದೊಡ್ಡ ಮನೆಗೆ ಕಾಲಾನುಕ್ರಮದಲ್ಲಿ ಬಸಪ್ಪ ಸೋಮಿ ಸಿದ್ದೂರರ ಹಟ್ಟಿಯೇ ದನದ ಕೊಟ್ಟಿಗೆ ಆಗುವುದು.

ಈ ಯಾಡೇಗೌಡನ ಮಗ ಸೋಮಪ್ಪ ಊರಿಗೆ ದೊಡ್ಡವರು. ಈ ಊರಿಗೆ ದೊಡ್ಡವರ ಮಗಳು ಕುಸುಮಬಾಲೆ, ಕುಸುಮ ಮತ್ತು ಹೊಲಾರ ಚನ್ನರ ನಡುವಿನ ಗುಪ್ತ ಸಂಬಂಧವು ಕುಸುಮಳಿಗಾದ ಮಗುವಿನಿಂದಾಗಿ ಬಯಲಾಗಿ ಅರಿವಾಗದೋಪಾದಿಯಲ್ಲಿ ಚೆನ್ನನ ಕೊಲೆಯಾಗುವುದು.

ಇತ್ತ ಇಡೀ ಊರಿಗೆ ಊರೇ ಕಿಚ್ಚು ಹಾಯಿಸೋ ಹಬ್ಬಕ್ಕೆ ಸಿದ್ಧವಾಗುತ್ತಿದ್ದರೆ, ಚನ್ನನ ಬಳಗಕ್ಕೆ ಸೇರಿದ ಕೆಂಪಿಗೆ ಹುಟ್ಟಿದ ಕಂದನನ್ನು ಬದುಕಿಸಲು ತಾಯಿ ತೂರಮ್ಮ ವಿಧಿಯೊಡನೆ ಸೆಣಸುತ್ತ, ಅಲ್ಲೇ ತೂರಮ್ಮನ ಅಕ್ಕನ ಮಗಳು ಈರಿಯು ತನ್ನ ಸವೆಯುತ್ತಿದ್ದ ಕಂದನನ್ನು ಉಳಿಸಿಕೊಳ್ಳಲು ವಿಫಲಳಾಗಿ ಹಾಗೂ ಚೆನ್ನನ ಕೊಲೆ ಅರಿಯದ ಬಳಗವು ಕಾಯುವುದು ಚೆನ್ನನ ಬರುವಿಗಾಗಿ.

ಎತ್ತಣ ಮಾಮರ ಎತ್ತಣ ಕೋಗಿಲೆ? ಎತ್ತಣಿಂದೆತ್ತ ಸಂಬಂಧವಯ್ಯ?!
ಬೆಟ್ಟದ ನೆಲ್ಲಿಯಕಾಯಿ ಸಮುದ್ರದೊಗಳಣ ಉಪ್ಪು ಎತ್ತಣಿಂದೆತ್ತ ಸಂಬಂಧವಯ್ಯ ?!
ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ ಎತ್ತಣಿಂದೆತ್ತ ಸಂಬಂಧವಯ್ಯ?!

– ಅಲ್ಲಮ.

**ಕ**ಲ್ಲೂ ನೀರೂ ಕರಗುತ್ತಿತ್ತೂ, ಆಗ ಕ್ರಿಯಾ ಮುಗಿಸಿದ ಜೋತಮ್ಮದಿರು ಕಷ್ಟಸುಕ ಮಾತಾಡಿಕೊಳ್ಳಲು ಆ ಗವ್ಗತ್ತಲ ಊರಮುಂದಲು ರೂಢಿಗತದಂತೆ ಕೂಡಿದರು. ಅವರು ಮಾತಾಡ್ಲಿ ಅಂತ ಇವರೂ, ಇವರು ಮಾತಾಡ್ಲಿ ಅಂತ ಅವರೂ–ಹೀಗಿದ್ದರು. ಆಗ ಅಲ್ಲಿಗೊಬ್ಬಳು ಹೊಸ ಜೋತಮ್ಮನು ಇಸ್ಕೂಲಮನೆ ದಿಕ್ಕಿಂದ ಬಂದವಳು ಬಸ್ಸಿನವರು ದಾನವಾಗಿ ಕಟ್ಟಿಸಿದ್ದ ಜಗುಲಿ ಕಲ್ಲಮ್ಯಾಲ ಉಸ್ಸೋ ಎಂದು ಕೂತು ನಿಟ್ಟುಸುರಾದಳು. ಆಗಲು, ಊರ್ಗ

ದೊಡ್ಡೋರ ಹಟ್ಟಿ ಜೋತಮ್ಮನು–

"ಯಾವೂರ ತಾಯಿ ನಿಂದು?" ಎಂದಳು.

"ಅಯ್ಯೋ ನಂಗೂ ಯಾವೂರು ಯಾವ್‌ಕೇರಿ ಅಕ್ಕಯ್ಯ? ನಾನೊಬ್ಬು ಪಾಪಿ ಪರ್ದೇಸಿ. ಇದ್ದರೆ ಈ ಊರೂ ಎದ್ದರೆ ಮುಂದ್ಲೂರು. ಈಗ ಊರ್ಗ ಬಂದಿರೊ ದೊಂಬ್ರ ಕಡೆಯೋಳು..."

"ಅವ್ವವ್ವಾ! ನಿನ್ ಮಾತ್ಲೆ ಏನ್ ಬಿನ್ನಾಣ ಇಸ್ಟೊಂದು. ಇನ್ನು ನಿನ್ನೊಳಗ ಇನ್ನೆಸ್ಟೋ! ಕೇಳ್ತಾ ಇರೋದೇ ಒಂದು ಐಭೋಗ. ಎಸ್ಟೇ ಆದ್ರೂ ನೀನು ಊರೂರು ತಿದ್ದವಳು. ಇಂದ್ಗ ಹನ್ನೇಡು ವರ್ಸದ ಮಳಬೆಳದಲ್ಲಿ ಬಂದಿದ್ಯಲ್ಲ ಅಫ್ಪಿಯಾ?"

"ಅಫ್ಪಿಯಾಕಣ್ರೇ ಅಕ್ಕಯ್ಯ, ಇನ್ನೂ ನನ್ ನೆಪ್ಪು ತಮ್ಗ ಚಿಗುರಾಗಿದೆಯಲ್ಲ! ಇದಲ್ಲ ನನ್ ಪುಣ್ಯ!" ಎಂಬುದಾಗಿ ಹೊಸ ಜೋತಮ್ಮ ಚೋಜುಗದಲ್ಲಿರಲು, ಉಳುದ ಜೋತಮ್ಮದಿರು ಹೊಸಬಳ ಮುಟ್ಟ ತಟ್ಟ ಮಾತಾಡುಸ್ತ ಅಲ್ಲಿ ಗಲುಗುಗದ್ದಲ ಎದ್ದೇಳಿತು. ಆಗ ಊರ್ಗ ದೊಡ್ಡರ ಹಟ್ಟೀ ಜೋತಮ್ಮನು –

"ಅದ್ಯಾನ ಅಸ್ಟು ಮಾತಾಡ್ತೀರಿ? ಕೇಳ್ರಮ್ಮಿ ಯಮ್ಮಗಳ. ಇವತ್ತು ನಮ್ಮಟ್ಟಿ ಕುಸುಮ್ನ ಗಂಡ ಬಂದಿದ್ದ. ಬಂದವ, ಕೂಸ್ನೂ ಹೆಡ್ತೀನೂ ಚಣೊತ್ತು ನೋಡ್ದನೋ ನೋಡ್ನೇ ಇಲ್ವೊ! ನಿಲ್ದೆ ಹೊಂಟೇಬುಡಾದ ಪುಣ್ಯಾತ್ಮ...!"

"ಅಯ್ಯಯ್ಯೊ ಎಲ್ಲಾದ್ರು ಉಂಟವ್ವಾ! ಆ ಥರ್‍ವಾಗಿ ಯಾಕಾರೂ ಮಾಡ್ದನವ್ವ...?" ಅದ್ಕ ನಾನಾದ್ರೂ ಯಾನ್ನ ತಾನೇ ಹೇಳಲವ್ವ ತಾಯಿ?" ಕೂರ ನೋಡ್ತ, ಕೆಂಪ್ಗಿರೋ ಅವನ ಮೊಕವು ಕಪ್ಪಾಗೋಯ್ತು. ಕುಸುಮೀನ ಯಾವ ಅನ್ಲಿಲ್ಲಾ... ಎತ್ತ ಅನ್ಲಿಲ್ಲ... ಸಟುಗ ಕಣ್ಣೆತ್ತೂ ನೋಡ್ನಿಲ್ಲಾ ಕಡ್ದು ಹೊಂಟೊಯ್ತಿದ್ದ..." ಅಯ್ಯಯ್ಯೋ ಎಲ್ಲಾದ್ರು ಉಂಟವ್ವಾ! ಆ ಥರ್‍ವಾಗಿ ಯಾಕಾರೂ ಮಾಡ್ದನವ್ವ... ?

"ಆಕ್ಕೈ ನಾ ಹೇಳ್ತೀನಿ ತಾಳಿ ಅದ..."

ಎಂದು ಸೊಪ್ಪುಸೊದ ಯಾಪಾರಸ್ಥೆ ತೊರಾರ ಹಟ್ಟೀ ಜೋತಮ್ಮ ನುಡಿಯಲು,

ಸಿಡುಕಾಗಿ ಡೊಡ್ಡೋರ ಹಟ್ಟೀ ಜೋತಮ್ಮ–

"ಅಯ್... ನೀ ಎಲ್ಲಾಕು ಬಾಯಕಂದು ಬವ್ವ. ಆ ಹಟ್ಟಿ ತಳಪಾಯ್ದು ದಿನವೇ ಹುಟ್ಟಿರೋ ನಂಗಿಯ ಗೊತ್ತಿಲ್ವಂತ ಇನ್ನು ಯಾನ್ನ ನೀ ಹೇಳದೂ ?"

ಎಂದಳು. ಈ ಸಿಡುಕಿಗೆ ಸೊಪ್ಪು ಹಾಕದ ಹೊಲಾರ ಮಾರಿಗುಡಿ ಜೋತಮ್ಮನು"

"ಅದ್ಯಾಕ ಅವ್ವ ಬಾಯ್ ಮುಚ್ಚಿಸಿರಿ ನೀವು? ಏನೇನ್ ಕಂಡಿದ್ದಳೊ ಅವಳು! ಹೇಳ್ಳಿ ಬುಡಿ, ಆದ್ನೂ ಕೇಳವು..."

ಅಂದಳು. ಆಗ ದೊಡ್ಡೋರ ಹಟ್ಟೀ ಜೋತಮ್ಮ ಮೊಕ್ವ ಬಿಕ್ಕಂಡು ತಾತ್ಸಾರವ ಉಸುರಾಡ್ತ ಅಂದಳು–

"ವ್ಹೊ ಹೇಳವ್ವ, ಅದೇನ್ ನಿಂಗ ಕಂಡಿದ್ದದೋ" ಅದ್ನೂ ಕೇಳವು..."

ಆಗ ಒಂದ್ಸಲ ಸುತ್ತಾಲೂ ನೋಡಿ ತೊರಾರ ಹಟ್ಟೀ ಜೋತಮ್ಮನು–

"ಅದಿಯಾ ಅತ್ತಮ್ಮೋರ... ನಿಂ ಕುಸುಮುವಿ ಆ ಹೊಲಾರ ಚನ್ನನೂವಿ ಕೂಡೋ ತಳವು ನಮ್ ಜೋಪಡಿ ತಾನೀಯ? ಕೆಂಪಾಗಿರೊ ಗಂಡ ಹೆಂಡತೀಗ ಹುಟ್ಟೀರೋ ಕೂಸು ಚಿನ್ನದ ಥರ್ವಾಗಿ ಕಪ್ಪಾಗಿ ಅದು ಹುಟ್ಟೀ... ಅದನೀಗ ಕುಸುಮಳ ಗಂಡ ಆರುತ್ಗಂಡು... ಅಂತೇನಾರು..."

ಅಂತ ಅದು ಮುಗಿಯುವುದರೊಳಗೆ, ಹಾರೂರ ಮನೆಯ ಜೋತಮ್ಮ –

"ಐ... ಎಲ್ರೂ ಮಾಡೋ ಯಥಾರ್ಥನೆ ಹೇಳ್ತಳ. ಏನ್ ವಿಚಾರ್ವ ಅದು?" ಎಂದು ದೊಡ್ಡೋರ ಹಟ್ಟೀ ಜೋತಮ್ಮನ ದಿಕ್ಕಿಗೆ ತಿರುಗಿ ಅಂದಳು–

"ಅವ್ಘ ಮಾತು ಆಂಗಿರ್ಲಿಕಣಾ, ಕೂಸುಬಾಣ್ತಿ ಚೆನ್ನಾಗಿದ್ದಾರ? ಅದ್ನಾರು ಕೇಳವು ಹೇಳ್ರಿ ಅಕ್ಕಯ್ಯಾ..."

"ಕೂಸ್ಯಾನ ಆರೋಗ್ಗವಾಗಿ ಚಂದಗಾಣಾಗಿ ಅಡ್ಗಂದದ. ಅದ್ರ... ತಾಯೀ.. ಅಯ್ಯೋ ಆ ನಮ್ಮ ಕುಸುಮ್ನಂತು ಈ ಐಡ್ ನೇತ್ರಗಳಿಂದ ನೋಡಕ್ಕಾಗಲ್ಲ ಕನವ್ವ. ಆ ಎಳೆ ನಗೂನುವಿ ಈ ಎಳೆ ಚೆಲೂವ್ನುವಿ ಸೇರ್ರಿ ಬಟ್ಟಿ ಇಳ್ಸಿ ಮಾಡ್ಟಂಗಿದ್ದವಳೂ... ಸಿವಸಿವಾ ಅವಳು ನಕ್ಕರೋ. ಅವಳ ಹಲ್ಲಿನ ಮ್ಯಾಗಲ ಆ ಒಂಚುಟ್ಟಿ ಸಿಂಗಲ್ಲಿನಲ್ಲೆ ಈ ಲೋಕದ ಚಲೂನೆಲ್ಲ ಆ ಭಗವಂತ್ನು ಇಟ್ಟೂ... ಆ ರತಿ ಅಂಬ ವಳ್ಗಿಯಾ ಅದ್ನೀಗ ಹೆಂಗಾರೂ ಮಾಡಿ ಕಿತ್ಕಂಡು ತನ್ನ ಹಲ್ಲ್‌ನ ಮ್ಯಾಕ್ಕ ಇಟ್ಟಗಬೇಕೂ ಅನ್ಸಂಗ ಇದ್ದವಳೂ! ಈಗ ಆ ನನ್ನ ಕಂದನೊಳ್ಗ ಬಸ್ಕಂಡ್ರ ಒಂದು ಚಟಾಕು ರಗ್ತ ಇದ್ದದೋ.. ಇಲ್ವೊ... ಅನ್ನಂಗವ್ಳೆ."

ಈ ವಾಕ್ಷಕ ಯಾವ ಜೋತಮ್ಮದೀರ ಬಾಯಿಂದ್ಲೂ ಮಾತು ಹೊರಡಲಾರದೆ ಕೆಲವರೋ ಲೊಚಗುಡ್ತ, ಕೆಲವರೋ ಅಯ್ಯೋ ಅನ್ತ, ಉಳಿದವರು ದೀನವಾಗಿ ತಾವೇ ನಿಟ್ಟುಸುರಾಗಿ ಕೂತು––

"ಯಾವ ದಿನ ಸೇರ್ಲಿ ಇಂಥ ಕಸ್ಟದ ಮಾತ್ಗಳ ಕೇಳ್ಬೋಕೂ ನೋಡ್ಬೇಕಲ್ಲಾ! ನಮ್ಮ ಹಾಳಾದ ಹಣೇಲಿ ಅದೇನ್ ಬರ್ದಿದ್ದಾದು? ಆ ಭಗವಂತ ಯಾಕಾರು ನಮ್ ಹುಟ್ಟುಸ್ದಾ? ನಮ್ಗ ಸಾವ್ನಾರೂ ಕೊಡಬಾರ್ದ?"

ತಲಗೊಂದು ಎಂದು ಮಾತಾಡ್ತ ಕೋತಿರಬೇಕಿರುವಾಗ,

ಆ ಕಡಾ ಐದ್ ಜನ, ಈ ಕಡಾ ಐದ್ ಜನಾ, ಹಿಂದ್ಕೈದ್ ಜನ, ನಡುಮಧ್ಯಾ ಕುಸುಮಾಳ ಅಪ್ಪಾಜಿಯು ಮಾತಾಡ್ತ, ಉಳುದವರು ಊಗುಟ್ತಾ ಊರೊಳಕ್ಕ ಕಾಲಿಟ್ಟರು. ಈ ಕಲಿಗಾಲದ ಜನಕ್ಕೆಲ್ಲ ವೇಳ ಅವೇಳ ಅಂಬುದಿಲ್ಲದೆ, ಒಂದು ಚಣೊತ್ತಾರೂ ತಾವು ನಿಂಬಳವಾಗಿ ಕೂತು ಕಸ್ಟಸುಕ ಮಾತಾಡಿಕೊಳ್ಳಲಾಗದ ಜೋತಮ್ಮದೀರು ತುಂಬ್ಕಂಡು ಎದ್ದು ತಂತಮ್ಮ ತಳ ಸೇರ್ಕಂಡರು.

ಕುಸುಮಾಳ ತಂದೆ ಸೋಮಪ್ಪರು ಹಟ್ಟಿ ಮುಂದಲು ನಿಂತ ನಿಲುವು ಬಿರುಸುಗೆ ಬಾಗುಲ ಕಾಲ್ದೆಸೆಯಲ್ಲಿ ತಲ್ವ ಇಟ್ಟು ತೂಕಡಿಸುತಲಿದ್ದ ಆಳುಮಗಗ ಬೆಚ್ಚಿಟ್ಟಂತಾರಿ ಏಳಲು, ಒಂದು ಆನ ನುಗ್ಗೂವಷ್ಟಿದ್ದ ಆ ದಾರಂದವು ಆ ಊರಾಗಿದ್ದ ಊರು ಒಂದ್ಸಲ ಆಕಳಿಸಿದಷ್ಟು ಸಬುದ ಮಾಡ್ತ ತಕ್ಕಂಡಿತು. ಆಗಲೀಗ ಹಟ್ಟೀಯ ಒಳಗಿದ್ದೂ ಇದ್ದೂ ಬೇಜಾರು ತುಂಬ್ಕಂಡಿದ್ದ ಕತ್ತುಲು, ಬಾಗಲು ತಗೆಯುವುದನ್ನೆ ಕಾಯುತ್ತಿದ್ದು ಹೊರ ಬಂದುದೆ ಉಸುರು ಬುಡಲು, ಹಾಗೆಯೇ ಹಟ್ಟೀ ಹೊರಗಿದ್ದ ಕತ್ತಲೂಗ ತಾನು ಒಂದ್ಸಲ ಹಟ್ಟೀಯ ಒಳಚಂದ್ವ ನೋಡುವ ಅನ್ಸಿ ಅದೋ ಒಳಬಂತು.

ಆಳುಮಗ ಓಡಾಡಿಕೊಂಡಾಗ ಲಾಂಟೀನು ಬತ್ತಿ ಎತ್ತರಿಸಿ ಮಿನುಗುಡೋ ಬೆಳೂಕ ದೊಡ್ಡದಾಗಿಸಿದನು. ಆ ಬೆಳುಕುವು ತನ್ನ ಶಕ್ತಿ ಮೀರಿ ಹಬ್ಬಿಯೂ ಕಣ್ಣಳ ಓಡಿಸಿದಷ್ಟು ಇನ್ನೂವಿ ಕಂಡುಬರುತ್ತಿದ್ದ ಆ ಒಂದೂರಷ್ಟಿದ ಹಟ್ಟೀಯ ಒಕ್ಕಡ ಮೂಲೆನಾರೂ ತಲುಪಲು ಅದಕ್ಕಾಗದೆ ಏದುಸುರಾಗಿ ನಿಂತಿತು.

ಆಳುಮಗ "ಅವ್ವರ ಏಳಿಸ್ಲ ಅಳಿ" ಅಂದನು. "ಬ್ಯಾಡ, ನಂದು ನಂಜಲಗೂಡ್ಲೆ ಊಟಾಯ್ತುಕಣ, ನೀ ಮಲಿಕ ಇನ್ನು..." ಎಂದು ಸೋಮಪ್ಪರು, ಆಳುದ್ದುದ ಹದಿನಾರು ಚಪ್ಪಡಿ ಕಲ್ಲಿನ ತೊಟ್ಟಿಗೆ ಇಳುದು ಕೈಕಾಲ್‌ಮೊಕ್ವ ತೊಳದು, ಆದಾದ ಮ್ಯಾಲ ಅರ್ಧ ಹಜಾರವ ಆವರಿಸಿದ್ದ ಮಂಚದ ಮ್ಯಾಲ ದೇಹವಿರಿಸಿ ಒಂದು ಸಿಕರೋಟು ಹಚ್ಚಿ ಸೇದಿದರೂ ಮನಸ್ಸು ನಿಂತಲ್ಲಿ ನಿಲ್ಲದಿರಲು ಬಾಣ್ತಿ ಮನಲಿರೋ ಮಗಳು ಕುಸುಮಾಳ ಒಂದ್ಸಲ ನೋಡುವ ಆಸೆ ಎದ್ದಾಡಿತು.

ಗಾಳಿ ಬೆಳೂಕೂಗಳ ತಡೆಗಟ್ಟಿ ನಿಂತಿದ್ದ ಆ ಬಾಣಂತಿ ಮನೆಯು ಕುಸುಮಾಳ ಉಸುರಾಟದಲಿ ಬೆಚ್ಚಗಿ–ತ್ತು. ಕೈಯಣ್ಣೆ ಸೊಳ್ಳಿನ ಬೆಳುಕು ಬೆಳೂಗ್ತ ತಂಪಾಗಿ ಚೆಲ್ಲೂತ ಉರಿಯೂತ, ಅಲ್ಲೇ ಕುಸುಮಾಳ ತೋಳಮ್ಯಾಲ ಹಗಲೂರಾತ್ರೀಯ ಪರಿವಿಲ್ಲದ ಅವಳ ಕಂದಮ್ಮನು ಕಣ್ಗಳ ಅರಳಿಸಿಕೊಂಡು ಕಾಕು ಹಾಕ್ತ ಕಯ್ಯುಕಾಲು ಕೆಳಗ್ಮೇಲಾಡುಸ್ತ ಆಡುತ್ತಿದ್ದರ, ಅದರವ್ವ ತನ್ನ ಪರಿವಿಲ್ಲದ ನಿದ್ದವಾಗಿದ್ದಳು. ಅವಳ ಹನಿಬೆವುರುಗಳು ಆ ಹಣೆತುಂಬವೂ ಹರಡಿ ಆಗಾಗ ಅವು ಒಡೆದು ಮೊಕದಿಂದ ಕೆಳಕ್ಕ ಇಳಿಯುತ್ತಿದ್ದವು. ಅವಳ ಕೂದಲೂ ಅವಳ ಮೊಕಕ್ಕೆಲ್ಲ ಚೆಲ್ಕಂಡು ಆ ಬೆವೂರು ತ್ಯಾವಕ್ಕ ಅಂಟ್ಕಂಡು ಅದೂನು ಅಲ್ಲಾಡದಿತ್ತು.

ಆ ಕೂಸು ಆಡುವ ಚೋದ್ಯವ ನೋಡ್ತಾ ಕುಸುಮಾಳ ತಮ್ಮನಾಗಿದ್ದ ಹನ್ನೇಡು ವರುಸಾದ ಪರ್ಸಾದನು ಎದುರೂಗ ಕೂತಿತ್ತು. ದೇವಮಾನವರಂತೆ ರೆಪ್ಪ ಮಿಟುಕಿಸದ ಆ ಬೆರಗು ಕಣ್ಗಳ ಒಳಕಯ್ಯಣ್ಣ ಸೊಳ್ಳಿನ ತಂಪಾದ ಬೆಳೂಕು ಬಿದ್ದು ಅದು ಅಲ್ಲಿಂದ ಇನ್ನೂವಿ ತಂಪಾಗಿ ನೆಲಕ ಚೆಲ್ಲುತ್ತಿತ್ತು. ಇನ್ನು ಅವನ ಬಾಯಳತೆಗೆ ಮೀರಿ ಸುರಿಯುತ್ತಿದ್ದ ಹೆಚ್ಚುವರಿ ಜೊಲ್ಲನ್ನು ಭೂಮತಾಯಿ ತನ್ನೇಡು ಕೈಗಳಿಂದಲು ಆತುಗೊಳ್ಳುತ್ತಿದ್ದಳು.

ಇದ ಕಂಡು, ಮಗಳ ಕಣ್ಣುಗ ತುಂಬಿಕೊಳ್ಳಲು ಬಂದ ಸೋಮಪ್ಪಗ ಬಾರದ ನಗೂ ಬಂದು "ಅಡ್ಮೈ ಪರ್ಸಾದ ಅದ್ಯಾನ ನೀನು ? ಇನ್ನೂವಿ ನಿನ್ ಕಣ್ಗ ನಿದ್ದ ಬಂದಿಲ್ವ?" ಅಂದರು. ಪರ್ಸಾದ ಮಾವ ಬಾಯ್ತುಂಬಿದ್ದ ಜೊಲ್ಲ ಭೂಮತಾಯ್ಗ ಚಲ್ಲುಬುಟ್ಟು "ಅಪ್ಪೈ ಇಲ್ನೋಡು ! ಕೂಸು ಆಡ್ತ ಅದ" ಅಂದನು. "ಇನ್ನೇನ್ ಬೆಳಕರೀತಾದ,

ವೋಗು ನೀ ಮಲಿಕ" ಅಂದರು. ಅಸ್ವರಲ್ಲೆ ಬಾಯ್ಗ ತುಂಬ್ಬ ಜೊಲ್ಲ ಪರ್ಯಾದ ಕಟಬಾಯಲ್ಲಿ ಉಕ್ಕುಸ್ತ "ಅಪ್ಪೈ ಇಲ್ಲೋಡು! ಕೂಸು ಆಟ್ತ ಅದ" ಅಂದನು.

ಒಂದ್ಸಲ ಸೋಮಪ್ಪರು ಆ ದೇಹದ ತುಂಬಾ ಉಸುರಾಡಿ, ಮಗಳ ಕಣ್ಣುಗ ತುಂಬಿಕೊಂಡು ಮಂಚಕ್ಕೆ ಬಂದು ಆ ದೇಹವ ಚಲ್ಲಿದರು.

ಪರ್ಸಾದನು, ಏಳ್ಜನ ಗಂಡುಮಕ್ಕಳ ಮ್ಯಾಲ ಒಬ್ಬಳು ಮಗಳಾಗಿ ಕುಸುಮಾಳು ಹುಟ್ಟೀ ಇನ್ನು ಮಕ್ಕಮರಿ ಸಾಕು ಎಂದಿರುವಾಗ ಅರಿವುಗ ಬಾರದೆ ಹುಟ್ಟಿಬುಟ್ಟಿದ್ದನು. ಚೂಜಿಮದ್ದುಗೆಲ್ಲ ಜಗ್ಗದೆ ಗೆದ್ದು ಹುಟ್ಟಿಬಂದ ಪರ್ಸಾದನ ಬೆಪ್ಪು ಮತ್ತು ಅವನ ಜೊಲ್ಲು ಅವನು ಬೆಳೆದಂತೆಲ್ಲಾ ಅವೂ ಬೆಳೀತಾ ಯಾಕಾರೂ ಹುಟ್ಟಿದನೋ ಅನ್ನುಸ್ತ ಅವನೋ ಹುಟ್ಟಾಗಿತ್ತು.

ಈ ನನ್ನ ಕಂದ ಪರ್ಸಾದನು ಕೂತುಣ್ಣೊ ಫಲದಲ್ಲು ಒಡೆಯಾಗಿ ನಿಂತೋಯ್ತುಲ್ಲಾ ಅಂತಂತ ಹಾಗೇ ಅಪ್ಪಾಜಿಯವರ ಕಣ್ಣುಗ ನಿದ್ದವು ಕವುರಿತು. ಆಗ ಆ ಅರಜೀವದ ಕತ್ಲ ಬೆಳಕಲ್ಲಿ ಸೋಮಪ್ಪರ ಕಣ್ಣುಗಳ ಸುತ್ತಾ ಸುತ್ತುತ್ತಿದ್ದ ಕಪ್ಪುಬಳವು ಇನ್ನೊಂದು ಗೆರ್ವ ಹೆಚ್ಚಿಸಿಕೊಂಡಿತು.

ಸೋಮಪ್ಪರ ಮೂಗಿನ ಮ್ಯಾಲ, ಹುಬ್ಬಿನ ಕೆಳಗ ಏಡು ಕಪ್ಪು ಪ್ಯಾಚು ಅಂತಿದ್ದು ಅದರಲ್ಲಿ ಸಾವೂವು ಗೀಜ್ಗಲ ಹಕ್ಕಿ ಗೂಡುಕಟ್ಟಿ, ಆ ಲಾಂಟೀನ ಕತ್ಲ ಬೆಳೂಕು ಅಲ್ಲಾಡ್ಡ ತಳ್ಳಾಡ್ತ ಅಲ್ಲುಗ ಬಂದು ಬಿದ್ದಾಗ ಆ ಕಣ್ಣುಗುಡ್ಡಗಳ ಮ್ಯಾಲಿಂದ ಆ ಸಾವೂವು ಎದ್ದು ಬಂದು ಸೆಡೆಯಾಡಿಸುವಂತಾಗುತ್ತಿತ್ತು.

ಆಯ್ತಾ ಸೋಮಪ್ಪಗ ಎದ್ದ ತುಂಬಲು, ಅವರ ವಝುನ್ನಾಗಿದ್ದ ದೇಹವೆ ಹೊರಲಾರದೆ ಹೊತ್ತು ಹೋಗುತ್ತಿದ್ದ ಅವರ ಜೀವಾತ್ಮನು 'ಉಸ್ಸೋ' ಎಂದು ಎದ್ದುಕೂತು ಸುಸ್ತಾರಿಸಿಕೊಳ್ಳತೊಡಗಿತು.

ಈ ರೀತಿಯಾಗಿ ಪಸುಪಕ್ಷಿಯಾದಿಯಾಗಿ ನರಮನುಸರನ್ನೆಲ್ಲ ನಿದ್ದಾವು ಆವರಿಸಿರಲು, ಆಗ ಸೋಮಪ್ಪರು ಮಲುಗಿದ್ದ ಮಂಜಾವು ವಯ್ಸಾದ ನಾಯ್ಕಸಾನಿ ಮಾಡುವೋಪಾದಿ ವಯ್ಯಾರದಲಿ ಎತ್ತಿ ಒಂದ್ಸಲ ನೋಡಿತು. ಸುಸ್ತಾರಿಸ್ತಿರೋ ಜೀವಾತ್ಮನ ಕಂಡು, ಕಳಶ ಒಬ್ಬರು ಆದರು ಅಂದುಕೊಂಡು ಸಂತೋಸವಾಗಿ ಹೇಳತೊಡಗಿತು:

"ಒಂದ್ಸಲ ಯಾನಾಯ್ತು... ನಂ ದೇಸ್ದ ಮಾರಾಜ್ರು ಹೆಣ್ ನೋಡಾಕ ಅಂತ ಪಕ್ಕದ ದೇಸ್ದ ರಾಜ್ಯಕ ವೊಯ್ತಾರ. ಈ ರಾಜ್ಯದ ಅರ್ಮನ ಹೆಂಗಿದ್ದುದು ತಾಡೂ ವಸಿ ನೋಡವು ಅಂದ್ಕಬುಟ್ಟು ನಂ ಮಾರಾಜ್ರು ಒಕ್ಕಡಯಿಂದ ನೋಡ್ಕಂಡ್ ನೋಡ್ಕೊಂಡು ನೋಡ್ಕಂಡು ಬತ್ತಾ ಇರಬೇಕಾರ, ಆ ಅಂತಾಪುರವಾಗಿದ್ದ ಅಂತಪುರಕ್ಕೆಲ್ಲಾ ಕಳಸದ ಥರ್ವಾಗಿ ಇದ್ದಂಥ ಒಂದು ಮಂಜಾವು ಅವರ ಕಣ್ಣುಗ ಬಿತ್ತು.

ಆ ಮಂಚ್ಕನೆಟ್ಟ ಕಣ್ಣು ಕೀಳ್ದನೆಯೆ, ನಮ್ಮ ದೇಸ್ದ ಮಾರಾಜ್ರು–ಎಲಲಾ ನಾ ನೋಡುದ್ರ ಇಲ್ಲುಗ ಹೆಣ್ಣುಗ್ ಬಂದಿರೋದು. ಈ ಅರ್ಮನ ಹೆಣ್ಣು ನಮ್ ಅರ್ಮನಗ ಬಂದ್ರ, ನಮ್ ಅರ್ಮನಲೂ ಇಂಥ ಒಂದು ಮಂಚ ಇಲ್ದಿದ್ರ

ಅವ್ರು ಮಲ್ಗಿಳಾ... ಅಂಬೋ ಚಿಂತವು ಅವರ ಎದ ಒಳಕ್ಕ ನುಗ್ಗಿ ಒಕ್ಕಡಯಿಂದ ಸುಡ್ತಾ ಬತ್ತಿರಬೇಕಾರ..

ಅಗ ನಮ್ ರಾಜ್ರು ಏನ್ಮಾಡ್ದರು... ತಮ್ಮ ರಾಜ್ಯಕ ಬಂದರು. ಬಂದವರು, ದೇಸದಲ್ಲಿರೋ ಓಜಪ್ಪಗಳನ್ನೆಲ್ಲಾ ಕರಸ್ಕಂಡು ಪರೀಕ್ಷಿ ಏಳ್ಜನ ಇರ್ಸಗಂಡು ಅವರ್ಗೆ ಈಳ್ಯ ಕೊಟ್ಟು "ನೋಡ್ರಯ್ಯಾ ಓಜಪ್ಪಗಳಾ... ನೀವ್ಗಳು ಈಗಾನೆ ಉತ್ತಮವಾದ ಮರ ಕಡ್ಕಂಡು, ಅದ್ರ ಕೆಚ್ಚ ತಕ್ಕಂಡೂ ಆ ಕಿಚ್ಚಲ್ಲೆ ಆ ಪರರಾಜ್ಯದ ಮಂಚ ಇದೆಯಲ್ಲಾ... ವಸಿ ಅದಕ್ಕಿಂತ್ಲೂ ವೈನಾಗಿಯ ಒಂದು ಮಂಚ್ವ ಮಾಡ್ಕೊಡಿ ನಮ್ಗ" ಅಂತ ಅಪ್ಪಣೆಯ ಮಾಡ್ದರು.

ಆ ಉಟ್ಟ ಬಟ್ಟೇಲಿ ಓಜಪ್ಪಗಳು ಗರುಗ್ಸ ಇಡ್ಕಂಡು ಹೊರಟು, ಮೂರು ತಿಂಗಾ ಮರಾ ಹುಡ್ಕೀ, ಮೂರ್ ತಿಂಗಾ ಆ ಮರ್ದ ಕೆಚ್ ತಗ್ದೂ ನಯಸ್ಮಾಡೀ ಮೂರ್ ತಿಂಗಕಾಲ ಚಿತ್ತಾರ್ವ ಗೆಯ್ದು ಗೆಯ್ಮ ಮಾಡೀ ಗೊಂಬ ಕಂಡಂಗ ಮಾಡಿ ಇರುಸುದ್ರು ನಂಗ" ಎಂದು ಮಂಚವು ಮಾತು ನಿಲ್ಸಿ ತನ್ನ ಚಿಕ್ಕವಯಸ್ಸಿನ ಐಭೋಗವ ಕಣ್ಣುಗ ಕಟ್ಟಂಡು ಅದ ನೋಡ್ತಾ ನೋಡ್ತ ಅದ್ರೆ ಕಣ್ಣುಗ ಕಟ್ಗಂಡು ನೋಡ್ತ ತನ್ನನ್ನ ಮರ್ತು ಮರ್ತೇಹೋಯ್ತು.

ಮಂಚದ ಕಡೆಯಿಂದ ಮಾತು ನಿಂತೊಯ್ತಲೆ, ಆ ಮಾತಿನೊಳಗ ತನ್ನ ಮರೆಯೂತಿದ್ದ ಜೀವಾತ್ಮನಿಗೆ ಪಿಚ್ಚನಸಿ "ಈಗ್ಲೂನು ನಿಂಗ ಮದ್ವ ಮಾಡಿ ಕಳಿಸಂಗಿಯ ಇದ್ದಯೀಕಣಾ... ಮುಂದ್ಕ ಯಾನಾಯ್ತು...?" ಅಂತು ಆಗ ಮಂಚಕ ಎಚ್ಚರ ಆಗಿ ಅಯ್ಯೋ ಅಂತ ಆರಂಭಿಸಿತು:

"ಅಯ್ಯೋ ಯಾನ ಈಗ ಇರಾದು ನಾನು ? ಅಯ್ಯೋ ನನ್ನಪ್ಪಾ... ಆಗ ನೋಡ್‌ಬೇಕಿತ್ತು ನನ್ನ ನನ್ನಾ ನೋಡಾಕ ಅಂಲ್ಲೆಯ ಎಸ್ಟೋ ದೇಸ್ಸ ರಾಜು ಬರೋರು. ಬರೋರು ಎಸ್ಟ್ ಜನ್ವೋ, ಹೋಗುವರು ಎಸ್ಟ್ ಜನ್ವೋ. ಆಗ ಈ ನನ್ನ ಮಯ್ಮೇಲ ಒಂದು ಕೊಳೆ ಅನ್ನೋದು ಇತ್ತ? ಒಂದು ಗಲೀಜು ಅನ್ನೋದು ಇತ್ತ? ವಚ್ಚಾನ ವಸ ರೇಸ್ಮ ಬಟ್ಟಲಿಯ ನಂಗ ಒರುಸ್ತ ಇದ್ದೂದು. ಒಂದ್ಸಲ ಒರುಸ್ದ ಮ್ಯಾಲ ಅದ್ರಲ್ಲಿ ಇನ್ನೊಂದು ಸಲ ಒರುಸ್ತ ಇರ್ಲಿಲ್ಲ ನಂಗ. ಆ ಬಟ್ಯ ಎಸ್ದ್‌ಬುಡರು ಅತ್ತಗ. ಆಮೇಕಾ, ದಿನ ಬುಟ್ ದಿನಾ ಪುನುಗು ಕಸ್ತೂರ ಲೇಪ್ಸರೂ...

ಬಾಳಾಟ್ಟ ಹಿಂಗ ಮಾಡ್ಡವಳ್ಗಾ, ಗ್ರಾಚಾರ ಅನ್ನೋದು ಗುದ್ದಕ ಬಂದ್ರಾ, ನೋಡ್ಕ ಎಲ್ಲಿಗೆ ತಂದಿಡ್ತದ, ಈಗ ನನ್ನ ತಳ್ಕಂದು ಓಡಾಡವರು ಅದೆಷ್ಟು ಜನ್ವೂ! ಅದಿರ್ಲಿ, ಬತ್ತಾ ಅನ್ನಂಗಿಲ್ಲ. ಜೋಳರಾಗೀ ಅನ್ನಂಗಿಲ್ಲ, ಹುಳ್ಳಿ ಅನ್ನಂಗಿಲ್ಲಾ... ಅದೂ ಇರ್ಲಿ, ಕೊನಗ ದನ ತಿನ್ನೋ ಸತ್ತಸೆದ ಅನ್ನಂಗಿಲ್ಲಾ... ಎಲ್ಲಾನುವಿ ನನ್ಮೇಲ ಚಲ್ಲಾಡಿ ಚದುರಾಡಿ ಈ ರೂಪ್ಗ ತಂದಿಟ್ರಲ್ಲಾ... ಇಂಥಾ ಕಡನಾ ಇರ್ಬೇಕಲ್ಲಾ... ನಾ ಇರಬೌದ? ಅದೇನ್ ಪಾಪ್ಪಿ ಮಾಡಿರದು ನಾನು...?"

ಅನ್ನುವಷ್ಟಕ್ಕ ಮಾತ್ಗ ಮೊದ್ಲು ದುಕ್ಕವೇ ಉಕ್ಕಲು, ಅಲ್ಲುಗ ನಿಲ್ಸಿತು.

**ಆಕರ : ಕುಸುಮಬಾಲೆ (ಆಯ್ದ ಭಾಗಗಳು)**

**– ದೇವನೂರ ಮಹಾದೇವ**

# 3. ಮನುಷ್ಯನ ಸಾಮಾಜಿಕ ಸ್ವಭಾವ ಮತ್ತು ಸಮುದಾಯ

**ಜಯಪ್ರಕಾಶ ನಾರಾಯಣ**

**ಅನು : ಬಿ. ವೈ. ಲಲಿತಾಂಬ**

ಮನುಷ್ಯ ಒಂದು ಸಾಮಾಜಿಕ ಪ್ರಾಣಿ. ಅವನ ಸ್ವಭಾವವೇ ಸಾಮಾಜಿಕವಾದುದು. ಅವನು ಸಮಾಜದಲ್ಲಿ ಹುಟ್ಟಿ, ಸಮಾಜದಲ್ಲಿ ಬದುಕಿ ಅಲ್ಲಿಯೇ ಸಾಯುತ್ತಾನೆ. ಸ್ವಾಭಾವಿಕವಾಗಿ ಅವನು ತನ್ನ "ಸಮಾಜ"ಕ್ಕಾಗಿ ಅಥವಾ ಬೇರೆ ಮನುಷ್ಯರೊಂದಿಗೆ ಸಹಜೀವನಕ್ಕಾಗಿ ಹಾತೊರೆಯುತ್ತಾನೆ. ಪ್ರತಿಯೊಬ್ಬ ವ್ಯಕ್ತಿ ತನ್ನದೇ ಆದ ಬೇರೆ ವ್ಯಕ್ತಿತ್ವ ಹೊಂದಿರುತ್ತಾನೆ ; ಆದರೆ ಅವನು ಒಂದು ಸಮಾಜದ ವ್ಯಕ್ತಿಯಾದಾಗ ಅವನ ಈ ವ್ಯಕ್ತಿತ್ವ ಉದ್ದೇಶದಿಂದ ಕೂಡಿ ಸಾರ್ಥಕವಾಗುತ್ತದೆ. ಯಾವೊಬ್ಬ ಮನುಷ್ಯನೂ ಒಬ್ಬನೇ ಇರಲಾರ, ಹಾಗೆ ಒಬ್ಬನೇ ಇದ್ದರೂ ಅವನಿಗೆ ಮಾನವೀಯ ಮಹತ್ವ ಇರುವುದಿಲ್ಲ. ಆಗ ಅವನು ಪ್ರಕೃತಿಯ ಲೀಲೆ ಅಥವಾ ಒಂದು ಸಂಯೋಗವೆಂಬಂತೆ ಕಾಣುತ್ತಾನೆ. ಮಾನವ ಸಮಾಜದಿಂದ ಹೊರತಾಗುತ್ತಾನೆ, ಮನುಷ್ಯನಾಗಿರುವುದಿಲ್ಲ. ಇತಿಹಾಸದಲ್ಲಿ ಸಿಗುವ ಕೆಲವು ಅಪರೂಪದ ಪ್ರತಿರೂಪಗಳ ಹಾಗೆ ಒಂದು 'ವೃಕಮಾನವ' ಅಥವಾ ಅಂತಹುದೇ ಯಾವುದಾದರೂ ಜಂತುವಾಗಿರುತ್ತಾನೆ. ಇಷ್ಟೇ ಅಲ್ಲದೆ, ಸಮಾಜದಲ್ಲಿ ವ್ಯಕ್ತಿಯ ಸಂಬಂಧವು ಮರಳ ರಾಶಿಯಲ್ಲಿನ ಮರಳ ಕಣಗಳಂತೇನೂ ಅಲ್ಲವಲ್ಲಾ! ಒಂದು ಜೀವವಿರುವ ಶರೀರಕ್ಕೆ ಸಂಬಂಧಪಟ್ಟ ಜೀವಿತ ಕೋಶಾಣುವಿನ ಸಂಬಂಧದ ಹಾಗಿದೆ ಅವನ ಅಸ್ತಿತ್ವ, ಯಾವಾಗಲೂ ಮನುಷ್ಯ ಬೇರೆ ಮನುಷ್ಯರೊಂದಿಗೆ ಸಂಬಂಧ ಬೆಳಸಿಕೊಂಡೇ ಬದುಕುತ್ತಾನೆ. ಈ ಜೀವಿತ ಸಂಬಂಧಗಳು ಕೂಡಿ ಸಮಾಜವಾಗುತ್ತದೆ. ಸಮಾಜ ಬೇರೆ ಬೇರೆ ವ್ಯಕ್ತಿಗಳ ಜೋಡಣೆ ಮಾತ್ರವಲ್ಲ. ಒಂದು ಸಹಮಾನವೀಯ ಕಣಗಳ ಒಕ್ಕೂಡುವಿಕೆಯೇ.

ಆಧುನಿಕ ಪಾಶ್ಚಾತ್ಯ ಲೋಕತಂತ್ರವು ಮನುಷ್ಯನ ಸಾಮಾಜಿಕ ಸ್ವಭಾವವವಾಗಿತ್ತು. ಆತನ ಮಾನವೀಯ ಸಮಾಜದ ವಾಸ್ತವಿಕ ಸ್ವಭಾವವನ್ನೇ ನಿಷೇಧಿಸುತ್ತದೆ. ಈ ಲೋಕತಂತ್ರದಲ್ಲಿ ಬೇರೆ ಬೇರೆ ವ್ಯಕ್ತಿಕಣಗಳು ಮನಸ್ಸಿಲ್ಲದೆ ಗುಂಪು ಕೂಡುವರೆಂಬ ಕಲ್ಪನೆ ಇದೆ. ಇದು ಪರಮಾಣ್ವೀಕೃತ ಸಮಾಜದಲ್ಲಿನ ಕಲ್ಪನೆ ಇಂದಿನ ಲೋಕತಂತ್ರದ ರಾಜ್ಯವ್ಯವಸ್ಥೆ ವ್ಯಕ್ತಿಗತವಾಗಿ ಮತದಾರನು ಮತ ನೀಡುವ ಮೂಲಕ ರಚಿವಾಗುತ್ತದೆ. ಇದರಲ್ಲಿ ಲೋಕತಂತ್ರದ ಕ್ರಿಯೆಯೆಲ್ಲವೂ ಮತಗಳ ಗಣಿತದ ಮೇಲೆ ಆಧಾರಿತವಾಗಿವೆ. ವ್ಯಕ್ತಿಗತವಾಗಿ ಮತದಾರನು ಒಂದು ಪರಮಾಣುವಿನ ಹಾಗೆ, ಮತ ನೀಡುತ್ತಾನೆಯೇ ಹೊರತು ಬೇರೆಯ ಜೀವಿತ ಕೋಶಾಣುಗಳೊಡನೆ ಸಂಬಂಧ ಹೊಂದಿರುವ ಹಾಗಲ್ಲ. ಲೋಕತಂತ್ರದ ಸಂಸ್ಥೆಗಳು ಹಾಗೂ ಅವುಗಳ ಕಾರ್ಯದಲ್ಲಿ ಸಹಜೀವನ ಪ್ರಕಟವಾಗದೆ ಅಮೂರ್ತವಾದ ಒಂದು ಬೇರೆತನ ವ್ಯಕ್ತಿಯನ್ನು ಪ್ರತಿನಿಧಿಸುತ್ತದೆ.

ಪ್ರಾಚೀನ ಹಾಗೂ ಸಮೃದ್ಧ ಪರಂಪರೆಯನ್ನು ಉತ್ತರಾಧಿಕಾರತ್ವದಲ್ಲಿ ಪಡೆದಿರುವ ಏಷ್ಯಾದ ರಾಷ್ಟ್ರಗಳು ಈ ಮನದಿಂದ ಮೂಡದ ರಾಜ್ಯ ವ್ಯವಸ್ಥೆಯನ್ನು ಅನುಕರಿಸಲು ಹೊರಡುವುದೆಂದರೆ ಅದು ದುಃಖಕರ. ಕೈರೋದಿಂದ ಜಕಾರ್ತದವರೆಗೆ ಏಷ್ಯಾದ ರಾಷ್ಟ್ರಗಳು ಪುನಃ ಚಿಂತನೆ ನಡೆಸುತ್ತಲಿವೆ. ತಮ್ಮ ಲೋಕತಂತ್ರಾತ್ಮಕ

ಆಕಾಂಕ್ಷೆಗಳನ್ನು ರೂಪಿಸಿ ಸಾಕಾರಪಡಿಸಲು ಸಂಸತ್ತಿನ ಮುಖಾಂತರವಲ್ಲದೆ ಲೋಕತಂತ್ರದ ಇನ್ನೂ ಉತ್ತಮ ಮಾರ್ಗಗಳನ್ನು ಕಂಡುಹಿಡಿದು ಹೊರಟಿವೆ ಎನ್ನುವುದು ಸಂತಸದ ವಿಷಯ. ಭಾರತದ ವಿಷಯ ಹೇಳುವುದಾದರೆ, ಗಾಂಧೀಜಿ ಬಹಳ ಹಿಂದೆಯೇ ಸಂಸತ್ತಿನ ಲೋಕತಂತ್ರವನ್ನು ಆಸಫಲವೆಂದು ಘೋಷಿಸಿದ್ದರು. ಹಾಗೂ ಭಾರತದ ಪರಂಪರೆಗೆ ಒಗ್ಗುವ, ಮನುಷ್ಯನ ಸಹಜವಾದ ಸಾಮಾಜಿಕ ಸ್ವಭಾವಕ್ಕೆ ಅನುಗುಣವಾದ ಮಾನವ ಸಮಾಜಕ್ಕೆ ಹೆಚ್ಚು ಸರಿಹೊಂದುವಂತಹ ಬೇರೆ ಬೇರೆ ಯೋಜನೆಗಳನ್ನು ಮುಂದಿಟ್ಟಿದ್ದರು. 'ಲೋಕತಂತ್ರದ ಒಂದು ಹೊಸ ವಿಜ್ಞಾನ'ವನ್ನೆ ಭಾರತ ವಿಕಾಸಗೊಳಿಸಿ ಅದರ ಒಂದು 'ವಿಹಂಗಮ'ರೂಪವನ್ನು ಮುಂದಿಡುವುದೆಂದೂ ಅವರು ಆಶಿಸಿದರು.

ಸರಿಯಾದ ರಾಜ್ಯವ್ಯವಸ್ಥೆಯನ್ನು ಹುಡುಕುವುದು ಸಮಾಜದ ಪುನರ್ ನಿರ್ಮಾಣದ ದೊಡ್ಡ ಸಮಸ್ಯೆಗೆ ಸಂಬಂಧಿಸಿದ ಒಂದು ಪ್ರಶ್ನೆ. ಹಿಂದೆ ದುರಾಸೆ ಮತ್ತು ಜೀವನದ ಇತರ ನಕಲಿ ಮೌಲ್ಯಗಳು ಮನುಷ್ಯನ ಸಾಮಾಜಿಕ ಸ್ವಭಾವದ ಕ್ರಿಯೆಯನ್ನೇ ವಿಕೃತಗೊಳಿಸಿ ನಿಷ್ಫಲಗೊಳಿಸುತ್ತದ್ದವೆಂಬುದು ನಿಜ; ಆದರೆ ಈಗ ಮನುಷ್ಯ ಜಾಗೃತನಾಗಿ ತನ್ನ ಜೀವನವನ್ನು ಪುನ: ವ್ಯವಸ್ಥೆಗೊಳಿಸುತ್ತಿರುವಾಗಲಾದರೂ, ತನ್ನ ಸ್ವಭಾವಕ್ಕೆ ಅನುಗುಣವಾಗಿ ಆರ್ಥಿಕ ರಾಜಕೀಯ ಮತ್ತು ಇನ್ನಿತರ ಸಂಸ್ಥೆಗಳನ್ನು ಪಡೆಯಬೇಕು, ಆಧುನಿಕ ಉದ್ಯೋಗ ತಂತ್ರದಿಂದ ಉಂಟಾಗಿರುವ ಆರ್ಥಿಕವಾದದ ಭಾವನೆಯು ಪ್ರತಿಯೊಂದು ಮಾನವಮೌಲ್ಯವನ್ನೂ ಲಾಭ-ಹಾನಿ ಮತ್ತಿತರ ಹೇಳಿ ಕೇಳಿದ ಆರ್ಥಿಕ ಪ್ರಗತಿಯ ಹಂತಗಳಲ್ಲಿ ಅಳೆಯುತ್ತದೆ. ಹೀಗಾಗಿ ಮಾನವ ಸಮಾಜ ವಿಘಟಿತವಾಗಿ ಮನುಷ್ಯನನ್ನು ತನ್ನ ಮನುಷ್ಯ ಬಂಧುಗಳಿಂದ ದೂರವಾಗಿಸಿದೆ. ಪಶ್ಚಿಮದ ದೇಶಗಳಲ್ಲಿ ಸಮುದಾಯ ಒಡೆದು ಹೋಗಿದೆ. ಅಷ್ಟೇ ಅಲ್ಲ, ಪರಿವಾರ ಸಹ ಕ್ಷೀಣಕಾಯವಾಗಿದೆ. ತಾಯಿ ಅಥವಾ ಪರಿವಾರದ ಕೇಂದ್ರವಾಗಿದ್ದ-ಆತ್ಮವಾಗಿದ್ದ ಹೆಂಗಸು ತನ್ನ ಸ್ತ್ರೀತ್ವವನ್ನೇ ಕಳೆದುಕೊಳ್ಳುತ್ತಿದ್ದಾಳೆ. ಇಂದಿನ ನಾಗರಿಕತೆಯ ಸಮಸ್ಯೆ ಸಾಮಾಜಿಕ ಏಕೀಕರಣದ ಸಮಸ್ಯೆ. ಇಂದು ಮನುಷ್ಯ ಒಬ್ಬಂಟಿಗನಾಗಿ ಬೇರೆಯವರಿಂದ ದೂರವಾಗಿದ್ದಾನೆ ; 'ಸಂಘಟನ ಮಾನವ'ನಾಗಿ ತನ್ನ ದೃಷ್ಟಿ ಕ್ಷೇತ್ರ ಹಾಗೂ ನಿಯಂತ್ರಣಕ್ಕೆ ಹೊರತಾಗಿರುವ ಲೋಕತಾಂತ್ರಿಕ ಆಥವಾ ಸರ್ವಾಧಿಕಾರಿ ಶಕ್ತಿಗಳ ದಾಸನಾಗಿ ಆವರಿಚ್ಛೆಯಂತೆ ನಡೆಯುತ್ತಿದ್ದಾನೆ. ಮನುಷ್ಯ-ಮನುಷ್ಯನ ನಡುವೆ ಸಂಪರ್ಕ ಬೆಳೆಸಿ ಒಂದು ಅರ್ಥಪೂರ್ಣವಾದ ತಿಳುವಳಿಕೆಯಿಂದ ಕೂಡಿದ ನಿಯಂತ್ರಣಗಳಿರುವ ಸಂಬಂಧಗಳ ನಡುವೆ ಆತ ಕೂಡಿ ಬಾಳುವೆ ನಡೆಸುವಂತೆ ಮಾಡಬೇಕೆಂಬುದೇ ಇಂದಿನ ಸಮಸ್ಯೆ, ಸಂಕ್ಷೇಪವಾಗಿ ಇದು ಮಾನವ ಸಮುದಾಯವನ್ನು ಪುನರ್ನಿರ್ಮಿಸುವ ಸಮಸ್ಯೆ ಎನ್ನಬಹುದು.

ನಾವೀಗ ಸಮುದಾಯದ ಕಡೆ ಗಮನ ಹರಿಸೋಣ. ಅನೇಕ ಪರಿವಾರಗಳು ದೃಷ್ಟಿಯಿಂದ ಹತ್ತಿರವಿರುವುದು ಸಮುದಾಯ ನಿರ್ಮಾಣಕ್ಕೆ ಆರಂಭ ಬಿಂದು ಹಾಗೂ ಅದು ಒಂದು ಅತಿ ಮಹತ್ವಪೂರ್ಣವಾದ ಅವಶ್ಯಕತೆ. ಇಷ್ಟಾದ ಮಾತ್ರಕ್ಕೇ ಸಮುದಾಯ ತನ್ನಿಂದ ತಾನೇ ನಿರ್ಮಿತವಾಗುವುದಿಲ್ಲ. ಉದಾಹರಣೆಗೆ, ಈಗಿನ ಭಾರತದ ಹಳ್ಳಿಗಳು ಸಮುಚಿತ ಸಮುದಾಯವಲ್ಲ, ಒಂದು ಕಾಲದಲ್ಲಿ ಇವು ಈ ತರಹೆಯ ಸಮುದಾಯಗಳಾಗಿದ್ದವಾದರೂ ಇಂದು ಕ್ಷೇತ್ರದ ಉಪನಿವೇಶ ಮಾತ್ರವಾಗಿವೆ. ಇಲ್ಲಿ ಸಾಮುದಾಯಿಕ ಜೀವನ ವ್ಯಕ್ತಿಗತ ಜೀವನವಿದೆ. ನಿಜವಾದ

ಸಮುದಾಯದಲ್ಲಿ ಒಬ್ಬರನ್ನೊಬ್ಬರು ನೋಡಿ ಜೀವನ ಮಾಡುತ್ತಾರೆ. ಅವರ ನಡುವೆ ಸಮಾನವಾದ ಹಂಚಿಕೆ, ವಿವಿಧತೆಯಲ್ಲಿ ಏಕತೆಯ ಭಾವನೆ, ಸರ್ವಮಾನ್ಯ ಸಾಮಾಜಿಕ ಜವಾಬ್ದಾರಿಗಳ ರೂಪರೇಷೆಗಳ ನಡುವೆ ಸ್ವತಂತ್ರತೆಯ ಅನುಭವ: ಎಲ್ಲ ಬೇರೆ ಬೇರೆಯ ಕೆಲಸಗಳಲ್ಲಿಯೂ ಸಮುದಾಯ ಹಾಗೂ ಅದರ ಸದಸ್ಯರ ಹಿತದ ಒಂದೇ ಗುರಿ ಎದ್ದು ಕಾಣುತ್ತದೆ. ಜಾತಿ, ವರ್ಗ, ವಂಶ, ಧರ್ಮ, ರಾಜಕೀಯ– ಇವೆಲ್ಲ ಮನುಷ್ಯರನ್ನು ಬೇರೆ ಬೇರೆಯ, ಅನೇಕ ವೇಳೆ ಪರಸ್ಪರ ವಿರೋಧಿ ಸಮೂಹಗಳಲ್ಲಿ ವಿಂಗಡಿಸುತ್ತದೆ. ಸಮುದಾಯ ಅವರನ್ನು ಒಕ್ಕೂಡಿಸಿ  ಅವರನ್ನು  ಅದರ ಒಂದಾಗಿ ಅವರ ಹಿತಗಳನ್ನು ಕೂಡಿಸುತ್ತದೆ. ಸಮುದಾಯದಲ್ಲಿ ಕೃಷಿ, ಉದ್ಯೋಗ, ಬಂಡವಾಳ, ಶ್ರಮ ಕುಶಲತೆ, ಬುದ್ಧಿ ಇವೆಲ್ಲವೂ ಒಳಜಗಳದಲ್ಲಿ ಹಾಲಾಗದೆ ಸಮುದಾಯದ ಸೇವೆಗಾಗಿ ಸೇರುತ್ತವೆ. ಉತ್ಪಾದನೆ, ಉಪಭೋಗ ಇವು ದೂರುದಲ್ಲಿರುವ ಯಾರೋ ನಡೆಸಿದ ಆರ್ಥಿಕ ವ್ಯಾಪಾರದಂತೆ ವಿರೋಧಿ ಸಮಸ್ಯೆಗಳಾಗಿರುವುದಿಲ್ಲ, ಒಂದೇ ಒಂದು ಪ್ರತ್ಯಕ್ಷ ಉದ್ದೇಶದ ಪೂರ್ತಿಗಾಗಿ ಸಾಧನೆಯಲ್ಲಿ ತೊಡಗಿರುವ ಒಗ್ಗಟ್ಟಿನ ಕಾರ್ಯವಾಗಿರುತ್ತವೆ. ಸಮುದಾಯವು ವ್ಯಕ್ತಿಗತ ಸಂಬಂಧಗಳಿಂದ ನಿರ್ಮಿತವಾಗುತ್ತದೆ. ಅದರಲ್ಲಿ ಸ್ವೇಚ್ಛೇ, ಸ್ವತಂತ್ರ ಸಂಕಲ್ಪಗಳು ತಾವೇ ಹಾಕಿಕೊಂಡ ನಿಯಮಗಳು. ಸಾಮಾನ್ಯ ಸಂಸ್ಕೃತಿಯ ಸೀಮೆಯಲ್ಲಿ ಅದು ತನ್ನ ಪಾತ್ರ ನಿರ್ವಹಿಸುತ್ತದೆ. ಸಮುದಾಯದಲ್ಲಿ ಸದಸ್ಯರೆಲ್ಲರೂ ಸಾಮಾನ್ಯ ಸಂಸ್ಕೃತಿಯ ಸೀಮೆಯಲ್ಲಿ ಅದು ತನ್ನ ಪಾತ್ರ ನಿರ್ವಹಿಸುತ್ತದೆ. ಸಮುದಾಯದಲ್ಲಿ ಕಾರ್ಯಕ್ರಮಗಳಲ್ಲಿ ಮನಃಪೂರ್ವಕವಾಗಿ ಭಾಗವಹಿಸುತ್ತಾರೆ. ಸಮುದಾಯ ಒಂದು ಸಹಕಾರಿ ಸಮಾಜ. ಸಮುದಾಯ ಹಾಗೂ ಒಂದು ಸಾಧಾರಣ ಸಹಕಾರಿ ಸಮಿತಿಯ ನಡುವೆ ಇರುವ ಅಂತರವೆಂದರೆ, ಸಮದಾಯದಲ್ಲಿ ಸಹಕಾರ ಬರಿಯ ಆರ್ಥಿಕ ಕ್ಷೇತ್ರಕ್ಕೆ ಸೀಮಿತವಾಗಿರುವುದಿಲ್ಲ ಸಂಪೂರ್ಣ ಜೀವನದಲ್ಲೇ ಸಹಕಾರವಿರುತ್ತದೆ. ಕೆಲವಂಶಗಳನ್ನೂ ಕೊಳ್ಳುವವರನ್ನು ಮಾತ್ರ ಸೀಮಿತಗೊಳಿಸುವುದಿಲ್ಲ. ಸಮುದಾಯದ ಪ್ರತಿಯೊಬ್ಬ  ಸದಸ್ಯರನೂ ಎಲ್ಲರ ಇದರೊಳಗೆ ಸೇರಿಸಿಕೊಳ್ಳುತ್ತದೆ. ಸಮುದಾಯದ ಪ್ರತಿಯೊಬ್ಬ ಸದಸ್ಯನೂ ಎಲ್ಲರ ಸುಖದುಃಖಗಳನ್ನು ಸಮವಾಗಿ ಹಂಚಿಕೊಳ್ಳುತ್ತಾನೆ. ಒಳಸಮಸ್ಯೆಗಳನ್ನು ಸಮುದಾಯ ತಾನೇ ಪರಿಹರಿಸುತ್ತದೆ. ಅದು ಸ್ವಾಯತ್ತವಾಗಿರುತ್ತದೆ. ವಿಭಜನೆ ಸಮುದಾಯಕ್ಕೆ ವಿಷ ; ಆದುದರಿಂದ ಅಲ್ಲಿ ಯಾವಾಗಲೂ ಅತಿ ಉತ್ತಮವಾದ ಸಾಮಾನ್ಯ ತತ್ವವನ್ನು ಕಂಡುಹಿಡಿಯುವ ಪ್ರಯತ್ನವೇ ನಡೆಯುತ್ತದೆ.

ಭಾರತದ ಗ್ರಾಮ ಸಮುದಾಯಗಳಲ್ಲಿ ಕಾರ್ಯಪಾಲಕ ಪದವಿಗಳಿಗಾಗಿ, ಇಂದಿನ ಬಹುಮತ–ಅಲ್ಪಮತದ ಪದ್ಧತಿಯಲ್ಲಿ  ನಡೆಯುವ ವಿಘಟನಕರ ಕ್ರಮದಲ್ಲಿ ಚುನಾವಣೆಗಳು ನಡೆಯುತ್ತಿರಲಿಲ್ಲ. ಪದಾಧಿಕಾರಿಗಳನ್ನು ಎಲ್ಲರ ಸಹಮತಿಯಿಂದ  ಅಥವಾ ಚೀಟಿ ಎತ್ತಿ ಆರಿಸುತ್ತಿದ್ದರು.

ಮೇಲೆ ವರ್ಣಿಸಿದ ಇಂಥ ಸಮುದಾಯವು ಹಿಂದೆ ಆಸ್ತಿತ್ವದಲ್ಲಿ ಇತ್ತೆಂದಾಗಲಿ, ಜನ ಚಿಕ್ಕ ಭೂಭಾಗದ ಕ್ಷೇತ್ರಗಳಲ್ಲಿ ಇರತೊಡಗಿ ಸಮುದಾಯ ಸ್ವತಃ ಸ್ಥಾಪಿತವಾಗುತ್ತದೆ, ಎಂದಾಗಲಿ ನಾನು  ತಿಳಿದಿಲ್ಲ. ಹಾಗೆ ಆಗುವುದಾಗಿದ್ದರೆ, ಭಾರತದ ಹಳ್ಳಿಗಳೆಲ್ಲವೂ ಆದರ್ಶ ಸಮುದಾಯಗಳಾಗಿರುತ್ತಿದ್ದವು, ಹಾಗಿದ್ದರೂ, ಇಂತಹ ಸಮುದಾಯವೊಂದು 'ಭಾವಿ ಸಮಾಜದ ಆದರ್ಶವಾಗಬೇಕೆಂದು ನಾನು ಒತ್ತಿ ಹೇಳುತ್ತೇನೆ. ಆಗ ಮಾತ್ರ ಮನುಷ್ಯನ ಸಾಮಾಜಿಕ ಸ್ವಭಾವ ಮತ್ತು ಆಧುನಿಕ ಸಭ್ಯತೆಯ ಮಹಾನ್ ಮಾನವೀಯ ಆದರ್ಶಗಳು ಅರಳಬಹುದು. ನಿಜವಾದ ಲೋಕತಂತ್ರ

ಆಗಲೇ ನಿರ್ಮಿತವಾಗುವುದು.

ಪಶ್ಚಿಮದ ದೇಶಗಳಲ್ಲಿ ದೊಡ್ಡ ಔದ್ಯೋಗೀಕರಣ, ನಗರೀಕರಣವಾಗಿರುವುದರಿಂದ, ಈಗಿನಿಂದಲೇ ಅಲ್ಲಿ ಅನೇಕ ಚಿಂತನಶೀಲ ವ್ಯಕ್ತಿಗಳು ಈ ವಿಷಯವನ್ನು ಗಂಭೀರವಾಗಿ ವಿಚಾರ ಮಾಡುತ್ತಿದ್ದರೂ ಅಲ್ಲಿ ಇಂತಹ ಸಮುದಾಯಗಳ ನಿರ್ಮಾಣ ಕಠಿಣವಾದೀತು. ಆದರೆ ಭಾರತದಲ್ಲಿ ನಾವು ಮತ್ತು ಸರ್ವಾಧಿಕಾರಕ್ಕೊಳಗಾಗಿರುವ ಏಷ್ಯಾದ ದೇಶಗಳ ಪ್ರಜೆಗಳು ಸಮುದಾಯಗಳನ್ನು ಆರಂಭಿಸಲು ಬಹಳ ಅನುಕೂಲಕರವಾದ ಸ್ಥಿತಿಯಲ್ಲಿದ್ದೇವೆಂದು ನಾನು ನಂಬುತ್ತೇನೆ.

ಸಮುದಾಯದ ವಿಷಯವಾಗಿ ಇನ್ನೂ ಹೆಚ್ಚು ವಿಚಾರ ಮಾಡುವ ಮೊದಲ ವಿಜ್ಞಾನ ಹಾಗೂ ಸಾಮಾಜಿಕ ಸಂಘಟನೆಯ ಮೇಲೆ ಆದರ ಪ್ರಭಾವವನ್ನೂ ಕುರಿತು ಸಂಕ್ಷಿಪ್ತವಾಗಿ ವಿಚಾರ ಮಾಡುವುದು ಒಳ್ಳೆಯದು. ಕೆಲವರು ಚಿಕ್ಕ ಚಿಕ್ಕ ಸ್ಥಾನದ ಕ್ಷೇತ್ರಗಳ ಸಮುದಾಯಗಳು ಯಾವುವೋ ಹಳ್ಳಿಯ ಜೀವನ ರಚನೆಗೆ ಸರಿ ಹೊಂದಬಹುದು; ಆದರೆ ಔದ್ಯೋಗೀಕರಣದ ಈ ಯುಗದಲ್ಲಿ ಅವು ಪ್ರಾಚೀನ ನಾಗರಿಕತೆಯ ಅದ್ಭುತವಾದ ಪ್ರತೀಕಗಳೇ ಹೊರತು ಈ ಯುಗದಲ್ಲಿ ಅವುಗಳಿಗೆ ಯಾವ ಸ್ಥಾನವೂ ಇಲ್ಲ– ಎಂದು ಹೇಳಬಹುದು. ಔದ್ಯೋಗೀಕರಣ ಮತ್ತು ನಗರೀಕರಣ ಇವು ಅವಶ್ಯಕತೆಯ ಜೊತೆ ಜೊತೆಯಲ್ಲಿಯೇ ಸಾಗುವಂತಹವು ಎಂದೂ ಹೇಳಬಹುದು.

ನಾನು ಈ ವಿಚಾರವನ್ನು ಸ್ವಲ್ಪವೂ ಒಪ್ಪುವುದಿಲ್ಲ. ನಗರೀಕರಣ ಮತ್ತು ಗ್ರಾಮ ಜೀವನಗಳ ನಡುವೆ ಆಯ್ಕೆ ಮಾಡಬೇಕಾಗಿಲ್ಲ. ನಾಗರಿಕ– ಕೃಷಿ ಇವೆರಡೂ ಮನುಷ್ಯನ ಜೀವನದ ವಿಕಾಸಕ್ಕೆ ಅಗತ್ಯ. ಉದ್ಯೋಗದ ಪ್ರಶ್ನೆಯನ್ನು ಸಂಪೂರ್ಣ ಮನುಷ್ಯನ ದೃಷ್ಟಿಕೋನದಿಂದ ನೋಡಬೇಕು. ಉದ್ಯೋಗ ಮನುಷ್ಯನಿಗಾಗಿದೆಯೇ ಹೊರತು, ಮನುಷ್ಯ ಉದ್ಯೋಗಕ್ಕಾಗಿ ಅಲ್ಲ ಎಂಬುದನ್ನು ಮರೆಯಬಾರದು. ಕೆಲವರು ತಾಂತ್ರಿಕತೆಯ ವಿಷಯವಾಗಿ, ಅವು ಭೂಕಂಪದಂತಹ ಪ್ರಾಕೃತಿಕ ಶಕ್ತಿಗಳೇನೋ, ನಾವು ಅದನ್ನನುಸರಿಸದೆ ವಿಧಿಯೇ ಇಲ್ಲ ಎಂಬ ಹಾಗೆಲ್ಲ ಮಾತನಾಡುತ್ತಾರೆ. ವಿಜ್ಞಾನ ಉದ್ಯೋಗ ಇವೆರಡೂ ಮಾನವನ ಮಸ್ತಿಷ್ಕದಿಂದ ನಿರ್ಮಿತವಾದವು, ಅವುಗಳನ್ನು ಮನುಷ್ಯನಿಗೆ ಅನುಕೂಲವಾಗುವಂತೆ ಮಾಡಬೇಕು. ಆಗಿರುವುದೂ ಅಷ್ಟೇ ಆದರೆ ಮನುಷ್ಯನ ಗುರಿಯೇ ಅಷ್ಟು ಉನ್ನತ ಯೋಗ್ಯವಾಗಿಲ್ಲ. ವಿಜ್ಞಾನ, ಅದರ ಸಂತಾನವಾದ ತಂತ್ರ ಇವೆರಡನ್ನೂ ಮುಖ್ಯವಾಗಿ ವ್ಯಕ್ತಿಗಳ ಲಾಭಕ್ಕಾಗಿ ಅಥವಾ ಅಧಿಕಾರದ ಸೇವೆಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಇವುಗಳಲ್ಲಿ ಮೊದಲನೆಯದನ್ನು ಬಂಡವಾಳಶಾಹಿ ವ್ಯವಸ್ಥೆಯೂ ಎರಡನೆಯದನ್ನು ಲೋಕತಂತ್ರ ಅಥವಾ ಸರ್ವಾಧಿಕಾರ ಕೇಂದ್ರೀಕೃತ ರಾಜವೂ ಪ್ರತಿನಿಧಿಸುತ್ತದೆ.

ವಿಜ್ಞಾನವನ್ನು ತಟಸ್ಥವೆಂದು ನೈತಿಕತೆ ಇಲ್ಲದ್ದೆಂದು ಹೇಳಿ ಎಲ್ಲ ದೋಷವನ್ನು ಮನುಷ್ಯನಮೇಲೆ ಹೊರಿಸುವುದು ಸಾಮನ್ಯ. ಅವನು ತಟಸ್ಥ ಹೇಳುವುದರಲ್ಲ ಅರ್ಥವಿಲ್ಲ. ವಿಜ್ಞಾನ ಒಂದು ಗುರಿಯಿರುವ ಮಾನವೀಯ ಪ್ರಯಾಸವಷ್ಟೆ, ಆದುದರಿಂದ ಅದನ್ನು ನೈತಿಕ ದೃಷ್ಟಿಯಿಂದ ತಟಸ್ಥ ಎನ್ನಲಾಗದು. ವಿಜ್ಞಾನ ಮನುಷ್ಯನ ಜೀವನವನ್ನು ಸುಖಿಯಾಗಿಸಿ, ಮಾನವ ಮೌಲ್ಯಗಳನ್ನು ಹೆಚ್ಚಿಸುವಲ್ಲಿ ಸಹಾಯಕವಾಗಿದ್ದರೆ ಅದು ಮಿಥ್ಯಾ ವಿಜ್ಞಾನವಾಗುತ್ತದೆ. ವಿಜ್ಞಾನದಿಂದಾಗಿ ಮಾನವಸಮಾಜ ಮುರಿದು ಹೋಗಿದ್ದರೆ, ಮನುಷ್ಯ ತನ್ನ ಬಂಧುಗಳಿಂದ ಬೇರ್ಪಟ್ಟಿದ್ದರೆ

ತಿಮಿಂಗಿಲದಂತದ ಫಿಶಾಲಕಾಯ ಆರ್ಥಿಕ–ರಾಜ ನೈತಿಕ ಸ್ವರೂಪಗಳು ರಚಿತವಾಗಿ ಮನುಷ್ಯ ಅದಕ್ಕೆ ಗುಲಾಮನಾಗಿ ಸ್ವಯಂಚಾಲಿತ ಯಂತ್ರದಂತಾಗಿದ್ದರೆ, ಆ ವಿಜ್ಞಾನವನ್ನು ಮಿಥ್ಯಾವಿಜ್ಞಾನವೆಂದು ಭಾವಿಸಿ ಅದನ್ನು ತ್ಯಜಿಸಬೇಕು. ಶ್ರೇಷ್ಠ ಜೀವನ ಪದ್ಧತಿಗೆ ಸಾಧನವಾಗುವ ಹೊಸ ವಿಜ್ಞಾನ ಮತ್ತು ತಂತ್ರವನ್ನು ಕಂಡುಹಿಡಿಯಬೇಕು, ವಿಜ್ಞಾನದ ವ್ಯಾಪಾರೀಕರಣವನ್ನು ತ್ಯಜಿಸಿ ಅದನ್ನು ಮಾನವೀಕರಿಸಬೇಕು: ಅಧಿಕಾರ ಮತ್ತು ಶೋಷಣೆಗಾಗಿ ವಿಜ್ಞಾನವನ್ನು ಬಳಸುವುದನ್ನು ತಪ್ಪಿಸಿ ಬಿಟ್ಟು ಸುಖ–ಶಾಂತಿಗಾಗಿ ಅದನ್ನು ಸದುಪಯೋಗಪಡಿಸಿಕೊಳ್ಳಬೇಕು.

ನಗರಗಳಲ್ಲಿ ಪಶುಗಳ ಗುಂಪಿನ ಹಾಗೆ ಇರುವುದಕ್ಕಿಂತ ಚಿಕ್ಕ–ಪುಟ್ಟ ಸಮುದಾಯಗಳಲ್ಲಿ ಮಾನವರಂತೆ ಇರುವುದು ಒಳ್ಳೆಯದು ಮತ್ತು ಸ್ವಯಂಚಾಲಿತ ಯಂತ್ರದ ಹಾಗೆ ಇರುವುದಕ್ಕಿಂತ ಚೈತನ್ಯಯುತ ಮನುಷ್ಯನಾಗಿರುವುದು ಒಳ್ಳೆಯದು. ಯಾವುದೋ ಮರಳ ರಾಶಿಯಲ್ಲಿ ಮರಳ ಕಣಗಳ ಹಾಗಿರುವುದಕ್ಕಿಂತ ಯಾವುದಾದರೂ ಸಮುದಾಯದ ಸದಸ್ಯನಾಗಿರುವುದು ಒಳ್ಳೆಯದು ಎಂದು ಮನುಷ್ಯ ನಿಶ್ಚಯಿಸಿದರೆ ಈ ಮೇಲಣ ತಂತ್ರವನ್ನು ವಿಕಾಸಗೊಳಿಸಲು ವಿಜ್ಞಾನಿಗಳಿಗೆ ಯಾವ ಕಷ್ಟವೂ ಆಗಲಾರದು.

ನಾವು ಕಲ್ಪಿಸುವ ಸಮಾಜ 'ನಾಗರಿಕ' ಅಥವಾ 'ಗ್ರಾಮೀಣ' ಯಾವದೊಂದು ಆಗಿರಲಾರದು. ಸಾಮುದಾಯಿಕ ಸಮಾಜವೆಂಬುದು ಅದಕ್ಕಿರುವ ಹೆಸರು. ಅದು ಸರಿಯಾದ ಅರ್ಥದಲ್ಲಿ ಸಮಾಜವೆನಿಸುವುದು. ವಿಜ್ಞಾನದ ವಿಕಾಸದಿಂದ ನಾಗರಿಕ–ಗ್ರಾಮೀಣ ಎಂಬ ಅಂತರ ದೂರವಾಗಿದೆ. ಭವಿಷ್ಯದ ಸಮುದಾಯಗಳಲ್ಲಿ ಕೃಷಿ ಮತ್ತು ಉದ್ಯೋಗ ಇವೆರಡೂ ಸೇರುತ್ತವೆ. ಅವು ವಿಜ್ಞಾನ ತಂತ್ರ ಇವೆರಡನ್ನೂ ಜೀವನದ ಗುರಿಗಳ ಸಿದ್ಧಿಗಾಗಿ ಉಪಯೋಗಿಸಿ ಕಂಡ ಕೃಷಿ ಔದ್ಯೋಗಿಕ ಸಮುದಾಯಗಳಾಗಿರುತ್ತವೆ. ಭೌಗೋಳಿಕ ಐತಿಹಾಸಿಕ ಪರಿಸ್ಥಿತಿಗಳಿಂದಾಗಿ ಕೃಷಿ ಒಂದು ಹಳ್ಳಿಯಲ್ಲಿಯೂ ಉದ್ಯೋಗ ಇನ್ನೊಂದು ಹಳ್ಳಿಯಲ್ಲಿಯೂ ಪ್ರಧಾನವಾಗಿ ಕಂಡುಬಂದರೂ ಸಹ ಅಂದರೆ ಸಂತುಲನ ಜನರ ಆದರ್ಶವಾಗುತ್ತದೆ. ಜನಸಂದಣಿಯನ್ನು ಕಡಿಮೆ ಮಾಡಿ ಸ್ವಸ್ಥ ಜೀವನ ಪರಿಸ್ಥಿತಿಯನ್ನು ನಿರ್ಮಿಸಲು ದೊಡ್ಡ ನಗರಗಳಲ್ಲಿ ರಾಕ್ಷಸನ ಆಕಾರದಲ್ಲಿರುವ ಜನ ಸಂಖ್ಯೆಯನ್ನು ಸಾಧ್ಯವಾದಷ್ಟು ಒಡೆದು, ಮಿಕ್ಕದ್ದನ್ನು ಈ ರೀತಿ ಪುನ: ಸಂಘಟಿಸಿ ಅದನ್ನು ಸಾಧ್ಯವಾದಷ್ಟು ಲಘು ಸಮುದಾಯ ಸಂಘಗಳಾಗಿ ಪರಿವರ್ತಿಸಬೇಕು. ಹೀಗೆ ಮಾಡಲು ಸಾಧ್ಯವಾಗದಿರುವ ಕಡೆಗಳಲ್ಲಿ ದೊಡ್ಡನಗರಳನ್ನು ಸೈರಿಸಬೇಕು; ಅದರೆ ಅವು ಇನ್ನು ದೊಡ್ಡವಾಗಿ ಬೆಳೆಯದಿರುವ ಹಾಗೆ ನೋಡಿಕೊಳ್ಳಬೇಕು.

ಸ್ಥಾನಿಕ ಅಥವಾ ಪ್ರಾಥಮಿಕ ಸಮುದಾಯ ಎಷ್ಟು ದೊಡ್ಡದಾಗಿರಬೇಕೆಂದು ನೀವು ಪ್ರಶ್ನಿಸಬಹುದು. ಇದಕ್ಕೆ ಮುಂಚೆಯೇ ಸಿದ್ಧಪಡಿಸಿದ ಉತ್ತರ–ಯಾವುದೂ ಇಲ್ಲ; ಯಾವ ಯಾಂತ್ರಿಕ ಮಾನದಂಡವೂ ಇಲ್ಲ. ಆರಂಭದ ಸಮುದಾಯಗಳು ಮನಃಪರಿವಾರದಿಂದ ರಚಿತವಾಗುತ್ತವೆ ಆದುದರಿಂದ ಅವುಗಳ ಆಕಾರ ಭೇದಗಳು ಎಷ್ಟೋ ವಿಷಯಗಳ ಮೇಲೆ ದುರ್ಭರವಾಗುತ್ತವೆ. ಸಾಮುದಾಯಿಕ ಜೀವನ ಮತ್ತು ಸಂಸ್ಕೃತಿಯ ಸಂತುಲಿತ ವಿಕಾಸವೇ ಕುಂಠಿತವಾಗುವಷ್ಟು ಚಿಕ್ಕದೂ ಆಗಬಾರದು. ಜೀವನವೇ ಅವೈಯಕ್ತಿಕವಾಗುವಷ್ಟು ದೊಡ್ಡದೂ ಆಗಬಾರದು. ಭಾರತದಲ್ಲಿ ರಾಜಸ್ವಗ್ರಾಮ' ಎಂಬುದು ಒಂದು ಸುಂದರ ನಿರ್ವಚನ. ಇಲ್ಲಿನ ನಿವಾಸಿಗಳೆಲ್ಲರೂ ಒಬ್ಬರೊಡನೊಬ್ಬರು ತಮ್ಮತನದ ಭಾವನೆಯನ್ನು ಅನುಭವಿಸುತ್ತಾದರೂ ಭಾರತದಲ್ಲಿ ರಾಜಸ್ವಗ್ರಾಮವನ್ನು ಆರಂಭಿಕ

ಸಮುದಾಯವೆಂದು ಹೇಳಬಹುದು. ರಾಜಸ್ವಗ್ರಾಮ ಅತಿ ದೊಡ್ಡದಾಗಿರುವ ರಾಜ್ಯಗಳಲ್ಲಿ, ಒಂದು ಕೃತ್ರಿಮವಾದ ಶಾಖೆಯಾಗಿ ಕಂಡುಬಂದ ಕಡೆಗಳಲ್ಲಿ ಹೊಸ ಎಲ್ಲೆ ಕಟ್ಟಬೇಕು.

ಇಲ್ಲಿಯವರೆಗೆ ನಾವು ಸ್ಥಾನೀಯ ಅಥವಾ ಆರಂಭಿಕ ಸಮುದಾಯವನ್ನು ಕುರಿತು ಚರ್ಚಿಸಿದೆವು. ಈ ಸಮುದಾಯವು ಮನುಷ್ಯನ ಸಾಮಾಜಿಕ ಸ್ವಭಾವದ ಸೃಷ್ಟಿ ಹಾಗೂ ನಾವು ರಚಿಸಬೇಕಾದ ಸಮಾಜದ ಸ್ವರೂಪ ಒಂದು ಕನಿಷ್ಠಮಿತಿ ಎಂಬುದನ್ನು ತೋರಿಸಿದೆವು. ಈಗ ಆ ಚೌಕಟ್ಟನ್ನು ರಚಿಸುವುದು ಹೇಗೆ ಎಂಬುದನ್ನು ಚರ್ಚಿಸೋಣ. ಆ ಸಮಾಜವು ಪ್ರಾಥಮಿಕ ಸಮುದಾಯಗಳ ಒಂದು ಮೊತ್ತ ಮಾತ್ರವೇನು? ಪ್ರಾಥಮಿಕ ಸಮುದಾಯಗಳು ಮೊತ್ತ ಮಾತ್ರವಾಗಿ ಉಳಿದರೆ ಅದು ಪಶ್ಚಿಮದ ದೇಶಗಳ ಸಮಾಜದಂತೆಯೇ ವ್ಯಕ್ತಿಗಳನ್ನು ಒಂದೆಡೆ ಕೂಡಿಸುವ ಗಣಿತವನ್ನಾಧರಿಸಿದ ಅನೇಕ ಪರಿವಾರಗಳು ಸೇರಿ ಸಾಮುದಾಯಿಕ ಜೀವನದ ನಿರ್ಮಾಣಕ್ಕೆ ಪರಸ್ಪರ ಸಹಕಾರ ನೀಡುವಂತೆಯೇ ಪ್ರಾಥಮಿಕ ಸಮುದಾಯಗಳು ಸೇರಿ ಒಂದು ಸಮಾಜವನ್ನು ರಚಿಸುತ್ತವೆ; ಸಾಮಾನ್ಯ ಸಮಸ್ಯೆಗಳನ್ನು ಬಿಡಿಸಿ, ಸಾಮಾನ್ಯ ಗುರಿ ತಲಪುವ ಮಿಕ್ಕ ಪ್ರಾಥಮಿಕ ಸಮುದಾಯಗಳು ಸಹಕಾರ ನೀಡುತ್ತವೆ.

ದೂರು–ದೂರವಿರುವ ಪ್ರಾಥಮಿಕ ಸಮುದಾಯಗಳು ಇಂತಹ ಸಹಕಾರದಿಂದ ಕೂಡಿದ ಕಲಾಪಗಳನ್ನು ನಡೆಸುವುದು ಕಷ್ಟವಾಗುವುದು. ಆದುದರಿಂದ ಒಂದು ಸುಸಂಬದ್ಧ ಸಮಾಜವನ್ನು ನಿರ್ಮಿಸಲು ಹೊರಟಾಗ ಮೊಟ್ಟ ಮೊದಲು ನೆರೆಯಲ್ಲಿರುವ ಪ್ರಾಥಮಿಕ ಸಮುದಾಯಗಳು ರಚಿಸಬೇಕು. ತಮ್ಮಲ್ಲೇ ಸಾಧ್ಯವಾದಷ್ಟು ಸಾಧನಗಳನ್ನು ಪಡೆದುಕೊಂಡು ಪ್ರಾಥಮಿಕ ಸಮುದಾಯ ಕಾರ್ಯನಡೆಸುತ್ತದೆ. ಆದರೂ ಎಷ್ಟೋ ಕೆಲಸಗಳು ಪ್ರಾಥಮಿಕ ಸಮುದಾಯದ ಸಾಧನಗಳ ಶಕ್ತಿಗೆ ಮೀರಿದುವಾಗಿರುತ್ತವೆ. ಉದಾಹರಣೆಗಾಗಿ ಪ್ರತಿಯೊಂದು ಪ್ರಾಥಮಿಕ ಸಮುದಾಯವೂ ಪ್ರಾಥಮಿಕ ಪಾಠಶಾಲೆ, ಪ್ರಾಥಮಿಕ ಆರೋಗ್ಯ ಸೇವೆ, ಬಾವಿ, ಹಳ್ಳಿಯ ಕೊಳ, ಚಿಕ್ಕ ನೀರಾವರಿ ಕಾರ್ಯಗಳು, ಗ್ರಾಮೋದ್ಯೋಗದ ವ್ಯವಸ್ಥೆ ಮಾಡಬಲ್ಲದು. ಆದರೆ ಉಚ್ಚ ನ್ಯಾಯಾಲಯ, ರೋಗಿಗಳ ಚಿಕಿತ್ಸಾಲಯ, ವಿದ್ಯುತ್ ಪೂರೈಕೆ ಮತ್ತು ರಿಪೇರಿ, ದೊಡ್ಡ ನೀರಾವರಿ ಕೆಲಸಗಳು ಇವೆಲ್ಲದರ ವ್ಯವಸ್ಥೆಗೆ ಅನೇಕ ಪ್ರಾಥಮಿಕ ಸಮುದಾಯಗಳಲ್ಲಿ ಪರಸ್ಪರ ಸಹಾಯ ಮಾಡಬೇಕಾಗುವುದು, ಹೀಗೆ ಕ್ಷೇತ್ರಿಯ ಸಮುದಾಯದ ವಿಕಾಸವು ನಡೆದು ಸಮುದಾಯದ ವಿಸ್ತೀರ್ಣವು ಹೆಚ್ಚುತ್ತದೆ. ಇದರಿಂದ ಕ್ಷೇತ್ರೀಯ ಸಮುದಾಯ ಸಣ್ಣ–ಪುಟ್ಟ ಸಮುದಾಯಗಳು ಸೇರಿ ಆದ ಘಟಕ ಮಾತ್ರ ಆಗಿಲ್ಲ ಎಂದು ತಿಳಿಯುತ್ತದೆ. ಆದು ತನ್ನಲ್ಲೇ ಒಂದು ಏಕೀಕೃತ ಸಮುದಾಯ ಬೇರೆ ಮಾತುಗಳಲ್ಲಿ ಹೇಳುವುದಾದರೆ ಕ್ಷೇತ್ರದ ಮಟ್ಟದಲ್ಲಿ ಪ್ರಾರಂಭಿಕ ಸಮುದಾಯಗಳ ಹಾಗೂ ಅವುಗಳ ಕಾರ್ಯಗಳು ಏಕೀಕರಣವಾಗುತ್ತದೆ. ಅಂತೆಯೇ ಗ್ರಾಮ ಪಂಚಾಯತಿಗಳು ಕ್ಷೇತ್ರೀಯ ಪಂಚಾಯತಿಗಳಲ್ಲಿಯೂ ಗ್ರಾಮಿಣ ಸಹಕಾರಿ ಸಂಘಗಳು ಕ್ಷೇತ್ರೀಯ ಸಹಕಾರಿ ಸಂಘಗಳಲ್ಲಿಯೂ ಪ್ರಾಥಮಿಕ ಪಾಠಶಾಲೆಗಳು ಕ್ಷೇತ್ರದ ವಿದ್ಯಾಲಯಗಳಲ್ಲಿಯ ಗ್ರಾಮಿಣ ಯುವಕ ಸಾಂಸ್ಕೃತಿಕ ಸಂಘಗಳಲ್ಲಿಯೂ ರಾಷ್ಟ್ರೀಯ ಸಂಘಗಳಲ್ಲಿಯೂ ಗ್ರಾಮೀಣ ಯೋಜನೆಗಳು ಕ್ಷೇತ್ರೀಯ ಯೋಜನೆಗಳಲ್ಲಿಯೂ ಒಂದುಗೂಡುತ್ತವೆ. ಗ್ರಾಮೀಣ

ಆಡಳಿತದಲ್ಲಿ ಸ್ವತಂತ್ರವಾಗಿರುವಂತೆಯೇ, ತಮ್ಮ ಅಧಿಕಾರಗಳನ್ನು ರಾಷ್ಟ್ರೀಯ ಸಮುದಾಯಗಳಿಗೆ ವಹಿಸಿಕೊಟ್ಟಿರುವ ಕಡೆಗಳಲ್ಲಿ ಕ್ಷೇತ್ರೀಯ ಸಮುದಾಯ ಸ್ವತಂತ್ರವಾಗಿರುತ್ತದೆ. ಪ್ರಾಥಮಿಕ ಸಮುದಾಯಗಳು ಕಾರ್ಯಗಳನ್ನು ತಾವೇ ನಿರ್ವಹಿಸುವುದು ಅಸಾಧ್ಯವಾಗುವುದರಿಂದ ಕ್ಷತೀಯ ಸಮುದಾಯವು ಪ್ರಾಥಮಿಕ ಸಮುದಾಯಗಳ ಒಳ ಆಡಳಿತದ ನಿಯಂತ್ರಣಕ್ಕಾಗಲಿ ಅಥವಾ ಹಸ್ತಕ್ಷೇಪ ನಡೆಸುವಂತಹ ದೊಡ್ಡ ಅಥವಾ ಚ್ಚತರ ಸಂಘಟನೆ ಆಗಲಾರದು. ಪ್ರತಿಯೊಂದೂ ತನ್ನ ಕ್ಷೇತ್ರದಲ್ಲಿ ಮಾನ ಅಧಿಕಾರ ಹೊಂದಿರುತ್ತವೆ.

ಇದಕ್ಕೆ ಬದಲಾಗಿ ಕ್ಷೇತ್ರೀಯ ಸಮುದಾಯ ತನ್ನ ಯೋಗ್ಯತೆ ಇದ್ದಷ್ಟು ಇದ್ದ ಕೆಲಸ ನಿರ್ವಹಿಸುತ್ತದೆ. ಇದರ ಯೋಗ್ಯತೆಗೂ ಮೀರಿದ ಎಷ್ಟೋ ಕೆಲಸ ಕೇಳಿರುತ್ತವೆ. ತಂತ್ರ ಪರಿಣತಿಯ ಕೃಷಿ ಮಹಾವಿದ್ಯಾಲಯ ನಡೆಸುವುದು, ದೊಡ್ಡ ನೀರಾವರಿ ಯೋಜನೆ, ವಿದ್ಯುತ್ ಉತ್ಪಾದನೆ, ಯಂತ್ರ ನಿರ್ಮಾಣ ಇವನ್ನೆಲ್ಲ ಕ್ಷೇತ್ರೀಯ ಸಮುದಾಯ ಮಾಡಲಾರದು. ಆಗ ಎಷ್ಟೋ ಕ್ಷೇತ್ರಿಯ ಸಮುದಾಯಗಳು ಸೇರಿ ಇದಕ್ಕಿಂತ ದೊಡ್ಡ ಸಮುದಾಯ ಜಿಲ್ಲಾ ಸಮುದಾಯವನ್ನು ರಚಿಸಬೇಕು. ಜಿಲ್ಲಾ ಸಮುದಾಯ ಸಹ ಒಂದು ಸುಸಂಬದ್ಧ ಸಮುದಾಯ. ಪ್ರಾಥಮಿಕ ಸಮುದಾಯಗಳು ಕ್ಷೇತ್ರೀಯ ಸಮುದಾಯದೊಡನೆ ಸಂಬಂಧ ಹೊಂದಿರುವ ಹಾಗೆಯೇ ಕ್ಷೇತ್ರೀಯ ಸಮುದಾಯಗಳೂ ಜಿಲ್ಲಾ ಸಮುದಾಯದೊಂದಿಗೆ ಸಂಬಂಧ ಹೊಂದಿರುತ್ತದೆ.

ಇದೇ ರೀತಿಯಲ್ಲಿ ಎಲ್ಲ ಜಿಲ್ಲಾ ಸಮುದಾಯಗಳೂ ಪ್ರಾದೇಶಿಕ ಸಮುದಾಯ ರಚನೆಗೆ ಸಂಬಂಧಪಟ್ಟಿರುತ್ತವೆ. ಪ್ರಾದೇಶಿಕ ಸಮುದಾಯಗಳೆಲ್ಲ ಸೇರಿ ರಾಷ್ಟೀಯ ಸಮುದಾಯವನ್ನು ರಚಿಸುತ್ತವೆ. ರಾಷ್ಟೀಯ ಸಮುದಾಯಗಳೆಲ್ಲ ಸೇರಿ ಒಂದು ವಿಶ್ವ ಸಮುದಾಯ ರಚಿಸುವ ದಿನ ಸಹಿತ ಬರಬಹುದು.

ಈ ಮೇಲಿನ ಮಾತುಗಳಿಂದ ಬರುವ ನಿಷ್ಕರ್ಷಗಳು ಎರಡು. ಮೊದಲನೆಯದಾಗಿ ನಾವು ಸಾಮುದಾಯಿಕ ಜೀವನ ಹಾಗೂ ಈ ಸಂಘಟನೆಯ ಒಳಗಿನಿಂದ ಹೊರ ವರ್ತಲಗಳಿಗೆ ಹೋದಹಾಗೆಲ್ಲ ಹೊರ ವರ್ತಲಗಳಿಗೆ ಮುಂದೆ ಕಡಿಮೆ ಕೆಲಸಗಳು ಉಳಿಯುತ್ತವೆ; ಆದುದರಿಂದ ನಾವು ರಾಷ್ಟ್ರೀಯ ಸಮುದಾಯವನ್ನು ತಲುಪಿದಾಗ ಅದನ್ನು ಮಾಡಲು ಕೆಲವೇ ಕೆಲಸಗಳಾದ ರಕ್ಷಣೆ, ವಿದೇಶಗಳೊಡನೆ ಸಂಬಂಧ ಹಣ ಕೇಂದ್ರ ಮತ್ತು ರಾಜ್ಯಗಳ ನಡುವೆ ಸಮನ್ವಯ ಮತ್ತು ನಿಯಮಗಳು ಇವು ಮಾತ್ರ ಉಳಿಯುತ್ತವೆ. ಎರಡನೆಯದಾಗಿ, ಇಂತಹ ಸಾಮಾಜಿಕ ಸಂಘಟನೆ ಜನತೆಯನ್ನು ಮಾನವೀಯ ಕಣಗಳ ಆಕೃತಿ ಹೀನ ಗುಂಪಿನಿಂದ ದೂರ ಒಯ್ಯುತ್ತದೆ ಮತ್ತು ಸ್ವಯಂ ಆಡಳಿತ ಸಮುದಾಯಗಳೆಲ್ಲ ವಿಂಗಡಿಸಿರುತ್ತಾದದರಿಂದ ಸ್ವಯಂ ಆಡಳಿತಕ್ಕೆ ಹೆಚ್ಚು ಅವಕಾಶಕೊಡುತ್ತದೆ.

ಮೇಲೆ ವರ್ಣಿಸಿದ ಸಾಮುದಾಯಿಕ ರಾಜ್ಯ ವ್ಯವಸ್ಥೆಯೇ ಲೋಕತಂತ್ರದ ಗ್ಯಾರಂಟಿ ನೀಡಬಲ್ಲದು. ಅಂತಹ ಸ್ಥಿತಿಯಲ್ಲಿ ನಮ್ಮ ಆದರ್ಶ ಎಲ್ಲ ಲೋಕ ತಂತ್ರವಾದಿಗಳ ಆದರ್ಶವಾಗಬೇಕು, ಹಾಗೆ ರಚಿತವಾದ ಸಮಾಜದಲ್ಲಿ ಮಾತ್ರ ವ್ಯಕ್ತಿ ತನ್ನನ್ನು ಆಧುನಿಕ ನಾಗರಿಕತೆಯ ಯಂತ್ರ ಮಾನವೀಕರಣದ ಬಂಧನದಿಂದ ಮುಕ್ತನಾಗಬಲ್ಲ. ಸಮುದಾಯದ ಸದಸ್ಯನಾಗಿ ಸ್ವಾತಂತ್ರ್ಯ ಮತ್ತು ಸ್ವಗೌರವವನ್ನು ಪಡೆಯಬಲ್ಲ.

# ಓದು ಪಠ್ಯ

# 4. ಅಲ್ಲಿ ಬನಬನದಲ್ಲಿ... ಕಾಡಗಿಡದಲ್ಲಿ

**ಕುಂ. ವೀರಭದ್ರಪ್ಪ**

ಮುಪ್ಪಾನು ಮುದುಕರು ಹೆಚ್ಚಿನ ಸಂಖ್ಯೆಯಲ್ಲಿರುವ ಯಾವುದೇ ಸಮಾಜ ಸದಾ ಜೀವನೋತ್ಸಾಹದಿಂದ ಪುಟಿಯುತ್ತಿರುತ್ತದೆ ಎಂಬುದು ನನ್ನ ವಾದ. ಇದಕ್ಕೆ ನೀವೇನೆನ್ನುವಿರೊ ಏನೋ! ಮುಖ್ಯವಾಗಿ ನಮ್ಮ ಹಳ್ಳಿಗಳು ಯಾವುದೇ ತಂಟೆ ತಾಪತ್ರಯಗಳಿಲ್ಲದೆ ನೆಮ್ಮದಿಯಿಂದಿದ್ದದ್ದು ಇಂಥ ಹಣ್ಣು ಹಣ್ಣು ಮುದುಕರಿಂದಾಗಿಯೇ. ಮುದುಕರಿಗೆ ಹಗಲಿರುಳುಗಳ ನಡುವ ಫರಕು ಕಾಣುತ್ತಿರಲಿಲ್ಲ. ಅವು ಯಾವಾಗ ಮಲಗಿರುತ್ತಿದ್ದವೋ! ಯಾವಾಗ ಎಚ್ಚರವಿರುತ್ತಿದ್ದವೋ! ಅವು ರಾತ್ರಿಯಾಯಿತೆಂದರೆ ಮಲಗಿದಂತೆ ನಟಿಸುತ್ತಿದ್ದವು.... ಮೊಮ್ಮಕ್ಕಳು ಮರಿಮೊಮ್ಮಕ್ಕಳಿರದಿದ್ದ ಪಕ್ಷದಲ್ಲಿ ತಮ್ಮೆಡ ಬಲ ಮಗ್ಗುಲುಗಳಲ್ಲಿ ಬೆಕ್ಕು ನಾಯಿಗಳಿಗೆ ರಿಸರ್ವೇಸನ್ ಕಲ್ಪಿಸುತ್ತಿದ್ದವು..... ಆಮಂತ್ರಣಕ್ಕಾಗಿ ಕಾಯದ ಚತುಷ್ಪಾದಿಗಳು ಮ್ಯಾವ್‌ಗುಟ್ಟುತ್ತಲೋ, ಬಾಲ ಅಲ್ಲಾಡಿಸುತ್ತಲೋ ರಾಜಗಾಂಭೀರ್ಯದಿಂದ ನಡೆದು ಅವುಗಳ ವಿಶೇಷ ಗೌರವಕ್ಕೆ ಪಾತ್ರವಾಗುತ್ತಿದ್ದವು. ಮ್ಯಾಫ್ ಮ್ಯಾನ್ ಎಂಬ ಉತ್ತರಾದಿಯಿಂದಲೂ, ಬೊವ್ ಸೊವ್ ಎಂಬ ದಕ್ಷಿಣಾದಿಯಿಂದಲೂ, ಕಾವ್ ಕಾವ್, ಚಿಂವ್ ಚಿಂವ್ ಎಂಬ ಪಕ್ಕ ವಾದ್ಯಗಳಿಂದಲೂ ಮುದೇರಿರುವ ಕಡೆ ಸಂಗೀತ ಕಛೇರಿಗಳು ಸಾಂಗೋಪಾಂಗವಾಗಿ ನಡೆಯುತ್ತಿದ್ದುದುಂಟು. ಅವು ತಮ್ಮ ಆಸ್ಥಾನ ವಿದ್ವಾಂಸರಿಗಾಗಲೀ, ಮಂದ್ರ, ಷಡ್ಜದಲ್ಲಿ ಹಾಡುತ್ತಿದ್ದ ಸಂಗೀತಗಾರರಿಗಾಗಲೀ ವಿಶೇಷ ಉಂಬಳಿ, ಅಗ್ರಹಾರ, ಜಹಗೀರುಗಳನ್ನೇನು ದಾನ ಮಾಡುತ್ತಿರಲಿಲ್ಲ. ಅದಲ್ಲದೆ ವಿದ್ವನ್ಮಣಿಗಳೂ ಸಹ ತಮಗದೇ ಬೇಕು, ಇದೇ ಬೇಕು ಎಂದು ಆಸೆ ಪಡುತ್ತಿರಲಿಲ್ಲ. ಮುದೇರು ಕ್ಯಾಕರಿಸಿ ಗುರಿ ಇಟ್ಟು ಉಗುಳುತ್ತಿದ್ದ ಕಫವನ್ನೇ ಕಾಕರಾಜರುಗಳು ಮಹಾಪ್ರಸಾದವೆಂದು ಗುಬಕಾಯಿಸುತ್ತಿದ್ದರೆ, ಮಾರ್ಜಾಲ, ಶುನಕರಿತ್ಯಾದಿ ಗವಾಯಿಗಳಂತೂ ನಿಷ್ಕಾಮ ಸೇವಾಧುರಂಧರರೇ ಆಗಿರುತ್ತಿದ್ದವು. ಹಳಸಿದ ಅನ್ನ, ಕಟಗುರೊಟ್ಟಿಯಂಥ ಸುಗ್ರಾಸ ಖಾದ್ಯಗಳ ಪೈಕಿ ಒಂದು ತುತ್ತನ್ನು ಎಸದು ಅವು ಕೃತಜ್ಞತಾಪೂರ್ವಕವಾಗಿ ತಿನ್ನುವುದನ್ನು ನೋಡಿ ಮುದೇವು ಪ್ರಸನ್ನವದನರಾಗುತ್ತಿದ್ದವು. ಅಕಸ್ಮಾತ್ ತಿನ್ನದೆ ಉಪವಾಸ ಸತ್ಯಾಗ್ರಹ ಮಾಡುವ ಚತುಷ್ಪಾದಿಯನ್ನು ಬರಸೆಳೆದು ಮೈದಡವಿ, ಯಾಕ ತಿನ್ನುವಲ್ಲಿ! ಯಾಕೆ ಸಪ್ಪಗದೀ ಎಂದು ಮುದೇವು ಅವುಗಳನ್ನು ಪರಾಂಬರಿಸಿದ್ದೇ ಪರಾಂಬರಿಸಿದ್ದು, ಅಸ್ವಸ್ಥತೆಯಿಂದ ನರಳುವ ಪ್ರಾಣಿಯ ಶೈತ್ಯೋಪಚಾರ ಮಾಡಿದ್ದೇ ಮಾಡಿದ್ದು.... ಇಂಥ ಕಕ್ಕುಲಾತಿಯಿಂದಾಗಿ ಚತುಷ್ಪಾದಿಗಳು ಮುದೇರಿಗೆ ಝಡ್ ಶ್ರೇಣಿಯ ರಕ್ಷಣೆಯನ್ನೊದಗಿಸುತ್ತಿದ್ದವು. ಅವುಗಳ ಎಡ, ಬಲ, ಹಿಂದು, ಮುಂದು ಶೋಭಾಯಮಾನವಾಗಿ ಕಂಗೊಳಿಸುತ್ತಿದ್ದವು. ಅವುಗಳಿಗೆ ಅಥವಾ ಅವುಗಳಿರುತ್ತಿದ್ದ ಪ್ರಾಂಸರಿ ನೋಟಿನಂಥ ಪರಿಸರಕ್ಕೆ ತಿಲಗಾತ್ರದಷ್ಟು ಧಕ್ಕೆಯೊದಗಿತೆಂದರೆ ಊರಿಗೆಲ್ಲ ಕೇಳಿಸುವ ರೀತಿಯಲ್ಲಿ ಕಂಠಶೋಷಣೆ ಮಾಡಿಕೊಳ್ಳುತ್ತಿದ್ದವು. ಮುದರಿಂದ ಸೈ ಅನ್ನಿಸಿಕೊಳ್ಳುವ ಸಲುವಾಗಿ ಅವು ಶಕ್ತಿಮೀರಿ ಶ್ರಮಿಸುತ್ತಿದ್ದವು ಮತ್ತು ತಂತಮ್ಮ ವಿದ್ವತ್ತನ್ನು ಧಾರೆ ಎರೆಯುತ್ತಿದ್ದವು.

ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಎಷ್ಟು ಸಾಧ್ಯವೋ ಅಷ್ಟು ಸುದೀರ್ಘವಾಗಿ ಬದುಕಿರುವ ಸಲವಾಗಿ ಚತುಷ್ಪಾದಿಗಳೊಂದಿಗೆ ಮುದೇರು ಕೂಡ ಪೈಪೋಟಿಗಿಳಿದಿದ್ದರೆಂದೇ ಹೇಳಬೇಕು.

ಮುದುಕರಾಗುವುದೂ ಒಂದು ಕಲೆ ಎಂದು ನಾನು ಕಂಡುಂಡ ಅರ್ಥವಾಯಿತು. ಜನಗಣತಿ ಸಲವಾಗಿ ಹೋಗಿದ್ದಾಗ ಒಂದು ಮುದುಕಿ ತನಗೆ ನೂರಾಮುವ್ವತ್ತರಷ್ಟು ವಯಸ್ಸಾಗಿರಬಹುದೆಂದು ಹೇಳಿದರೆ, ಇನ್ನೊಂದು ಮುದುಕಿ ನೂರಿಪ್ಪತ್ತೈದು ಎಂದು ಹೇಳಿ ದಿಗ್ಭ್ರಮೆ ಮಾಡಿತು. ಅವಕ್ಕೆಲ್ಲ ತಮ್ಮ ವಯಸ್ಸಿನ ಮಾಪನ ಯಾವುದೆಂದರೆ ಪ್ಲೇಗು ಮತ್ತು ಬರಗಾಲ. ಯಾರು ಇವೆರಡನ್ನು ಎಷ್ಟು ಸಲ ಎದುರಿಸಿರುತ್ತಾರೆಂಬುದರ ಆಧಾರದಿಂದ ಅವರವರ ವಯಸ್ಸು ನಿರ್ಧಾರವಾಗುವುದು. ಹಗಲಿರುಳು ಕಾಳಿಂಗರಾಯನ ಕಥೆಯ ಮೊದಲಾದ ಜನಪದ ಮಹಾಕಾವ್ಯಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದ ವಾಗಿಲಿಯ ಬ್ಯಾಗೇರ ಸವಾರಕ್ಕೆ ಮಾತ್ರ ಎಲ್ಲರಿಗಿಂತ ಹೆಚ್ಚು ಪ್ಲೇಗು ಮತ್ತು ಬರಗಾಲಗಳನ್ನೆದುರಿಸಿದ್ದಳು. ಮುಪ್ಪಾನು ಮುದುಕಿಯರಿಗೆಲ್ಲ ಹೀರೋಯಿನ್‌ಳಂತಿದ್ದ ಅದು 'ನನ್ನನ್ಯಾಕ ಈ ಭೂಮಿ ಮ್ಯಾಗ ಬುಟ್ಟೀಯಲೋ ಬಾಡ್ಕಾವ್' ಎಂದು ದಿನಂಪ್ರತಿ ಒಂದು ಸಲವಾದರೂ ಯಮನ ಜೀವವನ್ನು ತಿನ್ನುತ್ತಿತ್ತು. ಆದರೆ, ಜವರಾಯ ಮಾತ್ರ ಅದರ ತಂಟೆಗೆ ಮೊನ್ನೆ ಮೊನ್ನೆ ತನಕ ಹೋಗಿರಲಿಲ್ಲವೆನ್ನುವುದೇ ಚೋದ್ಯದ ಸಂಗತಿಯಾಗಿತ್ತು. ನಮ್ಮ ಹಂಪಮ್ಮಜ್ಜಿಯಂತೆ ಸುದೀರ್ಘ ಕಾಲ ಬದುಕಿದ ಅದು ತನ್ನ ಬಿಡುವಿನ ವೇಳೆಯಲ್ಲಿ ಯಮನೊಂದಿಗೆ ಮಾತುಕತೆಯಾಡುತ್ತಿತ್ತು. ಮಾತಿನ ನಡುವೆ 'ನೀನು ಭಾಳ ಸಿದುಗದೀ, ಬೆರಕಿ ಆದೀ, ನಿನ ಬಾಯಾಗ ನನ್ನ ಹಾಟುಯ್ಯ' ಎಂದು ಯಮನನ್ನು ಕೆರಳಿಸುವ ಪ್ರಯತ್ನ ಮಾಡುತ್ತಿತ್ತು. ಗ್ರಾಮಕ್ಕೆ ಮುಕುಟಪ್ರಾಯದಂತಿದ್ದ ಅದು ನನ್ನ ಪ್ರಮುಖ ಆಕರ್ಷಣಾ ಕೇಂದ್ರವಾಗಿತ್ತಷ್ಟೇ. ಅದರ ಪಂಚೇಂದ್ರಿಯಗಳು ನಿಸೂರಾಗಿದ್ದವಷ್ಟೆ, ಪ್ರತಿ ತಿಂಗಳು ಪಗಾರ ಬಂದೊಡನೆ ಒಂದು ವಾರಕ್ಕಾಗುವಷ್ಟು ಎಲೆ ಅಡಿಕೆ, ಕಡ್ಡಿಪುಡಿ, ನಶ್ಯೆಪುಡಿ ಖರೀದಿಸಿ ಒಯ್ದು ಕಪ್ಪಕಾಣಿಕೆ ರೀತಿಯಲ್ಲಿ ಸಮರ್ಪಿಸಿ ಅದನ್ನು ನಾನು ಬೇಕು ಮಾಡಿಕೊಂಡಿದ್ದನು. ಅದಕ್ಕೆ ಪ್ರತಿಯಾಗಿ ಅದು ತಲೆ ಬೆನ್ನ ಮೇಲೆ ಕೈಯಾಡಿಸಿ ನನ್ನನ್ನು ರೋಮಾಂಚನಗೊಳಿಸುತ್ತಿತ್ತಷ್ಟೆ, ಅದು ಇರುವ ಧೈರ್ಯದ ಮೇಲೆ ನಾನು ನನ್ನ ಸರ್ಕಾರಿ ಶಾಲೆಯನ್ನು ಹರಿಜನ ಕೇರಿಯ ಸುವಿಖ್ಯಾತ ಕಂದಾರಮ್ಮನ ಗುಡಿಯಲ್ಲಿ ಪ್ರತಿಷ್ಠಾಪಿಸಿದ್ದೆನಷ್ಟೆ, ನಿಷ್ಣಾತ ಪತ್ರಕರ್ತೆಯ ಥರ ಕೂತು ಶಾಲೆಯ ಕಾರ್ಯಕಲಾಪ ಗಮನಿಸುತ್ತ ನಡುನಡುವೆ ಮುಗುಳ್ನಗುತ್ತಿತ್ತು. ಅವಧೂತರ ರೀತಿಯಲ್ಲಿ ಅಲ್ಲಿಯೇ ಒಂದು ಜೋಂಪು ನಿದ್ರೆ ಹೋಗುತ್ತಿತ್ತು. ಉಸಿರಳತೆಯಲ್ಲಿ ಕನವರಿಸುತ್ತಿತ್ತು ದುಬ್ಬೀರವ್ವ ತನ್ನ ಬಾಯಿ ಎಂಬ ನಗಾರಿ ಬಾರಿಸುತ್ತ ಸರ್ಕಾರಿ ಉಪ್ಪಿಟ್ಟಿನ ತಪಾಲೆ ಸಂಗಡ ಬಂದೊಡನೆ ಎದ್ದು ತಾನೊಂದು ಎಳೆಕಂದಮ್ಮನಾಗಿಬಿಡುತ್ತಿತ್ತು. ಪಡೆದ ಉಪ್ಪಿಟ್ಟನ್ನು ಮೂರು ಭಾಗಗಳನ್ನಾಗಿ ವಿಂಗಡಿಸುತ್ತಿತ್ತು. ಒಂದು ಭಾಗವನ್ನು ಶುನಕಗಳಿಗೂ, ಇನ್ನೊಂದು ಭಾಗವನ್ನು ಮರಿಮೊಮ್ಮಗ ಕುರಕುಂದಿ ನಾಗ (ಅರವತ್ತೆಪ್ಪತ್ತು ವರ್ಷದವ)ನಿಗೂ ಮುಫತ್ತಾಗಿ ನೀಡುತ್ತಿತ್ತು. ಆಗ ಎಲ್ಲೆಲ್ಲಿಂದಲೋ ಹಾರಿಬಂದು ತಮ್ಮ ಕಾಕಾ ಭಾಷೆಯಲ್ಲಿ ಕ್ಷೇಮಲಾಭ ವಿಚಾರಿಸುತ್ತಿದ್ದ ಕಾಕ ಮಹಾರಾಜರುಗಳಿಗೆ ಒಂದೊಂದು ತುತ್ತು ಎಸೆಯುತ್ತ ಅದು ತಿನ್ನುತ್ತಿದ್ದುದು ಒಂದು ಮುಟುಗಿ ಮಾತ್ರ.

ಯಾವ ಗ್ರಾಮೀಣ ವೃದ್ದರು ಎಂಬತ್ತೈದು ತೊಂಬತ್ತು ದಾಟಿರುತ್ತಾರೋ ಅಂಥವರಿಗೆ ಆರನೆಯ

ಇಂದ್ರಿಯವೂ ಇರುತ್ತೆ. ಅವರು ವಿಚಿತ್ರ ಮಾಂತ್ರಿಕರಾಗಿರುತ್ತಾರೆ ಎನ್ನುವುದು ನಾನು ಕಂಡುಂಡ ಸತ್ಯ. ಸಲ್ಲೇಖನಾವ್ರತಾರೂಢಿಯಾಗಿ ಇಹಲೋಕ ತ್ಯಜಿಸಿದ ನಮ್ಮ ಹಂಪಮ್ಮಜ್ಜಿ ಕುರಿತು ಈ ಹಿಂದೆ ಬರೆದಿರುವೆ. ನೂರು ವರ್ಷದ ನಂತರವೂ ಸಾಗರದೋಪಾದಿಯಲ್ಲಿ ಬದುಕಿದ್ದ ಅದರ ಮಗಳು ಸಿದ್ದಮ್ಮಜ್ಜಿ ನಿಂಗಮ್ಮಜ್ಜಿ ತ್ರಿಕಾಲ ಜ್ಞಾನಿಗಳಾಗಿದ್ದವು. ಇನ್ನೊಂದು ಗಂಟೆ ನಂತರ ಜೀವ ಹೋಗುತ್ತೆ ಎಂದು ಡಾ. ದ್ವಾರಕಾನಾಥ್ ಕೈಚೆಲ್ಲಿದ ಎಷ್ಟೋ ವರ್ಷಗಳ ನಂತರ ಬದುಕಿರುವ ನಾನೇ ಅದಕ್ಕೆ ಸಾಕ್ಷಿ. ನಾನು ನನ್ನ ಆರನೇ ವಯಸ್ಸಿನಲ್ಲಿ ವಿಚಿತ್ರ ರೋಗಕ್ಕೆ ತುತ್ತಾಗಿ ಪ್ರಾಣಾಂತಿಕ ಸ್ಥಿತಿ ತಲುಪಿದ್ದೆ. ಹಿರಿಯ ಮಗನ ಕಳೇಬರವನ್ನು ಎಲ್ಲಿ ಮಣ್ಣು ಮಾಡಬೇಕಾಗುತ್ತೆ ಎಂಬ ಚಿಂತೆಯಲ್ಲಿ ಅಪ್ಪ ಇದ್ದಾಗ ನಿಂಗಮ್ಮಜ್ಜಿ ಮನೆ ದೇವರಾದ ವೀರಭದ್ರನಿಗೆ ಏನು ಬೇಡಿಕೊಂಡಿತೋ ಏನೋ! ದೇವರ ಆಧಾರ (ಬೂದಿ) ವನ್ನು ನನ್ನ ಮೈಗೆ ಲೇಪಿಸಿತು. ಅದರ ಪರಿಣಾಮವಾಗಿ ನಾನು ಬದುಕಿದ್ದಂತೆ, ಸೋಮಶೇಖರ ಎಂದಿದ್ದ ನನಗೆ ವೀರಭದ್ರಪ್ಪ ಎಂದು ಪುನರ್ ನಾಮಕರಣ ಮಾಡಲಾಯಿತು. ಐಶ್ವರ್ಯ ರಾಯ್ ಮುಪ್ಪಾನು ಮುದುಕಿಯಾದಲ್ಲಿ ಹೇಗಿರಬಹುದೋ ಹಾಗಿದ್ದ ಸಿದ್ದಮ್ಮಜ್ಜಿ ತಾನು ಕೂತಲ್ಲಿಂದಲೇ ದೂರದಲ್ಲಿರುತ್ತಿದ್ದ ರೋ–ಗಿಯ ಚಿಕಿತ್ಸೆಯನ್ನು ಆರಂಭಿಸಿ ಇಲಾಜು ಮಾಡುತ್ತಿತ್ತು. ಪಡುವಲ, ಈರೆ, ತುಪ್ಪಿರೇ ಬಳ್ಳಿಗಳಿಗೆ ದುಷ್ಟರ ಕೆಟ್ಟ ಕಣ್ಣು ತಾಕದಂತೆ ದಿಗ್ಬಂಧನ ವಿಧಿಸುತ್ತಿತ್ತು. ಅಶ್ವಿನಿ ಕಾರ್ತೀಕಪೂರ್ವದ ದಿನಗಳಲ್ಲಿ ಓಣಿಯ ಕೆಲವರ ಮನೆ ಖಾಲಿ ಜಾಗದಲ್ಲಿ ಬೀಜ ನೆಟ್ಟು ಬರುವುದನ್ನು ರೂಢಿ ಮಾಡಿಕೊಂಡಿತ್ತು. ಎಲೆಗೊಂದರಂತಿರುತ್ತಿದ್ದ ಕಾಯಿಗಳನ್ನು ಅವರಿವರಿಗೆ ಹಂಚುತ್ತಿತ್ತು. ಬಡ ತಾಯಂದಿರಿಗೆ ಪುಕ್ಕಟ್ಟೆ ಹಾಲು ಸರಬರಾಜು ಮಾಡುತ್ತಿತ್ತು. ಇದಿ ಅಮೀನನ ಸಹೋದರಿಯಂತಿದ್ದ ತನ್ನ ಜಗಳಗಂಟಿ ಅಕ್ಕ (ನಿಂಗಮ್ಮಜ್ಜಿ)ನೊಂದಿಗೆ ಸಾತ್ವಿಕ ರೀತಿಯಲ್ಲಿ ಜಗಳ ಆಡುತ್ತಿತ್ತು, ಸಸ್ಯ, ಪ್ರಾಣಿ, ಪಕ್ಷಿ ಜಗತ್ತುಗಳ ಸಂಗಡ ನಿಕಟ ಸಂಬಂಧವಿರಿಸಿಕೊಂಡಿದ್ದ ಅದಕ್ಕೆ ನಿಗೂಢ, ವಿಸ್ಮಯದ ವ್ಯಕ್ತಿತ್ವವಿತ್ತು. ಅದರ ಸೌಂದರ್ಯವನ್ನು ಜಗತ್ತಿಗೆ ಪರಿಚಯಿಸಬೇಕೆಂಬ ಯಾವ ಘನ ಉದ್ದೇಶವೂ ಖಂಡಿತ ನನಗಿರಲಿಲ್ಲ. ತುಸು ಪೋಲಿ ಸ್ವಭಾವದ ನನ್ನ ಕೈಲಿ ಕೂಡಕ್ ಕಂಪನಿಯ ಲಡಾಸು ಕೆಮೆರಾ ಇತ್ತಷ್ಟೆ, ಬಾಗಿಲ ಬಳಿ ಎಲೆ ಅಡಕೆ ಕುಟ್ಟುತ್ತ ಕುಂತಿದ್ದ ಸಿದ್ದಮ್ಮಜ್ಜಿ ಕಡೆ ಗುರಿ ಇಟ್ಟು ಕ್ಲಿಕ್ಕಿಸಿದೆ. ಚೆನ್ನಾಗಿ ಬಂದ ಫೋಟೋನ ಪತ್ರಿಕೆಗೆ ಕಳಿಸಿದೆ. ಅದು ಪ್ರಕಟಿಸಿಯೂ ಬಿಟ್ಟಿತು. ಓಣಿಯ ಹೈಕಳು ಮುಖಕ್ಕೆ ಹಿಡಿದ ಪತ್ರಿಕೆಯಲ್ಲಿ ತನ್ನ ಫೋಟೋ ನೋಡಿದ ಆ ಮಿಸ್ ಯೂನಿವರ್ಸ್ ಎಷ್ಟು ನಾಚಿಕೊಂಡಿತೆಂದರೆ, ಅದು ವಾರದಿನಮಾನ ಅಜ್ಞಾತವಾಸ ಅನುಭವಿಸಿತು. 'ನಾಚಿಕೆ' ಎಂಬ ಕ್ರಿಯೆಯ ವಿರಾಟ್ ದರ್ಶನವನ್ನು ಮಾಡಿಸಿದ ಆ ಮುದುಕಿ ಮಾನವ ಕುಲದ ಅನರ್ಘ್ಯ ರತ್ನವೇ ಸರಿ, ಅಲ್ಲವೆ! ಬಂಡಿ ಬಡಿಗೋಲುಗಳಲ್ಲಿ ಅಡ್ಡಾಡುತ್ತಿದ್ದ ಅದು ಕೆಲವೊಮ್ಮೆ ಅನಿವಾರ್ಯವಾಗಿ ಬಸ್ಸಿನಲ್ಲಿ ಪ್ರಯಾಣಿಸಬೇಕಾಗಿ ಬರುತ್ತಿತ್ತಷ್ಟೆ, ಜಪ್ಪಯ್ಯ ಅಂದರೂ ಪ್ಯಾಂಟು ಧರಿಸಿರುತ್ತಿದ್ದ ಯುವಕರ ಪಕ್ಕ ಕೂಡುತ್ತಿರಲಿಲ್ಲ. ಅಂಥವರನ್ನು ಕೂಡ್ರಗೊಡುತ್ತಲೂ ಇರಲಿಲ್ಲ. ಇಂಥ ಹತ್ತು ಹಲವು ನೆನಪಿನ ಸಂಪುಟಗಳನ್ನು ನನ್ನೆದೆಯ ಕಪಾಟಿನಲ್ಲಿಟ್ಟು ಹೋಗಿರುವ ಮೊಮ್ಮಗನಾಗಿದ್ದೇನೆಂಬುದೇ ಹೆಮ್ಮೆಯ ವಿಷಯ. ಮುಪ್ಪಾನು ಮುದುಕರು ನನ್ನನ್ನು ಆಕರ್ಷಿಸಿದಷ್ಟು ಯಾವ ರಾಷ್ಟ್ರಪತಿಯೂ ನನ್ನ ಗಮನ ಸೆಳೆದಿಲ್ಲ. ಗ್ರಾಮ ಸಮುದಾಯಗಳ ಆಧಾರಸ್ತಂಭದಂತಿದ್ದ ವೃದ್ಧರಿತ್ತೀಚೆಗೆ ಒಬ್ಬೊಬ್ಬರಾಗಿ ಕಣ್ಮರೆಯಾಗುತ್ತಿರುವುದು, ನಮ್ಮ ಹಳ್ಳಿ ಹಳ್ಳಿಗಳು ಮುದುಕರಿಲ್ಲದೆ ಬೆಂಗಳೂರಿನ ಬ್ರಿಗೇಡು, ಎಂ.ಜಿ. ರಸ್ತೆಗಳಂತ ಭಣಗುಟ್ಟುತ್ತಿರುವುದನ್ನು ಸಹಿಸುವುದಾದರೂ ಹೇಗೆ?

# ಭಾಗ–3

# ಅಹಿಂಸೆ


| | | | |
|---|---|---|---|
| 1. | ಅಹಿಂಸಕನಾದ ಅಂಗುಲಿಮಾಲ | – | ಡಾ. ಎಚ್.ಎಸ್. ಅನುಪಮಾ |
| 2. | 21 ದಿನಗಲ ದೀರ್ಘ ಉಪವಾಸ (ಗಾಂಧಿಕಥನ ದೀರ್ಘ ಉಪವಾಸ) | – | ಡಾ. ಎಸ್. ನಾಗಭೂಷಣ |
| 3. | ಬದುಕಿನ ಹಾಡು | – | ಕೆ.ಎಸ್. ನರಸಿಂಹಸ್ವಾಮಿ |
| | ಓದು ಪಠ್ಯ | | |
| | ಆಹುತಿ | – | ಕೊಡಗಿನ ಗೌರಮ್ಮ |

# ಕುಮಾರವ್ಯಾಸ ಭಾರತ

**ಹಿಂಸೆ ಮತ್ತು ಅಹಿಂಸೆ ಯಾವುದು?**

ನಿರುತವರ್ಜುನ ಕೇಳಹಿಂಸಾ
ಪರಮಧರ್ಮದ ತತ್ಸ್ವರೂಪವ
ನೊರೆವೆನಾಲಿಸು ಸಚ್ಚಿದಾನಂದೈಕಘನವೆನಿಪ
ನಿರುಪಮಾತ್ಮನ ನಿಲವನರಿಯದೆ
ನರಕಿ ಜಡನಾ ಜೀವನೆಂಬೀ
ತರಳತನವೇ ಹಿಂಸೆಯರಿವಡಹಿಂಸೆ ಕೇಳೆಂದ (ಭೀಷ್ಮ ಪರ್ವ, ಸಂಧಿ–3, ಪದ್ಯ.53)

**ತಾತ್ಪರ್ಯ** : ಅರ್ಜುನ ಕೇಳು, ಪರಮಧರ್ಮವಾದ ಅಹಿಂಸೆಯ ಸ್ವರೂಪವನ್ನು ಹೇಳುತ್ತೇನೆ, ಸಚ್ಚಿದಾನಂದ ಘನನೂ ಅದ್ವಯನೂ, ಆದ ನಿರುಪಮನಾದ ಆತ್ಮನ ಸ್ವರೂಪವನ್ನರಿಯದೆ ನಾನು ನರಕಿ, ಜೀವ ಎಂದು ತಿಳಿಯುವುದೇ ಹಿಂಸೆ, ತಾನು ಆತ್ಮನೆಂದರಿಯುವುದೇ ಅಹಿಂಸೆ ಎಂದು ಕೃಷ್ಣನು ಹೇಳಿದನು.

**ಅರ್ಥ** : ನಿರುತ : ದಿಟ, ಸತ್ಯ, ನಿಶ್ಚಯ; ಕೇಳು, ಆಲಿಸು, ಅಹಿಂಸೆ ನೋವನ್ನುಂಟುಮಾಡದ ಸ್ಥಿತಿ, ಪರಮ ಶ್ರೇಷ್ಠ, ಧರ್ಮ ನಡತೆ, ತತ್ : ಅದರ ಸ್ವರೂಪ: ಸ್ವಂತ ಆಕೃತಿ, ಒರೆ, ಹೇಳು, ಆಲಿಸು, ಕೇಳು, ಘನ, ಶ್ರೇಷ್ಠ, ನಿರುಪಮ, ಸಾಟಿಯಿಲ್ಲದ ಅತಿಶಯವಾದ, ಆತ್ಮ, ಉಸಿರು, ಜೀವ, ನಿಲುವು, ನೆಲೆ, ನಿವಾಸ, ಅರಿ, ತಳಿ, ನರಕಿ ನರಕದಲ್ಲಿ ವಾಸಿಸುವ ಜಡ, ಅಜೇತನವಾದುದು, ಜೀವ, ಉಸಿರಾಡುವ ತರಳ, ಚಂಚಲವಾದ, ಹಿಂಸೆ ನೋವು.

# ಭಾಗ–3

# ಅಹಿಂಸೆ

## 1. ಅಹಿಂಸಕನಾದ ಅಂಗುಲಿಮಾಲ

(ಖಂಡಕಾವ್ಯ)

**ಡಾ॥ ಎಚ್.ಎಸ್. ಅನುಪಮಾ**

ಜೀರುಂಡೆ
ದುರ್ಭರ ಚಣಗಳು ಬದುಕಿನ ಹಾಡ ಬದಲಿಸಬಲ್ಲವು,
ಅಂಗುಲಮಾಲನ ಈ ಕತೆ ಕೇಳು:

ಕೋಸಲ ರಾಜ್ಯದಲೊಂದು ಬೆಳಿಗ್ಗೆ ಬುದ್ಧ
ಧ್ಯಾನ ಮುಗಿಸಿ ದಟ್ಟಡವಿಯತ್ತ ನಡೆದ
ದಾರಿ ಹೋಕರು, ರೈತರು ಕೂಗಿದರು
ಹೋಗಬೇಡ ಅತ್ತ ಇದ್ದಾನಲ್ಲಿ ಅಂಗುಲಿಮಾಲನೆಂಬ ದೈತ್ಯ
ನರಹಂತಕ
ಕೇಳಿದ್ದು ಕೇಳಿಯೇ ಇಲ್ಲದವನಂತೆ ಬುದ್ಧ ನಡೆದ, ಶಾಂತ,
ನಿರ್ಲಿಪ್ತ
ಅನತಿ ದೂರ ನಡೆವುದರಲಿ ಕೇಳಿತು ನೆಲಕೆ ಹೆಜ್ಜೆಯಪ್ಪಳಿಸುವ
ಶಬ್ದ
ಯಾರೋ ಓಡಿ ಬರುತಿದ್ದಾರೆ, ಬರಬಯಸುತಿದ್ದಾರೆ ಸನಿಹ
ಬುದ್ಧ ನಿಧಾನಿಸಿದ. ಆದರೂ ಬೆಂಬತ್ತಿದವರು ಮುಟ್ಟದಾದರು
'ಏಯ್, ನಿಲ್ಲು ಯಾರದು' ಎಂದವರು ಅನುವುದಕೂ
ಯಾರದು ನೋಡುವನೆಂದು ಬುದ್ಧ ನಿಲುವುದಕೂ
ಸರಿಹೋಯಿತು

ಕೊರಳಲ ಬೆರಳಮಾಲೆ
ಕೊರಳ ಸುತ್ತ ರಗುತದ ಕಲೆ
ಏರಿಳಿವ ಎದೆ, ಕೆದರಿದ ತಲೆ
ಉಗ್ರ ಕಣ್ಣು, ಕಂಪಿಸುವ ಮೂಗಿನ ಹೊಳ್ಳೆ
ಸುತ್ತ ಪಸರಿಸಿತು ಹಸಿ ರಕ್ತ, ಬೆವರ ವಾಸನೆ

'ನಾ ನಿಂತು ಬಹಳ ಕಾಲವಾಯಿತು,
ನಿಲದ ಓಡುತಿರುವವ ನೀನು
ಮಗೂ, ಏಕಿಷ್ಟು ಆತಂಕಗೊಂಡಿರುವುದು?'

ಮಗೂ..!
ಮಗುವೆಂಬ ಪದ ಕೇಳಿದ್ದೇ
ಆ ಭಯಾನಕ ಮಾಂಸದ ಬೆಟ್ಟ
ಮೇಣದಂತೆ ಕರಗತೊಡಗಿತು.
ಪುಟ್ಟ ಸೊಡರೊಂದು ಹೊತ್ತಿಕೊಂಡಿತು

ನಾ ತಕ್ಷಶಿಲೆಯವನು. ಗುರುದಕ್ಷಿಣೆಗೆಂದು ಸಾವಿರ ಬಲ
ಕಿಬ್ಬೆರಳ ಸಂಗ್ರಹಿಸುತ್ತಿರುವವನು
ಮೊದಮೊದಲು ಕಾಡಿದೆ ಬೇಡಿದೆ ಒಂದೊಂದನೇ ಪಡೆದು ಮರಕೆ
ನೇತು ಹಾಕಿದೆ
ಅವು ಗೂಬೆ ಹದ್ದುಕಾಗೆಗಳ ಹಸಿವಿನ ಪಾಲಾದ ಮೇಲೆ
ನನ್ನ ಮೈಮೇಲಿರುವುದಷ್ಟೆ ನನದೆಂದು ಅರಿವಾಗಿದೆ
ನಾ ಕಾಡುವುದಿಲ್ಲ, ಬೇಡುವುದಿಲ್ಲ. ಕೊಂದು, ಪಡೆದು,
ಬೆರಳಮಾಲೆ ಕೊರಳಲೇ ದರಿಸುವೆ
ನನ್ನ ಬಳಿ ಈಗ ಸಾವಿರಕೆ ಕಡಿಮೆಯಿರುವುದು ಒಂದೇ ಒಂದು ಕಿರುಬೆರಳು
ಗುರುದಕ್ಷಿಣೆ ನೀಡಿ ತಾಯ್ತಂದೆಯರ ಸೇರಲು ಕಡಿಮೆ ಒಂದೇ ಒಂದು ಕಿರುಬೆರಳು
ಪಂಡಿತನಾಗಿ ಸತಿಸುತರೊಡನೆ ಬದುಕಲು ಕಡಿಮೆ ಒಂದೇ
ಒಂದು ಕಿರುಬೆರಳು
ಹಿಂಸಪಶುವಿನ ವನವಾಸ ಮುಗಿಯಲು ಕಡಿಮೆ ಒಂದೇ ಒಂದು ಕಿರುಬೆರಳು
ಒಂದು ಬೇಕು, ಒಂದೇ ಒಂದು. ನೀನಾಗಿಯೇ ಕೊಟ್ಟರೆ
ಜೀವವು ಆದೀತು
ಇಲ್ಲವಾದಲ್ಲಿ ಬೆರಳೂ ಇಲ್ಲ, ಕೊರಳೂ ಇಲ್ಲ. ನೆನಪಿಡು.' ...

ಮಗು ಒಂದೇಕೆ ಎರಡನೂ ತಗೊ. ಕಿರುಬೆರಳೇಕೆ,
ಹೆಬ್ಬೆರಳನೂ ತಗೊ
ಬರೀ ಬೆರಳೇಕೆ, ಪಾದ ಕೈಗಳನೂ ತಗೊ. ಈ ಪ್ರಾಣವೂ
ನಿನದೇ ತಗೋ
ಹೇಗಿದ್ದರೂ ಅಳಿಯಬೇಕು ಒಂದಲ್ಲ ಒಂದು ದಿನ ಎಲ್ಲವೂ
ನನ್ನದಷ್ಟೇ ಅಲ್ಲ ನನ್ನ ಮೈಮೇಲಿರುವ ಇವೆಲ್ಲವೂ..

ಬುದ್ಧ ಹಸ್ತ ಅಂಗುಲಿಮಾಲನ ಬಳಿ ಚಾಚಿತು
ಮುಂಗುರುಳ ನೇವರಿಸಿ ಬೆವರ ಒರಸಿತು
ಕಿರುಬೆರಳು ಕೇಳಿದರೆ ಪ್ರಾಣವನೇ ಕೊಡಲೊಪ್ಪಿದವ
ಹೆದರದೆ ಬೆವರದೆ ಕೈ ಮುಂಚಾಚುವವ
ತನ್ನ ಮೈ ತನ್ನದಷ್ಟೆ ಅಲ್ಲ ಎನುವವ
ಯರೀತ? ಇವ ಯಾರೀತ?
ಇದ್ದರೆ ಬುದ್ಧನೇ ಇರಬೇಕು ಇವ..

ಬುದ್ಧನೇ ನಿನಗೆ ಶರಣು
ಸಂಘವೇ ಶರಣು,
ಧಮ್ಮವೇ ಶರಣು..

ಪ್ರಜಾಪಾಲಕನ ಕೆಲಸ ಪೀಡಕರ ದಂಡಿಸುವುದು ಎಂದು
ತಿಳಿದವನೇ ರಾಜ.
ಕೋಸಲದ ಪ್ರಸೇನಜಿತು ಅಂಗುಲಿಮಾಲನ ಸಂಹರಿಸಲು
ಬಂದ.
ಕಟ್ಟಾಳುಗಳ ದೊಡ್ಡ ಸೇನೆ, ಜೊತೆಗೆ ಆನೆ, ಕುದುರೆ, ಬೆಂಬಲಕ್ಕೆ
ನಿಂದ ಮಾರ್ಗ ಮಧ್ಯೆ ಬುದ್ಧಗುರುವಿನ ದರ್ಶನಕ್ಕೆ

ಬುದ್ಧನೆಂದ:
ರಾಜ ಕೊಡುವುದು ರಾಜಧರ್ಮ
ಕೊಡಬೇಕು ಕೊಟ್ಟವ ಮೇಲೆನಿಸದಂತೆ ಪಡೆದವ
ಕೀಳೆನಿಸದಂತೆ
ಕೊಡು, ಪಡೆದವ ತಾನೇ ಎದ್ದು ನಿಲ್ಲಬಲ್ಲವನಾಗುವಂತೆ

ಅಂಗುಲಿಮಾಲನಿಗೀಗ ನೀನೇನು ಕೊಡುವವನಿರುವೆ?
ಅವನೂ ಕೋಸಲದ ಪ್ರಜೆಯೇ ತಾನೇ

ನರಹಂತಕನಿಗೆ ಕೊಡುವುದೇನಿದೆ, ಏನಿದ್ದರೂ ಪಡೆಯುವುದಷ್ಟೆ
ಅವನ ಪ್ರಾಣ'

ಅವ ಭಿಕ್ಕುವಾಗಿದ್ದರೆ ಒಂದು ವೇಳೆ? ಅವನ ನಿನಗೆ ತೋರಿಸಿದರೆ?

ಎಲ್ಲಿಯಾದರೂ ಉಂಟೆ ಬುದ್ಧ? ನರಹಂತಕರು
ಭಿಕ್ಕುವಾದರೇ?
ಸಿಗಲಿದೆ ಕ್ಷಮಾದಾನ ಅವ ಭಿಕ್ಕುವೇ ಆಗಿದ್ದರೆ...

ಕಂಬಳಿಹುಳ ಚಿಟ್ಟೆಯಾಗದೆ? ಬದಲಾವಣೆಯೇ ನಿಯಮ
ಲೋಕದಲ್ಲಿ
ನೋಡು, ಓ ಅಲ್ಲಿ, ಧ್ಯಾನಸ್ಥ ತರುಣ, ಏಳು ಆನೆಗಳಷ್ಟು
ಬಲಶಾಲಿ
ಅವನೇ ಅಂಗುಲಿಮಾಲ, ಅಲ್ಲಲ್ಲ, ಬೆರಳ ಮಾಲೆಯಿಲ್ಲಿ ಈಗವನ
ಕೊರಳಲಿ
ಅವನ ಹೆಸರು ಅಹಿಂಸಕ, ಕಾಣುತಿರುವನೇ ದೀಪದ ಮೂಲೆಯಲ್ಲಿ?

ಕಿವಿಯ ನಂಬದಿದ್ದರೂ ಕಣ್ಣುಗಳ ನಂಬಬೇಕು
ಕಣ್ಣುಗಳನ್ನಲ್ಲದಿದ್ದರೂ ಬುದ್ಧನ ನಂಬಲೇಬೇಕು
ಪ್ರಸೇನಜಿತು ಅಂಗುಲಿಮಾಲನ ಅಹಿಂಸಕನೆಂದು ಒಪ್ಪಿದ
ಅಚ್ಚರಿ, ಆನಂದದಲಿ ಹೊಸ ದಿರಿಸುಗಳ ನೀಡ ಹೋದ.
ಸಂಘದ ಮೂರು ದಟ್ಟಿ ಪಡೆದವನು ಹೆಚ್ಚು ಬೇಡವೆಂದ

ಅಂದು ಬೆರಳ ಕಡಿದವ ಇಂದು ಭಿಕ್ಕು, ಬೇಡುವವ
ನಂಬದ ಜನಕೆ, ಶಂಕೆ ತಿರಸ್ಕಾರ ಭಯ
ಅಹಿಂಸಕಗೆ ಒಮ್ಮೊಮ್ಮೆ, ಪಾಪಪ್ರಜ್ಞೆ, ಮಗದೊಮ್ಮೆ ಪಶ್ಚಾತ್ತಾಪ
ನಾ ಪತಿತನಲ್ಲವೇ?' ಮತ್ತೆಮತ್ತೆ ಕೇಳುತ್ತಾನೆ ಬುದ್ಧ ಗುರುವನ್ನ

ಪತಿತರಲಿ ಎರಡು ತೆರನ
ಒಬ್ಬರಿಗೆ ತಾ ಪತಿತ ಏಕೆಂದು ತಿಳಿದಿರುವುದಿಲ್ಲ

ಅವರಿಗೆ ಹೊರಬರುವ ದಾರಿಗಳೇ ಇಲ್ಲ
ನೀ ಹಾಗಲ್ಲ ಯಾಕೆ ಪತಿತನೆಂದು ತಿಳಿದವ, ಹೊರದಾರಿ
ಅರಿತವ
ಶಂಕೆ ಬೇಡ, ಪತಿತನೂ ಪಾವನನಾಗಬಹುದು
ಪಂಚಶೀಲಗಳು ನಿನ್ನ ನಾಳೆಗಳ ಕಾಯಬಹುದು

ಲೆಕ್ಕವಿರದಷ್ಟು ನರಹತ್ಯೆ, ಅದಕೇನು ಪ್ರಾಯಶ್ಚಿತ್ತ?
ಪವಿತ್ರಗೊಳಿಸುವೆಯ ಬುದ್ಧಗುರುವೆ ನನ್ನ?'

ಯಾರು ಯಾರನೂ ಪವಿತ್ರಗೊಳಿಸಲಾರರು,
ಅಪವಿತ್ರಗೊಳಿಸಲೂ ಆರರು
ಪವಿತ್ರ ಅಪವಿತ್ರಗಳು ನಿನ್ನೊಳಗೇ ಇವೆ, ಚರಾಚರಗಳ
ಸಮನಾಗಿ ಪ್ರೀತಿಸು,
ಧಮ್ಮವೆಂದರೆ ಇದು
ಕೇವಲ ಪ್ರೇಮವಷ್ಟೇ ಸಾಲದು, ಮೈತ್ರಿಯೂ ಇರಬೇಕು
ಮನುಜರನಷ್ಟೆ ಅಲ್ಲ, ಸಕಲ ಚರಾಚರಗಳ ಪ್ರೀತಿಸಬೇಕು.

ಬುದ್ಧ ಹೇಳುತ್ತ ಹೋದ, ಕೇಳುತ್ತ ಹೋದ
ಮೈಯಲ್ಲ ಕಿವಿಯಾದ, ಕರುಣೆಯೇ ಉಸಿರಾದ...

**ಆಕರ : ಬುದ್ಧ ಚರಿತೆ (ಖಂಡಕಾವ್ಯ)**
**ಡಾ. ಎಚ್.ಎಸ್. ಅನುಪಮಾ**

# 2. 21 ದಿನಗಳ ದೀರ್ಘ ಉಪವಾಸ

**– ಡಿ.ಎಸ್. ನಾಗಭೂಷಣ್**

ಗಾಂಧಿ ಅಹಮದಾಬಾದ್‌ನ ಎಐಸಿಸಿ ಸಭೆಯ ನಂತರ ದೆಹಲಿ–ಬಂಗಾಳ–ಪೂನಾ ಹೀಗೆ ಪ್ರವಾಸ ಮಾಡಿ ಹಿಂದೂ–ಮುಸ್ಲಿಂ ನಾಯಕರನ್ನು ಭೇಟಿ ಮಾಡಿ ಸೌಹಾರ್ದ ಸಾಧನೆಯ ಪ್ರಯತ್ನಗಳನ್ನು ಮಾಡುತ್ತಿದ್ದಾಗಲೇ ಸೆಪ್ಟೆಂಬರ್ ಎರಡನೇ ವಾರದಲ್ಲಿ ಅವರ ಎದೆ ನಡುಗಿಸುವ ಸುದ್ದಿಯೊಂದು ಬಂತು. ವಾಯುವ್ಯ ಗಡಿ ಪ್ರಾಂತ್ಯದ ಕೋಹತ್ ಎಂಬ ಊರಿನಲ್ಲಿ ಕೋಮು ಗಲಭೆ ಭುಗಿಲೆದ್ದು ನೂರಕ್ಕೂ ಹೆಚ್ಚು ಜನರ ಆಹುತಿ ತೆಗೆದುಕೊಂಡಿತ್ತು. ಇಸ್ಲಾಂ ಮತ್ತು ಕುರಾನ್‌ಗೆ ಅವಮಾನ ಮಾಡುವಂತಹ ಕರಪತ್ರವೊಂದು ಆ ಊರಿನಲ್ಲಿ ಕಂಡುಬಂದದ್ದೇ ಕಾರಣವಾಗಿ ಮುಸ್ಲಿಮರು ಆ ಕರಪತ್ರದ ಮೂಲವೆಂದು ಅನುಮಾನಪಟ್ಟ ಹಿಂದೂ ಕುಟುಂಬಗಳಿದ್ದ ಕಟ್ಟಡವೊಂದಕ್ಕೆ ಮುತ್ತಿಗೆ ಹಾಕಿ ಅದಕ್ಕೆ ಬೆಂಕಿ ಹಚ್ಚಿದ್ದರು. ಒಳಗಿದ್ದವರು ಗುಂಡು ಹಾರಿಸಿ ಮುತ್ತಿಗೆ ಹಾಕಿದ್ದ ಮುಸ್ಲಿಮರಲ್ಲಿ ಕೆಲವರನ್ನು ಕೊಂದಾಗ ಮತ್ತಷ್ಟು ಸಿಟ್ಟಿಗೆದ್ದ ಮುಸ್ಲಿಮರು, ಎಲ್ಲ ಹಿಂದೂ ಮತ್ತು ಸಿಖ್ಖರ ಮನೆ ಅಂಗಡಿಗಳ ಮೇಲೆ ದಾಳಿ ಮಾಡಿದರು. ಮತ್ತಷ್ಟು ಹೆಣಗಳು ಬಿದ್ದವು. ದೇವಾಲಯ–ಗುರುದ್ವಾರಗಳು ಧ್ವಂಸಗೊಂಡವು ಇಲ್ಲವೇ ಅಪವಿತ್ರಗೊಂಡವು. ಕೊನೆಗೆ ಊರಿನಲ್ಲಿ ಅಲ್ಪಸಂಖ್ಯಾತರಾಗಿದ್ದ ಹಿಂದೂ–ಸಿಖ್ ಗಂಡಸರು ಊರು ಬಿಟ್ಟು ನೂರು ಮೈಲಿಯಾಚೆಯ ರಾವಲ್ಪಿಂಡಿಗೆ ಪರಾರಿಯಾದರು. ಊರಲ್ಲಿ ಉಳಿದ ಹಿಂದೂ–ಸಿಖ್ ಮಹಿಳೆಯರನ್ನು ಹೊತ್ತೊಯ್ದ ಮುಸ್ಲಿಮರು ಅವರನ್ನು ಮತಾಂತರಗೊಳಿಸಿ ಮರುಮದುವೆಗಳನ್ನು ಮಾಡಿದರು ಎಂಬ ಸುದ್ದಿಯೂ ಹರಡಿತ್ತು.

ಆಗ ಗಾಂಧಿ ಕೋಹತ್‌ಗೆ ಹೋಗುವ ಮಾರ್ಗವಾಗಿ ದೆಹಲಿಯಲ್ಲಿದ್ದು, ಮಹಮ್ಮದಾಲಿಯವರ ಮನೆಯಲ್ಲಿ ವಾಸ್ತವ್ಯ ಹೂಡಿದ್ದರು. ಆದರೆ ಸರ್ಕಾರ ಅವರು ಕೋಹತ್‌ಗೆ ಭೇಟಿ ಕೊಡಲು ಅನುಮತಿ ನೀಡಿರಲಿಲ್ಲ. ಈ ಸಂದರ್ಭವನ್ನು 'ದ ಲೈಫ್ ಆಫ್ ಮಹಾತ್ಮಾ ಗಾಂಧಿ' ಕೃತಿಯ ಲೂಯಿ ಫಿಷರ್ ವರ್ಣಿಸಿರುವುದು ಹೀಗೆ: 'ಗಾಂಧಿಯವರು ಪೂರ್ವ–ಪಶ್ಚಿಮಗಳ ಸಂಗಮವಾಗಿದ್ದರು. ಅವರು ಈವರೆಗೆ ಎರಡೂ ಸಮುದಾಯಗಳ ನಡುವೆ ಸೇತುವೆ ಕಟ್ಟಲು ಮಾತುಕತೆ–ಬರವಣಿಗೆಯ ಪಶ್ಚಿಮದ ಪರಿಕರಗಳನ್ನು ಬಳಸಿ ಸೋತಿದ್ದರು. ಈಗ ಅವರು ಧ್ಯಾನ–ಪ್ರಾಯಶ್ಚಿತ್ತ ಸೆಪ್ಟೆಂಬರ್ 17 ರಿಂದ 21 ದಿನಗಳ 'ಪ್ರಾಯಶ್ಚಿತ್ತ ಮತ್ತು ಪ್ರಾರ್ಥನೆ'ಗಳ ಉಪವಾಸ ಪ್ರಾರ್ಥನೆಯ ಪೂರ್ವದ ಪರಿಕರಗಳನ್ನು ಬಳಸಲು ತೀರ್ಮಾನಿಸಿದ್ದರು. ಅವರು ತಾವು ಕೈಗೊಳ್ಳುವುದಾಗಿ ಪ್ರಕಟಿಸಿದರು.

ತಮ್ಮಲ್ಲಿ ಹಿಂದೂಗಳು ಇಟ್ಟಿದ್ದ ನಂಬಿಕೆ ಭಂಗವಾಗುವಂತಹ ಘಟನೆಗಳು ನಡೆಯುತ್ತಿವೆ ಎಂಬ ಅಭಿಪ್ರಾಯ ಗಾಂಧಿಯವರಲ್ಲಿ ಗಟ್ಟಿಗೊಳ್ಳತೊಡಗಿದ್ದೇ ಅವರು ಈ ಪ್ರಾಯಶ್ಚಿತ್ತದ ಉಪವಾಸ ಕೈಗೊಳ್ಳಲು ಪ್ರೇರಣೆಯಾಗಿತ್ತು. ಅದನ್ನು ಉಪವಾಸ ಪ್ರಕಟಿಸುವ ಮುನ್ನ ನೀಡಿದ ಹೇಳಿಕೆಯಲ್ಲೂ ಅವರು ಸೂಚಿಸಿದ್ದರು. ಜೊತೆಗೆ ಸೆಪ್ಟೆಂಬರ್ 4ರ 'ಯಂಗ್ ಇಂಡಿಯಾ'ದಲ್ಲೂ ತಮ್ಮನ್ನು ಪ್ರೀತಿಸಿದವರ ಎದೆಯಲ್ಲಿ ತಾವು ಪ್ರೀತಿಯ ಭರದಲ್ಲಿ ನೋವಿನ ಗಾಯ

ಉಂಟುಮಾಡಿರುವ ಅರಿವು ತಮಗಾಗಿದೆ ಎಂದೂ ನಿವೇದಿಸಿದ್ದರು. ಪ್ರಾರ್ಥನೆ ಮುಸ್ಲಿಮರ ಆತ್ಮಾವಲೋಕನಕ್ಕಾಗಿ ಎಂದೂ ಅವರು ಹೇಳಿದ್ದರು. ಗಾಂಧಿ, ಅಲಿ ಸೋದರರಲ್ಲಿ ಇಟ್ಟಿದ್ದ ನಂಬಿಕೆ ಸುಳ್ಳಾಗಿದೆ ಎಂದು ಹಿಂದೂಗಳು ಭಾವಿಸತೊಡಗಿದ್ದಾರೆ ಎಂದು ಅವರು ಅಲಿ ಸೋದರರಿಗೆ ಹೇಳಿದರು. ಮಹಮ್ಮದಾಲಿ ಮತ್ತು ಗಾಂಧಿ ಭಕ್ತೆಯಾಗಿದ್ದ ಅವರ ತಾಯಿ ಎಷ್ಟೇ ಹೇಳಿದರೂ ಗಾಂಧಿ ಉಪವಾಸ ಕೈಬಿಡದಿರಲು ನಿರ್ಧರಿಸಿದರು. 21 ದಿವಸಗಳ ಮುಂಚೆ ಏನಾದರೂ ತಮ್ಮ ಪ್ರಾಣ ಹೋಗುವಂತಹ ಸಂದರ್ಭ ಬಂದಲ್ಲಿ ಮಾತ್ರ ತಾವು ಉಪವಾಸ ನಿಲ್ಲಿಸುವುದಾಗಿ ಹೇಳಿದ ಅವರು ಬರೀ ನೀರು ಮತ್ತು ಅಗತ್ಯ ಬಿದ್ದರೆ ಉಪ್ಪು ಸಹಿತವಾದ ನೀರನ್ನು ಮಾತ್ರ ಸೇವಿಸುವುದಾಗಿ ಹೇಳಿ 1924 ರ ಸೆಪ್ಟೆಂಬರ್ 18ರಂದು ಅಲಿಯವರ ಮನೆಯಲ್ಲಿಯೇ ಉಪವಾಸ ಆರಂಭಿಸಿದರು.

## ಅನುಯಾಯಿಗಳ ತಲ್ಲಣ

ಕೆಲ ದಿನಗಳ ಹಿಂದಷ್ಟೇ ಶಸ್ತ್ರ ಚಿಕಿತ್ಸೆಯ ನಂತರ ಶುಶ್ರೂಷೆ ಪಡೆದು ಸಾಮಾನ್ಯ ಜೀವನಕ್ಕೆ ಹಿಂದಿರುಗಿದ್ದ ಗಾಂಧಿಯ ದೇಹ ಇಷ್ಟು ದೀರ್ಘ ಉಪವಾಸವನ್ನು ತಡೆಯಬಲ್ಲದೇ ಎಂಬುದು ಎಲ್ಲರ ಆತಂಕವಾಗಿತ್ತು. ಆದರೆ ಗಾಂಧಿ, ಇಬ್ಬರು ಗಂಡಂದಿರೂ ಕೈಬಿಟ್ಟಾಗ ದ್ರೌಪದಿ ಬೇರೆ ದಾರಿ ಕಾಣದೆ ಭಗವಂತನಿಗೆ ಮೊರೆ ಇಟ್ಟ ಅಸಹಾಯಕತೆಯಲ್ಲೇ ತಾವು ಉಪವಾಸ ಆರಂಭಿಸಿರುವುದಾಗಿ ಹೇಳಿದರು. ಉಪವಾಸ ನಿಲ್ಲಿಸಬೇಕೆಂದು ಒತ್ತಾಯಿಸಿದ ಶೌಕತ್ ಅಲಿಯವರಿಗೆ ಅವರು 'ಇದು ನನ್ನ ಮತ್ತು ನನ್ನ ಕರ್ತೃವಿನ ನಡುವಣ ವಿಷಯ' ಎಂದು ಹೇಳಿದರಲ್ಲದೆ 'ಇತರರೊಂದಿಗೆ ಸ್ನೇಹ ಬಾಂಧವ್ಯ ಇಸ್ಲಾಂನಲ್ಲಿ ನಿಷಿದ್ಧವಾಗಿಲ್ಲದಿದ್ದರೆ ಅನುಯಾಯಿಗಳು ಹಿಂದೂಗಳೊಂದಿಗೆ ಸ್ನೇಹಕ್ಕಾಗಿ ಮುಂದಾಗಬೇಕು. ಅಂತಹ ಸ್ನೇಹ ಬಾಂಧವ್ಯ ತಮ್ಮ ಧರ್ಮಕ್ಕೆ ವಿರುದ್ಧವೆಂದು ಅವರು ಭಾವಿಸುವುದಾದರೆ ನಾನು ಬದುಕುವುದು ವ್ಯರ್ಥ' ಎಂಬ ಮಾರ್ಮಿಕ ಸಂದೇಶವನ್ನೂ ಅವರಿಗೆ ನೀಡಿದರು.

ಗಾಂಧಿಯವರನ್ನು ಕಾಣಲು ಕಸ್ತೂರಬಾ, ರಾಮದಾಸ್ ಮತ್ತು ಆಶ್ರಮವಾಸಿಗಳೂ, ಗಾಂಧಿಯವರ ಆಪ್ತ ಗೆಳೆಯ ಆ್ಯಂಡ್ರ್ಯೂಸ್ ಕೂಡ ಧಾವಿಸಿ ಬಂದರು. ಇಬ್ಬರು ಮುಸ್ಲಿಂ ವೈದ್ಯರು ಅವರ ಆರೋಗ್ಯದ ಮೇಲೆ ನಿಗಾ ಇಟ್ಟಿದ್ದರು. ಗಾಂಧಿ ಬೆಳಿಗ್ಗೆ 4.30ಕ್ಕೆ ಎದ್ದು ಎಲ್ಲರೊಂದಿಗೆ ಸರ್ವಧರ್ಮ ಪ್ರಾರ್ಥನೆ ಮಾಡುತ್ತಿದ್ದರು. ನಂತರ ಅರ್ಧ ತಾಸು ಚರಕಾದಲ್ಲಿ ನೂಲು ತೆಗೆಯುತ್ತಿದ್ದರು. ತದನಂತರ 'ಯಂಗ್ ಇಂಡಿಯಾ' ಮತ್ತು 'ನವಜೀವನ'ಗಳಿಗಾಗಿ ಲೇಖನಗಳನ್ನು ಹೇಳಿ ಬರೆಸುತ್ತಿದ್ದರು. ಬಂದ ಜನರೊಂದಿಗೆ ಮಾತನಾಡುತ್ತಿದ್ದರು ಹಾಗೂ ಬಂದ ಪತ್ರಗಳನ್ನು ಓದಿ ಉತ್ತರಗಳನ್ನು ಬರೆಸುತ್ತಿದ್ದರು. ಈ ಕೆಲಸಕ್ಕೆ ಹೇಗೂ ಮಹದೇವ ದೇಸಾಯಿ ಅವರೊಂದಿಗೆ ಸದಾ ಇರುತ್ತಿದ್ದರು. ಒಮ್ಮೊಮ್ಮೆ ಅವರು ಕಾರಿನಲ್ಲಿ ವಾಯುವಿಹಾರಕ್ಕೂ ಹೋಗಿ ಬರುತ್ತಿದ್ದರು. ಅವರಿದ್ದ ಮನೆಯ ಸುತ್ತ ಸದಾ ಜನ ಸೇರಿಯೇ ಇರುತ್ತಿದ್ದರು. ಉಪವಾಸದ ನಾಲ್ಕನೆಯ ದಿವಸ, ಅವರು ತಾವೇಕೆ ಮುಸ್ಲಿಮರೊಬ್ಬರ ಮನೆಯಲ್ಲಿ ಉಪವಾಸ ಕೈಗೊಂಡಿದ್ದೇನೆ ಎಂಬುದನ್ನು ವಿವರಿಸುತ್ತಾ, 'ಹಿಂದೂ ಧರ್ಮದ ಮನಸ್ಸಿನ ಒಳತೋಟಿಗಳು ನನಗೆ ಸಹಜವಾಗಿ ಅರ್ಥವಾಗುವುವು. ಆದರೆ ಮುಸ್ಲಿಮರ ಮನದ ಒಳತೋಟಿ ಅರಿಯಲು ನಾನು ಅತ್ಯುತ್ತಮ ಮುಸ್ಲಿಮನೋರ್ವನ ಮನಸ್ಸನ್ನು ಹತ್ತಿರದಿಂದ ಪರಿವೀಕ್ಷಿಸಿ ಅವರ ವ್ಯಕ್ತಿತ್ವ ಮತ್ತು ಕೃತ್ಯಗಳ ಬಗ್ಗೆ ಒಂದು ಹೆಚ್ಚು ನ್ಯಾಯಯುತವಾದ ಅಂದಾಜು ಮಾಡಬಹುದು' ಎಂದು ಹೇಳಿದ್ದರು.

ಗಾಂಧಿಯವರ ಉಪವಾಸಕ್ಕೆ ಪ್ರತಿಸ್ಪಂದನವಾಗಿ ದೆಹಲಿಯಲ್ಲಿ ಸೆಪ್ಟೆಂಬರ್ 25 ಮತ್ತು 27ರಂದು ಮೋತಿಲಾಲ್ ನೆಹರೂ ಅಧ್ಯಕ್ಷತೆಯಲ್ಲಿ ಏಕತಾ ಸಮ್ಮೇಳನವೊಂದನ್ನು ಏರ್ಪಡಿಸಲಾಗಿತ್ತು. ಅದು ಯಾರೇ ಆಗಲಿ ಯಾರದ್ದೇ ಪೂಜಾ ಸ್ಥಳವನ್ನು ಯಾವುದೇ ಕಾರಣಕ್ಕೆ ಅಪವಿತ್ರಗೊಳಿಸುವುದರ ಮತ್ತು ಯಾರನ್ನೇ ಆಗಲಿ ಬಲಾತ್ಕಾರವಾಗಿ ಮತಾಂತರಿಸುವ ಅಥವಾ ತನ್ನ ಮತಾಚಾರಗಳನ್ನು ಇತರರ ಹಕ್ಕುಗಳನ್ನು ಲೆಕ್ಕಿಸದೆ ಅವರ ಮೇಲೆ ಹೇರುವುದರ ವಿರುದ್ಧ ನಿರ್ಣಯವನ್ನು ಅಂಗೀಕರಿಸಿತು.

ಉಪವಾಸದ ಹನ್ನೆರಡನೆಯ ದಿವಸ ಗಾಂಧಿಯವರು ಪ್ರಕಟಣೆಗಾಗಿ ಬರೆಸಿದ ಮಟ್ಟ ಲೇಖನ ಹೀಗಿತ್ತು: 'ಸರ್ಕಾರದಲ್ಲಿರುವ ಇಂಗ್ಲಿಷರ ಮನಃಪರಿವರ್ತನೆಗಾಗಿ ಹಂಬಲಿಸಿ ಈವರಗೆ ಹೋರಾಟ ಮಾಡಿದ್ದೇನೆ. ಅದಿನ್ನೂ ಸಾಧ್ಯವಾಗಬೇಕಿದೆ. ಆದರೆ ನಮ್ಮ ಸದ್ಯದ ಹೋರಾಟ ಹಿಂದೂ ಮತ್ತು ಮುಸ್ಲಿಮರ ಹೃದಯ ಪರಿವರ್ತನೆಗಾಗಿ ನಡೆಯಬೇಕಿದೆ. ನಾವು ಸ್ವಾತಂತ್ರ್ಯದ ಕನಸನ್ನು ಕಾಣುವ ಸಾಹಸದ ಮೊದಲು ಒಬ್ಬರು ಇನ್ನೊಬ್ಬರನ್ನು ಪ್ರೀತಿಸುವ, ಸಹಿಸುವ, ಇನ್ನೊಬ್ಬರ ಧರ್ಮವನ್ನು ಅವುಗಳ ಪೂರ್ವಾಗ್ರಹಗಳು ಮತ್ತು ಮೂಢನಂಬಿಕೆಗಳೊಂದಿಗೂ ಕೂಡ ಗೌರವಿಸುವ ಮತ್ತು ಪರಸ್ಪರ ನಂಬುವ ದಿಟ್ಟತನ ತೋರಬೇಕು. ಇದಕ್ಕೆ ತನ್ನಲ್ಲಿ ತಾನು ನಂಬಿಕೆ ಇರಿಸಿಕೊಳ್ಳಬೇಕಾಗುತ್ತದೆ. ಅದೇ ದೈವ ಶ್ರದ್ಧೆ ಕೂಡ. ಅದೊಂದಿದ್ದರೆ ಇತರರ ಬಗ್ಗೆ ಭಯವೇ ಉಂಟಾಗದು.

## ದೇವರ ಮೊರೆ ಹೊಕ್ಕ ಗಾಂಧಿ

ಉಪವಾಸ ಮೂರನೇ ವಾರಕ್ಕೆ ಕಾಲಿಡುತ್ತಿದ್ದಂತೆ ಅವರ ಆರೋಗ್ಯದ ಬಗ್ಗೆ ವೈದ್ಯರಲ್ಲಿ ಆತಂಕ ಶುರುವಾಯಿತು. ಅವರ ಮೂತ್ರದಲ್ಲಿ ವಿಷಕಾರಿ ಆಮ್ಲಗಳು ಕಾಣಿಸಿಕೊಂಡಿದ್ದವು. ವೈದ್ಯರು ನೂಲುವುದನ್ನು ನಿಲ್ಲಿಸಲು ಗಾಂಧಿಯನ್ನು ಕೋರಿದರು. ಆದರೆ ಅವರು ಚಿಂತೆ ಬೇಡ ಎಲ್ಲ ಸರಿ ಹೋಗುತ್ತದೆ ಎಂದು ಅವರ ಸಲಹೆಯನ್ನು ತಳ್ಳಿಹಾಕಿದರು. ಆಶ್ಚರ್ಯವೆಂದರೆ ಮಾರನೆಯ ದಿನ ಅವರ ಮೂತ್ರ ಪರೀಕ್ಷೆ ಮಾಡಿದಾಗ ಆ ವಿಷಕಾರಿ ಆಮ್ಲದ ಅಂಶಗಳು ಕಾಣೆಯಾಗಿದ್ದವು!

ಇಪ್ಪತ್ತನೆ ದಿವಸ ಅವರು ಪ್ರಾರ್ಥನಾ ರೂಪದ ಈ ಬರಹವೊಂದನ್ನು ಬರೆಸಿದರು: 'ಈಗ ಶಾಂತಿಯ ಲೋಕದಿಂದ ಅಶಾಂತಿಯ ಲೋಕದೆಡೆಗೆ ನಡೆದಿದ್ದೇನೆ. ಈ ಬಗ್ಗೆ ಯೋಚಿಸಿದಷ್ಟೂ ನಾನು ಅಸಹಾಯಕತೆಯಲ್ಲಿ ತೊಳಲಾಡುತ್ತೇನೆ. ನಾನೇನೂ ಮಾಡಲಾರನೆಂದು ನನಗೆ ಗೊತ್ತು. ದೇವರು ಎಲ್ಲವನ್ನೂ ಮಾಡಬಲ್ಲನು. ಓ ದೇವರೆ, ನನ್ನನ್ನು ನಿನ್ನ ಉಪಕರಣವನ್ನಾಗಿ ಮಾಡಿಕೊಂಡು ನಿನ್ನ ಇಚ್ಛೆಗೆ ತಕ್ಕಂತೆ ಬಳಸಿಕೋ! ಮನುಷ್ಯ ಏನೂ ಇಲ್ಲ. ನೆಪೋಲಿಯನ್ ಏನೆಲ್ಲ ನಕ್ಷೆ ಹಾಕಿದರೂ ಸೇಂಟ್ ಹೆಲೆನಾದ ಸೆರೆಮನೆ ಸೇರಬೇಕಾಯಿತು. ಮಹಾ ಬಲಶಾಲಿಯಾದ ಕೈಸರ್ ಯೂರೋಪ್‌ನ ಸಿಂಹಾಸನದ ಕನಸು ಕಂಡವನು ಕೇವಲ ಒಬ್ಬ ಸಾಮಾನ್ಯ ಪ್ರಜೆಯಾಗಿ ಬದುಕು ಕಳೆಯಬೇಕಾಯಿತು. ಇದು ದೇವರ ಇಚ್ಛೆ, ಇಂತಹ ಉದಾಹರಣೆಗಳ ಬಗ್ಗೆ ಧ್ಯಾನಿಸುತ್ತಾ ನಮ್ರರಾಗೋಣ. ಈ ಇಪ್ಪತ್ತು ದಿನಗಳು ದೈವ ಕೃಪೆಯ, ಸುಖ, ಶಾಂತಿಯ ದಿನಗಳೆ ಆಗಿವೆ', ಅಂದು ಅವರು ತುಳಸಿ ರಾಮಾಯಣದ, ಎಲ್ಲ ಪಾಪಗಳಿಂದ ಮುಕ್ತಗೊಳಿಸೆಂದು ಪಾಪಿಯೊಬ್ಬ ರಾಮನನ್ನು ಬೇಡುವ ಶ್ಲೋಕವೊಂದನ್ನು ಒಂದೇ ಸಮನೆ ಗುಣಗುಣಿಸುತ್ತಿದ್ದರು. ತಮ್ಮ ಎದೆಯ ಬೇಗುದಿಯನ್ನು ದೇವರು ಮಾತ್ರ ಅರಿಯಬಲ್ಲನೆಂಬ

ಭಾವದಿಂದ ಅವರು ಆತನಲ್ಲಿ ಮೊರೆ ಇಡುವಂತಿತ್ತು.

ಅಂದು ಸಂಜೆ ಗಾಂಧಿಯ ಬಳಿ ಪ್ರಾರ್ಥನೆಗೆ ಬಂದ ಆ್ಯಂಡ್ರ್ಯೂಸ್, 'ಆ ಸಮಯದಲ್ಲಿ ಗಾಂಧಿ ಮುಖ ಚಂದ್ರನ ಬೆಳಕಲ್ಲಿ ಹೊಳೆಯುತ್ತಿತ್ತು. ಅವರು ತುಂಬ ಗೆಲುವಾಗಿದ್ದರು' ಎಂದು ಬರೆಯುತ್ತಾರೆ. ಮಾರನೆಯ ದಿವಸ ಅಕ್ಟೋಬರ್ 9 ಉಪವಾಸದ ಕೊನೆಯ ದಿನ. ಅಂದು ಮಧ್ಯಾಹ್ನ ಹನ್ನೆರಡೂವರೆ ಘಂಟೆಗೆ ಡಾ. ಎಂ.ಎ. ಅನ್ಸಾರಿ ಅವರು ನೀಡಿದ ಒಂದು ಲೋಟ ಕಿತ್ತಳೆ ರಸವನ್ನು ಕುಡಿದು ತಮ್ಮ ಉಪವಾಸಕ್ಕೆ ಮುಕ್ತಾಯ ಹಾಡಿದರು. ಆ ಸಂದರ್ಭದಲ್ಲಿ ಗಾಂಧಿಯವರಿಗೆ ಪ್ರಿಯವಾದ ಕ್ರೈಸ್ತ ಮತ್ತು ಹಿಂದೂ ಧಾರ್ಮಿಕ ಗೀತೆಗಳನ್ನು ಹಾಡಲಾಯಿತಲ್ಲದೆ ಕುರಾನ್‌ನಿಂದ ಆಯ್ದ ಭಾಗಗಳ ಪಠಣವೂ ನಡೆಯಿತು. ಇದಕ್ಕೆ ಮೋತಿಲಾಲ್ ನೆಹರೂ, ಸಿ.ಆರ್. ದಾಸ್, ಅಲಿ ಸೋದರರು, ಸ್ವಾಮಿ ಶ್ರದ್ಧಾನಂದ, ಅನಸೂಯಾ ಬೆನ್, ಆ್ಯಂಡ್ರೂಸ್, ದಕ್ಷಿಣ ಆಫ್ರಿಕಾದಲ್ಲಿನ ಗಾಂಧಿ ಗೆಳೆಯ ಇಮಾಂ ಅಬ್ದುಲ್ ಕಾದಿರ್ ಸೇರಿದಂತೆ ಒಂದು ದೊಡ್ಡ ಗುಂಪು ಸಾಕ್ಷಿಯಾಗಿತ್ತು. ಮಹಮ್ಮದಾಲಿವರು ಅದು ತಾವು ಕಟುಕನೊಬ್ಬನಿಂದ ಖರೀದಿಸಿ ತಂದಿದ್ದ ಹಸುವೊಂದನ್ನು ಗೋಶಾಲೆಗೆ ನೀಡಲು ಗಾಂಧಿಯವರಿಗೆ ಉಡುಗೊರೆಯಾಗಿ ನೀಡಿದರು.

ಈ ಉಪವಾಸ ಅನ್ಯರನ್ನು ಉದ್ದೇಶಿಸಿದಷ್ಟೇ ಗಾಂಧಿಯವರನ್ನೂ ಉದ್ದೇಶಿಸಿತ್ತು. ಅವರು ತಮ್ಮ ಇತ್ತೀಚಿನ ರಾಜಕೀಯ ಚಟುವಟಿಕೆಗಳ ಭರದಲ್ಲಿ ತಾವು ಇಟ್ಟ ಕೆಲ ಅವಸರದ ಹೆಜ್ಜೆಗಳು ಮತ್ತು ಆಡಿದ ಕೆಲವು ಮಾತುಗಳಿಂದಾಗಿ ಸಮೂಹದಿಂದ ಪರಿತ್ಯಕ್ತನಾಗಿಬಿಟ್ಟಿದ್ದೇನೆ ಎಂಬ ತೀವ್ರ ಪರಿತಾಪ ಅವರನ್ನು ಬಾಧಿಸುತ್ತಿತ್ತು. ಅದರಿಂದ ಬಿಡಿಸಿಕೊಂಡು, ಇನ್ನಷ್ಟು ವಿನಮ್ರತೆಯನ್ನು ರೂಢಿಸಿಕೊಳ್ಳುವ ಮಾರ್ಗವಾಗಿ ಈ ಉಪವಾಸ ಕೈಗೊಂಡಿದ್ದ ಗಾಂಧಿ, ತಮ್ಮ ಇತ್ತೀಚಿನ ರಾಜಕಾರಣದ ಮುಖ್ಯ ಕಾರ್ಯಕ್ರಮವಾಗಿದ್ದ ಮುಸ್ಲಿಂ ಐಕ್ಯತೆಗಾಗಿ ಹಿಂದೂ ಪ್ರಾಣಾರ್ಪಣೆಗೂ, ಸಿದ್ಧರಾಗಬೇಕೆಂದು ಅಂದು ಅಲ್ಲಿ ನೆರೆದಿದ್ದವರಿಗೆ ಕರೆಕೊಟ್ಟರು. ಹಕೀಂ ಅಜ್ಮಲ್ ಖಾನ್, ಅನ್ಸಾರಿ ಮತ್ತು ಅಬುಲ್ ಕಲಾಂ ಅವರು ಇದಕ್ಕೆ ಸಿದ್ಧವೆಂದು ಗಾಂಧಿಯವರಿಗೆ ಆಶ್ವಾಸನೆ ನೀಡಿದರು. ಆದರೆ ಈ ವಿಷಯದಲ್ಲಿ ಅವರಿಗೆ ಭರವಸೆಯ ಮೂರ್ತಿಯಾಗಿ ಕಂಡವರು ಮೋತಿಲಾಲರ ಮಗ ತರುಣ ಜವಾಹರಲಾಲ್ ನೆಹರೂ ಅವರು. ಉಪವಾಸದ ಸಂದರ್ಭದಲ್ಲಿ ಅವರು ತಮ್ಮ ಮಗಳು ಬಾಲಕಿ ಇಂದಿರಾಳೊಂದಿಗೆ ಬಂದು ಗಾಂಧಿಯವರನ್ನು ಕಂಡಿದ್ದರು. ಗಾಂಧಿ ನೆಹರೂಗೆ ಒಂದು ಮಿಂಚಿನ ತಂಡ ರಚಿಸಿಕೊಳ್ಳಲು ಹೇಳಿ, ಅದು ಕೋಮು ಗಲಭೆ ನಡೆದ ಕಡೆ ತಡ ಮಾಡದೆ ತೆರಳಿ ಶಮನ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಲಹೆ ಮಾಡಿದರು.

**ದೂರವಾದ ಅಲಿ ಸೋದರರು**

ಉಪವಾಸದ ನಂತರ ಗಾಂಧಿ ಕೋಹಟ್‌ಗೆ ಭೇಟಿ ನೀಡಲು ಪ್ರಯತ್ನಿಸಿದರಾದರೂ ಸರ್ಕಾರ, ಅಲ್ಲಿ ಇನ್ನೂ ಪರಿಸ್ಥಿತಿ ತಹಬಂದಿಗೆ ಬಂದಿಲ್ಲವೆಂದು ಅನುಮತಿ ನಿರಾಕರಿಸಿತು. ಆದರೆ ದಾಳಿಗೀಡಾಗಿದ್ದ ಹಿಂದೂಗಳು ಓಡಿಹೋಗಿ ಆಶ್ರಯ ಪಡೆದಿದ್ದ ರಾವಲ್ಪಿಂಡಿಗೆ ಹೋಗಲು ಅನುಮತಿ ಸಿಕ್ಕಿತು. ಅಲ್ಲಿಗೆ ಹೋದ ಗಾಂಧಿ ಹಿಂದೂ ನಿರಾಶ್ರಿತರನ್ನು ಭೇಟಿ ಮಾಡಿ ಗಲಭೆಯ ವಿವರಗಳನ್ನು ಅವರಿಂದ ತಿಳಿದುಕೊಂಡರಲ್ಲದೆ ಅವರಿಗೆ ಸಾಂತ್ವನ ಹೇಳಿ ಬಂದರು. ನಂತರ ಶೌಕತ್ ಅಲಿಯವರೊಂದಿಗೆ ಅಲ್ಲಿಗೆ ಭೇಟಿ ನೀಡಿ ಕೋಹಾಟ್‌ನ ಮುಸ್ಲಿಮರ ಜೊತೆಗೂ ಮಾತನಾಡಿದರು.

ನಂತರ ಗಾಂಧಿ ಮತ್ತು ಶೌಕತ್ ಕೋಹಾರ್ ಗಲಭೆಯ ಬಗ್ಗೆ ಒಂದೇ ತೀರ್ಮಾನಕ್ಕೆ ಬರಲಾಗದೆ, ಇಬ್ಬರೂ ಪ್ರತ್ಯೇಕ ವರದಿಗಳನ್ನು ಬರೆದರು. ಗಾಂಧಿ ಇವೆರಡನ್ನೂ 1925ರ ಮಾರ್ಚ್ 25ರ 'ಯಂಗ್ ಇಂಡಿಯಾ'ದಲ್ಲಿ ಪ್ರಕಟಿಸಿದರು. ಗಾಂಧಿ ತಮ್ಮ ಲೇಖನದಲ್ಲಿ ಹಿಂದೂಗಳಿಂದ ಪ್ರಚೋದನೆ ಆದದ್ದು ನಿಜವಾಗಿದ್ದರೂ ಅದಕ್ಕೆ ಮುಸ್ಲಿಮರ ಪ್ರತಿಕ್ರಿಯೆ ಅತಿಯಾಗಿ ಸಾಮೂಹಿಕ ಹತ್ಯೆ, ಬಲಾತ್ಕಾರ, ಮತಾಂತರ ಮತ್ತು ದೇವಾಲಯ–ಗುರುದ್ವಾರಗಳ ಪವಿತ್ರೀಕರಣ ಅಕ್ಷಮ್ಯವೆಂದು ಹೇಳಿದ್ದರು. ಇದಕ್ಕೆ ಸರ್ಕಾರದ ಹೊಣೆಗೇಡಿತನವೂ ಕಾರಣವಾಗಿದ್ದು, ಸರ್ಕಾರದ ಕಡೆಯಿಂದ ಭದ್ರತೆಯ ಆಶ್ವಾಸನೆ ಇಲ್ಲದೆ ಹಿಂದೂಗಳೂ ಯಾರೂ ಕೋಹತ್‌ಗೆ ಹಿಂದಿರುಗಬಾರದೆಂದೂ ಅವರು ಸೂಚಿಸಿದ್ದರು. ಶೌಕತ್ ಆಲಿಯವರು ತಮ್ಮ ಬರಹದಲ್ಲಿ ಮುಸ್ಲಿಮರ ಕೃತ್ಯಗಳನ್ನು ಖಂಡಿಸಿದ್ದರಾದರೂ, ಇದಕ್ಕೆ ಹಿಂದೂಗಳ ಪ್ರಚೋದನಕಾರಿ ಕರಪತ್ರವೇ ಕಾರಣವೆಂದು ಒತ್ತಿ ಹೇಳಿದ್ದರು. ವಾಯುವ್ಯ ಗಡಿ ಪ್ರಾಂತ್ಯದಲ್ಲಿ ಹಿಂದೂ ವ್ಯಾಪಾರಿಗಳ ಹಾವಳಿ ಹೆಚ್ಚಾಗಿದ್ದು ಇದರಿಂದ ಮುಸ್ಲಿಂ ಸಮುದಾಯ ಚಿಂತಾಕ್ರಾಂತವಾಗಿರುವುದೂ ಈ ಗಲಭೆಗಳಿಗೆ ಕಾರಣವಾಗಿದ್ದರೆ ಆಶ್ಚರ್ಯವಿಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದರು.

ಈ ಬರಹಗಳು ಗಾಂಧಿ ಮತ್ತು ಅಲಿ ಸೋದರರೀಗ ಸಮಾನ ಮನಸ್ಕರಾಗಿ ಉಳಿದಿಲ್ಲ ಎಂಬುದನ್ನು ಸೂಚಿಸುತ್ತಿತ್ತು. ನಂತರ ಘಟನೆಗಳೂ ಇದಕ್ಕೆ ಪೂರಕವಾಗಿ ನಡೆದು, ಇವರಿಬ್ಬರ ನಡುವೆ ಅಂತರ ಹೆಚ್ಚುತ್ತಾ ಹೋಯಿತು. ಭಿನ್ನಮತೀಯ ಅಹಮದೀಯನೊಬ್ಬನನ್ನು ಇಸ್ಲಾಮೀ ಕಾನೂನಿನ್ವಯ ಕಲ್ಲು ಹೊಡೆದು ಕೊಲ್ಲುವ ಸುದ್ದಿಯೊಂದು, ಕಾಬೂಲ್ ಪಟ್ಟಣದಿಂದ ಬಂದಾಗ ಗಾಂಧಿ ಅದನ್ನು ಖಂಡಿಸಿದರು.

ಆದರೆ ಇದಕ್ಕೆ ಮೌಲಾನಾ ಜಫರ್ ಅಲಿ ಖಾನ್ ಎಂಬುವವರು, ಗಾಂಧಿ ಅನ್ಯರ ಧರ್ಮದ ವಿಷಯದಲ್ಲಿ ತಲೆ ಹಾಕದಿರುವುದು ಲೇಸೆಂದು ಪ್ರತಿಕ್ರಿಯಿಸಿದಾಗ, ಗಾಂಧಿ ಬೆಂಬಲಕ್ಕೆ ಅಜ್ಜಲ್ ಖಾನ್, ಅಜಾದ್, ಅನ್ಸಾರಿ ಮತ್ತು ಅಬ್ದುಲ್ ಗಫಾರ್ ಖಾನ್‌ರಂತಹ ಬೆರಳೆಣಿಕೆಯ ಮುಸ್ಲಿಮರ ಹೊರತಾಗಿ ಇನ್ನಾರೂ ನಿರ್ಣಾಯಕವೆನಿಸಿತು. ಈ ಒಂದು ಸಣ್ಣ ಗುಂಪಿನ ಹೊರತಾಗಿ ಬಹುತೇಕ ಮುಸ್ಲಿಂ ಪರಿಸ್ಥಿತಿ ಸಮುದಾಯ ಗಾಂಧಿ, ಹಿಂದೂಗಳ ನಾಯಕ ಎಂದೇ ಭಾವಿಸತೊಡಗಿತು. ಅಸಹಾಯಕರಾದ ಗಾಂಧಿ ತಾವು ಸೆರೆಮನೆಯಿಂದ ಬಿಡುಗಡೆಯಾದಾಗಲೇ ಯೋಚಿಸಿದ್ದಂತೆ ಸ್ವಲ್ಪ ಕಾಲ ರಾಜಕೀಯದಿಂದ ದೂರವಿದ್ದು, ಖಾದಿ ಪ್ರಚಾರ ಮತ್ತು ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ರಮಗಳಲ್ಲಿ ತೊಡಗಿಕೊಳ್ಳಲು ನಿಶ್ಚಯಿಸಿದರು. ಜೊತೆಗೆ ಅವರ ಬರವಣಿಗೆಯ ಹಲವು ಯೋಜನೆಗಳೂ ಹಾಗೇ ಬಾಕಿ ಇದ್ದವು. ಇದನ್ನು ಮುಂದೆ ತಿಳಿಸುವಂತೆ, 1925 ರ ಡಿಸೆಂಬರ್‌ನಲ್ಲಿ ಕಾನ್ಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಕಟಿಸಿಯೂಬಿಟ್ಟರು.

ರಾಜಕೀಯದಿಂದ ಈ ಬಿಡುವು ಪಡೆಯುವ ಮುನ್ನ ಅವರು ಎರಡು ಮುಖ್ಯ ರಾಜಕೀಯ ಘಟನೆಗಳಲ್ಲಿ ಭಾಗವಹಿಸಿದ್ದರು ಎಂಬುದನ್ನೂ ಇಲ್ಲಿ ದಾಖಲಿಸಬೇಕು. ಒಂದು 1924ರ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ಆಯೋಜಿಸಲಾಗಿದ್ದ ವಾರ್ಷಿಕ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಬೇಕಾಗಿ ಬಂದದ್ದು. ತಾವೀಗ ಕಾಂಗ್ರೆಸ್ಸಿನ ಸರ್ವ ಸಮ್ಮತ ನಾಯಕರಲ್ಲವಾದ್ದರಿಂದ ತಮಗೆ ಬದಲಾಗಿ ಸರೋಜಿನಿ ನಾಯ್ಡು ಅವರನ್ನು ಅಧ್ಯಕ್ಷತೆಗೆ ಆಯ್ಕೆ ಮಾಡಬೇಕೆಂದು ಗಾಂಧಿ ಕೋರಿಕೊಂಡರೂ, ಅವರು ತಮ್ಮೆಲ್ಲರಿಗಿಂತ ಬಹುದೊಡ್ಡ ಜನನಾಯಕನೆಂದು ಅರಿತಿದ್ದ ಬದಲಾವಣೆ ಪರ ಗುಂಪಿನ ನಾಯಕರೂ ಸೇರಿದಂತೆ ಎಲ್ಲರೂ, ಅವರನ್ನು ಅಧಿವೇಶನದ ಅಧ್ಯಕ್ಷತೆಗೆ

ಸರ್ವಾನುಮತದಿಂದ ಆರಿಸಿದ್ದರು. ಗಾಂಧಿ ಕಾಂಗ್ರೆಸ್‌ನಿಂದ ದೂರವಾಗುತ್ತಿದ್ದಾರೆಂಬ ಆತಂಕದಿಂದ ಅವರನ್ನು ಮತ್ತೆ ಪಕ್ಷದತ್ತ ಆಕರ್ಷಿಸುವ ಪ್ರಯತ್ನ ಇದಾಗಿತ್ತು. ತಮ್ಮ ಅಧ್ಯಕ್ಷ ಭಾಷಣದಲ್ಲಿ ಗಾಂಧಿ, ಹಿಂದೂ–ಮುಸ್ಲಿಮರ ನಡುವೆ ಹೆಚ್ಚುತ್ತಿರುವ ಬಿಗುವು ಮತ್ತು ಕಾಂಗ್ರೆಸ್ಸಿಗರಲ್ಲೇ ಹೆಚ್ಚುತ್ತಿರುವ ಈ ಬಗೆಗಿನ ಔದಾಸೀನ್ಯದ ಬಗ್ಗೆ ತಮ್ಮ ಅಸಮಾಧಾನ–ಆತಂಕಗಳನ್ನು ವ್ಯಕ್ತಪಡಿಸುತ್ತಾ, ಚರಕಾದ ಪ್ರತಿಯೊಂದು ಸುತ್ತೂ ನಮ್ಮನ್ನು ಸ್ವರಾಜ್ಯದ ಹತ್ತಿರಕ್ಕೆ ಕೊಂಡೊಯ್ಯುವುದೆಂಬುದನ್ನು ಅರ್ಥ ಮಾಡಿಕೊಳ್ಳಬೇಕೆಂದು ಕಾಂಗ್ರೆಸ್ಸಿಗರನ್ನು ಕೋರಿದರು.

## ವೈಕಂ ಸತ್ಯಾಗ್ರಹ–ನಾರಾಯಣ ಗುರುಗಳ ಭೇಟಿ

ಈ ನಂತರ ಗಾಂಧಿ ಭಾಗವಹಿಸಿದ ಇನ್ನೊಂದು ಮುಖ್ಯ ಘಟನೆ ಎಂದರೆ ತಿರುವಾಂಕೂರು ಸಂಸ್ಥಾನದ ವೈಕಂಗೆ ಭೇಟಿ ನೀಡಿ ಅಲ್ಲಿ ನಡೆದಿದ್ದ ಜಾತಿ ಪದ್ಧತಿ ವಿರುದ್ಧವಾದ ಸತ್ಯಾಗ್ರಹದ ಭಾಗವಾಗಿ ನಾರಾಯಣ ಗುರುಗಳನ್ನು ಭೇಟಿ ಮಾಡಿದ್ದು. ಇದು ಈ ಹಿಂದೆ ವೈಕಂನಿಂದ ಬಂದು ತಮ್ಮನ್ನು ಭೇಟಿ ಮಾಡಿದ್ದ ನಿಯೋಗಕ್ಕೆ ನೀಡಿದ್ದ ಆಶ್ವಾಸನೆಯನ್ನು ಈಡೇರಿಸುವ ಪ್ರಯತ್ನವಾಗಿತ್ತು. 1925ರ ಫೆಬ್ರುವರಿಯಲ್ಲಿ ತಿರುವಾಂಕೂರು ಶಾಸನ ಸಭೆ, ವೈಕಂನ ದೇವಾಲಯದತ್ತ ಹೋಗುವ ನಾಲ್ಕೂ ದಿಕ್ಕುಗಳ ರಸ್ತೆಗಳಲ್ಲಿ ಅಸ್ಪೃಶ್ಯರ ಪ್ರವೇಶವನ್ನು ನಿಷೇಧಿಸುವ ನಿರ್ಣಯವನ್ನು ಅಲ್ಪಮತದಿಂದ ಅಂಗೀಕರಿಸಿ ಅಲ್ಲಿ ನಡೆದಿದ್ದ ಸತ್ಯಾಗ್ರಹಕ್ಕೆ ಆಘಾತ ನೀಡಿತ್ತು. ಈಗ ಈ ಸತ್ಯಾಗ್ರಹದ ನೇತೃತ್ವ ವಹಿಸಿ ವೈಕಂ ವೀರ ಎಂದು ಪ್ರಸಿದ್ಧಿ ಪಡೆದಿದ್ದ ರಾಮಸ್ವಾಮಿ ಎಂಬುವವರು ಕೂಡಲೇ ಗಾಂಧಿಯವರನ್ನು ಸಂಪರ್ಕಿಸಿ ಅವರು ಅಲ್ಲಿಗೆ ತಡ ಮಾಡದೆ ಬರುವಂತೆ ಕೋರಿತು.

1925ರ ಮಾರ್ಚ್ ತಿಂಗಳಲ್ಲಿ ವೈಕಂಗೆ ಹೋದ ಗಾಂಧಿ ಅಲ್ಲಿ ಕಂಡ ದೃಶ್ಯದಿಂದ ಬೆರಗಾದರು. ಪ್ರತಿಭಟನಾಕಾರರು ನಿರ್ಬಂಧಿತ ರಸ್ತೆಗಳ ಪ್ರವೇಶ ಭಾಗಗಳಲ್ಲಿ ಕೂತು, ಕೆಲವರು ಚರಕಾಗಳಲ್ಲಿ ನೂಲುತ್ತಿದ್ದರೆ, ಇನ್ನು ಕೆಲವರು ಸಾಮೂಹಿಕ ಭಜನೆಗಳನ್ನು ಹಾಡುತ್ತಿದ್ದರು. ಗಾಂಧಿ ಮೊದಲು ಸತ್ಯಾಗ್ರಹಿಗಳಿಗೆ ಸತ್ಯಾಗ್ರಹದ ಪ್ರಾಥಮಿಕ ಪಾಠಗಳನ್ನು ಹೇಳಿದರು. ಎದುರು ಪಾಳೆಯದವರ ಜಾಗದಲ್ಲಿ ನಿಂತು ಅವರ ಮನೋಲಹರಿಯನ್ನು ಅರ್ಥ ಮಾಡಿಕೊಂಡರೆ, ಅರ್ಧ ಸಮಸ್ಯೆ ಪರಿಹಾರವಾಗುವುದೆಂದು ತಿಳಿಸಿದರು. ಇದಕ್ಕೆ ಸಮಸ್ಯೆಯ ರಾಜಕೀಯ ಆಯಾಮವನ್ನು ಸ್ವಲ್ಪ ಕಾಲ ಮರೆತು ಮೂರನೆಯವರಾಗಿ ಅದನ್ನು ಪರಿಶೀಲಿಸಬೇಕೆಂದು ಸೂಚಿಸಿದರು. ಇದರ ಪ್ರಾತ್ಯಕ್ಷಿಕೆಯಾಗಿ ಅವರು ಈ ಸಮಸ್ಯೆಗೆ ಕಾರಣರಾಗಿದ್ದ ದೇವಾಲಯದ ಉಸ್ತುವಾರಿ ವಹಿಸಿದ್ದ ನಂಬೂದರಿ ಬ್ರಾಹ್ಮಣರ ತಂಡವೊಂದರೊಡನೆ ಮಾತುಕತೆ ಆರಂಭಿಸಿದರು.

ಜಾತಿಯ ಹೆಸರಿನಲ್ಲಿ ಇಂತಹ ಕಠಿಣ ನಿಯಮವೇಕೆ ಎಂದು ಗಾಂಧಿ ನಂಬೂದರಿಗಳನ್ನು ಕೇಳಿದಾಗ, ಅವರು ಇದು ಕೆಳ ಜಾತಿಗಳ ಕರ್ಮಫಲ ಎಂದು ಉತ್ತರಿಸಿದರು. ಇದಕ್ಕೆ ಗಾಂಧಿ ಈ ಆಚರಣೆ ಜಲಿಯನ್‌ವಾಲಾಬಾಗ್‌ನಲ್ಲಿ ಜನರಲ್ ಡಯರ್ ನಡೆಸಿದ ಕೃತ್ಯಕ್ಕಿಂತ ಕ್ರೂರವಾಗಿದೆ ಎಂದು ಅವರನ್ನು ಎಚ್ಚರಿಸಿದಾಗ, ಅವರು ಈ ಆಚರಣೆ ಆದಿ ಶಂಕರಾಚಾರ್ಯರು ಆರಂಭಿಸಿದ್ದಾಗಿದ್ದು, ಇದು ತಮಗೆ ಪವಿತ್ರವಾಗಿದ್ದು, ಬಿಡಲಾಗದು ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು. ಆಗ ಗಾಂಧಿ ಇದು ಪುರಾತನ ಧಾರ್ಮಿಕ ಆಚರಣೆಯೇ ಆಗಿದ್ದರೆ ದೇಶದ ಎಲ್ಲ ಕಡೆ ಏಕಿಲ್ಲ ಎಂದು ಪ್ರಶ್ನಿಸಿದಾಗ, ಅವರು ಕ್ಷಣವೂ ಕಣ್ಣು ಮಿಟುಕಿಸದೆ, 'ಎಲ್ಲ ಕಡೆಯೂ ಅಸ್ಪೃಶ್ಯತೆಯ

ಆಚರಣೆ ಇದೆಯಲ್ಲ? ಇಲ್ಲಿ ಸ್ವಲ್ಪ ಹೆಚ್ಚು ಕಟ್ಟುನಿಟ್ಟಾಗಿದೆ ಅಷ್ಟೆ'! ಎಂದು ಉತ್ತರಿಸಿದರು. ಕೊನೆಗೆ ಗಾಂಧಿ, ಪ್ರಕರಣ ನ್ಯಾಯಾಲಯಕ್ಕೆ ಹೋಗಿ ತೀರ್ಪು ನಿಮ್ಮ ವಿರುದ್ಧ ಬಂದರೆ ಏನು ಮಾಡುವಿರಿ ಎಂದು ಪ್ರಶ್ನಿಸಿದಾಗ, ಅವರ ನಾಯಕ 'ನಾವು ದೇವಾಲಯವನ್ನೇ ಬಿಟ್ಟು ಹೋಗುತ್ತೇವೆ' ಎಂದಾಗ ಗಾಂಧಿ ಅಪ್ರತಿಭರಾದರು.

ನಂತರ ಗಾಂಧಿ ನಾರಾಯಣ ಗುರುಗಳನ್ನು ಭೇಟಿ ಮಾಡಿ, ಧರ್ಮ ಕುರಿತ ಅಭಿಪ್ರಾಯಗಳ ವಿನಿಮಯ ಮಾಡಿಕೊಂಡರು. 'ಮಾವಿನ ಮರದ ವಿವಿಧ ಆಕಾರಗಳ ಎಲೆಗಳಂತೆ ಜಗತ್ತಿನಲ್ಲಿ ಎಷ್ಟು ಜನರೋ ಅಷ್ಟು ಧರ್ಮಗಳು, ಅವು ಒಂದೇ ಮರದ ಎಲೆಗಳಂತೆ ಸಾಮರಸ್ಯದಿಂದ ಬಾಳಬೇಕು' ಎಂದರೆ, ನಾರಾಯಣ ಗುರುಗಳು. 'ಎಲೆಗಳು ಭಿನ್ನವಾಗಿದ್ದರೂ ಅವುಗಳ ರುಚಿ ಒಂದೇ ಇರುವಂತೆ ಮನುಷ್ಯರು ಆಕಾರದಲ್ಲಿ ಬಣ್ಣದಲ್ಲಿ, ನಂಬಿಕೆಗಳಲ್ಲಿ ಬೇರೆಯಾಗಿ ಕಂಡರೂ ಅವರೆಲ್ಲ ಒಂದೇ ಎಂಬುದರ ಅರಿವೇ ಮಾನವತೆ ಕುರಿತ ನಮ್ಮ 'ಒಂದೇ ಜಾತಿ, ಒಂದೇ ಕುಲ, ಒಂದೇ ದೈವ' ಎಂಬ ಸಂದೇಶದ ಸಾರವಾಗಿದೆ' ಎಂದು ವಿವರಿಸಿದರು.

ಗುರುಗಳ ಸನಿಹ ಮತ್ತು ಮಾತುಗಳಿಂದ ಪ್ರಭಾವಿತರಾದ ಗಾಂಧಿ, ತಿರುವನಂತಪುರದಲ್ಲಿ ಆಯೋಜಿಸಲಾದ ಸಾರ್ವಜನಿಕ ಸಮಾರಂಭವೊಂದರಲ್ಲಿ ಮಾತನಾಡಿ 'ನಾರಾಯಣ ಗುರುಗಳಂತಹ ಮಹಾತ್ಮರಿಗೆ ರಸ್ತೆಗಳನ್ನು ನಿಷೇಧಿಸಿರುವ ಆಚರಣೆ, ಧರ್ಮ, ಮಾನವತೆ ಮತ್ತು ರಾಷ್ಟ್ರೀಯತೆ ಕುರಿತ ತಮ್ಮ ಭಾವನೆಗಳನ್ನೇ ಅಲ್ಲಾಡಿಸಿದೆ ಎನ್ನುತ್ತಾ, ಸತ್ಯಾಗ್ರಹಿಗಳು ಅಹಿಂಸೆಯ ಸಂಯಮದ ಹಾದಿ ಹಿಡಿದರೆ ಬಹುಸಂಖ್ಯಾತ ಬ್ರಾಹ್ಮಣರು ಮತ್ತು ಅಸ್ಪೃಶ್ಯರ ನೈತಿಕ ಬಲ ಅಲ್ಪಸಂಖ್ಯಾತ ಬ್ರಾಹ್ಮಣರ ಸ್ಥೈರ್ಯವನ್ನು ಕೆಡಿಸುವುದು ಖಂಡಿತ' ಎಂದು ಹೇಳಿದರು.

ನಂತರ ಸಂಸ್ಥಾನದ ಮಹಾರಾಣಿಯನ್ನು ಭೇಟಿ ಮಾಡಿದ ಗಾಂಧಿ ಈ ಅಸಂಬದ್ಧ ನಿಯಮವನ್ನು ರದ್ದುಪಡಿಸುವಂತೆ ಮನವಿ ಮಾಡಿದರು. ಕೆಲ ತಿಂಗಳುಗಳ ನಂತರ ನಾಲ್ಕು ರಸ್ತೆಗಳಲ್ಲಿ ಒಂದು ರಸ್ತೆಯನ್ನು ಬ್ರಾಹ್ಮಣರಿಗೆ ಬಿಟ್ಟುಕೊಟ್ಟು ಇತರ ಮೂರು ರಸ್ತೆಗಳನ್ನು ಎಲ್ಲರಿಗೂ ಮುಕ್ತಗೊಳಿಸಲಾಯಿತು. ಆದರೆ ದೇವಾಲಯ ಪ್ರವೇಶ ಮಾತ್ರ ಎಲ್ಲರಿಗೂ ಮುಕ್ತವಾಗಲಿಲ್ಲ. ಇದು ಗಾಂಧಿಯವರ ಮಾರ್ಗ ನಿರ್ಣಾಯಕವಾಗದಷ್ಟು ಮೃದು ಮತ್ತು ಹೊಂದಾಣಿಕೆಯದು ಎಂಬ ಟೀಕೆಗಳಿಗೂ ಕಾರಣವಾಗಿದ್ದು ನಿಜ. ಆದರೆ ಗಾಂಧಿ ಇದಕ್ಕೆ 'ಯಂಗ್ ಇಂಡಿಯಾ'ದಲ್ಲಿ, ತಮ್ಮದು 'ಸದ್ಯಕ್ಕೆ ಒಂದು ಹೆಜ್ಜೆ ಸಾಕು' ಎಂಬ ನೀತಿಯ ಪಯಣ ಎಂದು ಉತ್ತರಿಸಿದ್ದು ಬೇರೆ ವಿಷಯ.

## ವಿದೇಶಗಳಲ್ಲಿ ಹೆಚ್ಚಿದ ವರ್ಚಸ್ಸು–ಮೀರಾ ಆಗಮನ

ಗಾಂಧಿ ಈ ಅವಧಿಯಲ್ಲಿ ಸ್ವದೇಶ ಬಾಂಧವರಿಂದ ಸಾಕಷ್ಟು ಭಿನ್ನಮತವನ್ನು ಎದುರಿಸಿದರಾದರೂ, ಭಾರತದ ಹೊರಗೆ ಅವರ ವರ್ಚಸ್ಸು ಬೆಳೆಯತೊಡಗಿತ್ತು. ಇದರ ಎರಡು ಉದಾಹರಣೆಗಳೆಂದರೆ, ಅಮೆರಿಕಾದ ವಿಸ್ಕಾನ್ಸಿನ್ ಮತ್ತು ಅಯೋವಾ ವಿಶ್ವವಿದ್ಯಾಲಯಗಳ ಸಮಾಜಶಾಸ್ತ್ರಜ್ಞರು ಅಂದಿನ ಭಾರತದ ಬಗ್ಗೆ ವಿಶೇಷ ಅಧ್ಯಯನಗಳನ್ನು ಕೈಗೊಂಡದ್ದು ಮತ್ತು ನೊಬೆಲ್ ಪ್ರಶಸ್ತಿ ಪುರಸ್ಕೃತ ಫ್ರೆಂಚ್ ಲೇಖಕ ರೊಮೈನ್ ರೋಲಾಂಡ್, ಗಾಂಧಿಯವರ ಬಗ್ಗೆ ಒಂದು ಗಮನಾರ್ಹ ಪುಸ್ತಕ ಬರೆದದ್ದು. ವಿಸ್ಕಾನ್ಸಿನ್ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ಪ್ರಾಧ್ಯಾಪಕರಾಗಿದ್ದ ರಾಸ್, 1924ರ ಕೊನೆಯಲ್ಲಿ ಭಾರತಕ್ಕೆ ಬಂದು, ಗಾಂಧಿ ಸೇರಿದಂತೆ ಸಮಾಜದ ವಿವಿಧ ವರ್ಗಗಳ ಜನರನ್ನು ಮಾತಾಡಿಸಿ, ಗಾಂಧಿಯವರ ಎಲ್ಲ ಸದುದ್ದೇಶಗಳ ಹೊರತಾಗಿಯೂ, ಭಾರತದ ಪ್ರತಿಷ್ಠಿತ ಮುಸ್ಲಿಂ ವರ್ಗ ತಾವು ಒಂದು ಕಾಲದಲ್ಲಿ

ಈ ದೇಶವನ್ನು ಆಳಿದವರು ಭಾವನೆಯಿಂದ ಇನ್ನೂ ಹೊರಬರದಿರುವುದರಿಂದ, ಅವರ ಕನಸು ನನಸಾಗುವುದು ಕಷ್ಟ ಎಂದು ಅಭಿಪ್ರಾಯಪಟ್ಟರೆ, ಅಯೋವಾದ ವಿದ್ವಾಂಸರು ಗಾಂಧಿಯನ್ನು 'ಅಧ್ಯಾತ್ಮಿಕ ಪ್ರತಿರೋಧದ ಪ್ರವರ್ತಕ' ಎಂದು ಗುರುತಿಸಿ, ಲೆನಿನ್‌ರಂತ ಇವರೂ ವರ್ತಮಾನದ ಜಗತ್ತಿನ ಮಹಾ ಜನನಾಯಕರು ಎಂದು ಬಣ್ಣಿಸಿದರು. ಇದೇ ಹೊತ್ತಿನಲ್ಲಿ ಚಿಕಾಗೋದಲ್ಲಿ ಗಾಂಧಿಯವರ ಸಂಕ್ಷಿಪ್ತ ಜೀವನಚರಿತ್ರೆಯೊಂದು ಪ್ರಕಾಶಿತವಾಗಿತ್ತು. ಜೊತೆಗೆ ಕ್ರಿಶ್ಚಿಯನ್ ಧರ್ಮಗುರು ಜಾನ್ ಹೇನ್ಸ್ ಹೋಮ್ ಎಂಬ ಎಂಬುವವರ ಪ್ರಸ್ತಾವನೆಯೊಂದಿಗೆ 'ಹಿಂದ್ ಸ್ವರಾಜ್' ಕೂಡ ಪ್ರಕಟವಾಗಿ, ಗಾಂಧಿ ಅಮೇರಿಕಾದ ಸಾರ್ವಜನಿಕರ ಗಮನ ಸೆಳೆದಿದ್ದರು.

ಇನ್ನು ಇದೇ ಹೋಮ್ಸ್‌ರ  ಗೆಳೆಯರಾಗಿದ್ದ ರೊಮೈನ್ ರೊಲ್ಯಾಂಡ್, ಗಾಂಧಿ 1922ರಲ್ಲಿ ಸೆರೆಮನೆ ಸೇರುವವರೆಗಿನ ಬದುಕಿನ ಬಗ್ಗೆ ಸರ್ವ ಮಾಹಿತಿಯನ್ನೂ ಕಲಿ ಹಾಕಿ, ಕವಿ ರವೀಂದ್ರನಾಥ ಟ್ಯಾಗೋರ್ ಮತ್ತು ಅನುಭಾವಿ ದಿಲೀಪ್ ಕುಮಾರ್ ರಾಯ್ ಅವರೊಡನೆ ಮಾತಾಡಿ ಬರೆದ 'ಮಹಾತ್ಮ ಗಾಂಧಿ: ವಿಶ್ವಾತ್ಮಕ ಅಸ್ತಿತ್ವದಲ್ಲಿ ಒಂದಾದ ಮನುಷ್ಯ' ಎಂಬ ಪುಸ್ತಕದ ಮೂಲಕ ಇಡೀ ಜಗತ್ತು ಗಾಂಧಿಯತ್ತ ನೋಡುವಂತೆ ಮಾಡಿದ್ದರು. ಗಾಂಧಿ ಸೆರೆಮನೆ ಸೇರುವ ಮುನ್ನ ಎದುರಿಸಿದ 'ಮಹಾ ವಿಚಾರಣೆ'ಯೊಂದಿಗೆ ಮುಕ್ತಾಯವಾಗುವ ಈ ಪುಸ್ತಕ, 'ಕಳೆದ ಎರಡು ಸಾವಿರ ವರ್ಷಗಳ ಧಾರ್ಮಿಕ ಪರಂಪರೆಯ ಚೈತನ್ಯವನ್ನು ಮಾನವ ರಾಜಕಾರಣದೊಳಕ್ಕೆ ತುಂಬಿರುವ ಗಾಂಧಿ ಗೆಲ್ಲುವರು, ಇಲ್ಲವೇ ಬುದ್ಧ, ಏಸುಗಳ ಆಗಮನಕ್ಕೆ ಆ ಮುಂಚಿನ ಶತಮಾನಗಳಲ್ಲಿ ಜಾಗೃತವಾಗತೊಡಗಿದ್ದಂತಹ ನೈತಿಕ ಪ್ರಜ್ಞೆಯ ಸಾಕಾರ ಸಂಕೇತವಾಗುವರು' ಎಂಬರ್ಥದ ಸಾಲುಗಳೊಂದಿಗೆ ಮುಗಿಯುತ್ತದೆ.

ಆದರ ಈ ಪುಸ್ತಕಕ್ಕೆ ಪೆರುವಿನ ಮಾರ್ಕ್ಸ್‌ವಾದಿ ಚಿಂತಕ ಜೋಸ್ ಕಾರ್ಲೋಸ್ ಮೆರಿಯಾತರ್ಗಿ ಒಂದು ಪ್ರತಿಕ್ರಿಯೆ ಬರೆದು, ಗಾಂಧಿಯನ್ನು ಸಮಕಾಲೀನ ಜಗತ್ತಿನ ಅಪೂರ್ವ ವ್ಯಕ್ತಿಗಳಲ್ಲಿ ಒಬ್ಬರು ಎಂದು ಗುರುತಿಸಿದರಾದರೂ, ಅವರ ರಾಜಕಾರಣವನ್ನು ಒಪ್ಪಲು ನಿರಾಕರಿಸಿದರು. ಅಹಿಂಸೆ ಮತ್ತು ಯಂತ್ರ ನಾಗರೀಕತೆ ಕುರಿತ ಗಾಂಧಿಯವರ ವಿಮರ್ಶೆಯನ್ನು ಸಾರಾಸಗಟಾಗಿ ಒಪ್ಪಲಾಗದು ಎಂದಿದ್ದ ಈ ಚಿಂತಕ, ಅಸಹಕಾರ ಚಳುವಳಿಯನ್ನು ಚೌರಿಚೌರ ಘಟನೆಯ ನಂತರ ಹಿಂತೆಗೆದುಕೊಂಡದ್ದು ತಪ್ಪು ಎಂದು ಅಭಿಪ್ರಾಯಪಟ್ಟಿದ್ದರು. ಕ್ರಾಂತಿಯನ್ನು, ಉಪವಾಸ ಮತ್ತು ಅಹಿಂಸೆಗಳಿಂದ ಉಂಟು ಮಾಡಲಾಗದು; ಹಿಂಸೆಯನ್ನು ಅನುಭವಿಸಿ ಮತ್ತು ಬಳಸಿ ಕ್ರಾಂತಿಯನ್ನುಂಟು ಮಾಡಬಹುದು. ಈ ದೃಷ್ಟಿಯಿಂದ ಗಾಂಧಿಯವರ ಆದರ್ಶವಾದ ಮತ್ತು ಲೆನಿನ್‌ರ ವ್ಯಾವಹಾರಿಕತೆಗಳ ನಡುವಣ ಆಯ್ಕೆಯಲ್ಲಿ, ತನ್ನ ಆಯ್ಕೆ ಲೆನಿನ್ ಎಂದಿದ್ದರು ಈ ಪೆರುವಿನ ಲೇಖಕ–ಚಿಂತಕ.

ಇದೇ ವೇಳೆಯಲ್ಲಿ ರೋಲ್ಯಾಂಡರ ಪುಸ್ತಕವನ್ನು ಓದಿ, ಅದರ ಲೇಖಕರೊಂದಿಗೆ ಸಮಾಲೋಚಿಸಿದ ಪರಿಣಾಮವಾಗಿ, ಮುಂದೆ ಗಾಂಧಿಯವರಿಂದ ಮೀರಾ ಎಂದು ಹೊಸ ಹೆಸರು ಪಡೆದ ಶ್ರೀಮತಿ ಮೆಡಲೀನ್ ಸ್ಲೇಡ್ ಎಂಬ ಇಂಗ್ಲಿಷ್ ಮಹಿಳೆ, 1925 ನವೆಂಬರ್‌ನಲ್ಲಿ ಭಾರತಕ್ಕೆ ಬಂದು ಸಬರಮತಿ ಆಶ್ರಮದಲ್ಲಿ ಕಾರ್ಯಕರ್ತೆಯಾಗಿ ಸೇರಿಕೊಂಡಿದ್ದು.

**ಆಕರ** : ಗಾಂಧಿ ಕಥನ

– ಡಿ.ಎಸ್.ನಾಗಭೂಷಣ್

# 3. ಬದುಕಿನ ಹಾಡು

– ಕೆ.ಎಸ್. ನರಸಿಂಹಸ್ವಾಮಿ

ಮುಟ್ಟಿದರೆ ಮಾಸುವುದು ಚೆಲುವು, ಮಾತಾಡಿದರೆ
ಬಾಡುವುವು ಭಾವಗಳು ಬದುಕಿನಲ್ಲಿ,
ಸುಟ್ಟ ಗಾಯಗಳನ್ನು ನೆನೆಯದಿರು, ಓ ಮನವೆ
ತಂಗಾಳಿ ಬೀಸುತಿದೆ ಬಿಸಿಲಿನೊಳಗೆ

ಹಿಡಿದು ನಿಲ್ಲಿಸಬೇಡ ಕಲ್ಪನೆಯ ಸರಣಿಯನು
ಬೆಟ್ಟಕ್ಕೆ ಮೆಟ್ಟಲಿವೆ, ಹತ್ತಿ ಹೋಗು
ದುಡುಕದಿರು, ದೂರವಿಡು ಕೋಪತಾಪಗಳನ್ನು
ಬಲಮಗ್ಗುಲಿಂದೇಳು ಹಾಸಿನೊಳಗೆ

ಈಜುಬಾರದ ನಿನಗೆ ಹೊಳೆ ದೂರ; ದಡದಲ್ಲೆ
ಮಿಂದು ಬರುವುದು ಒಳಿತು,
ಬೀದಿಯಂಚಿನಲ್ಲಿ ನಡೆ, ಹೆಜ್ಜೆ ತಪ್ಪಿದರೆ
ಮುಗಿಯುವುದಲ್ಲೆ ಬದುಕು.

ಓಡದಿರು, ಎದುರಾದ ಸೇತುವೆಯ ದಾಟಿಬಿಡು
ಮಡದಿ ಜೊತೆಯಲಿ ಇರಲಿ ಸಂತಸದಲಿ;
ಹೆಣ್ಣನ್ನು ಗೌರವಿಸು, ನಿನ್ನ ತಾಯವಳು ಕಣೊ
ಮಕ್ಕಳನು ಎತ್ತಿಕೊ ನಿನ್ನ ಭುಜಕೆ.

ಹೂ ತೋಟದಲ್ಲಿ ಹೂವನ್ನು ಬಿಡಿಸಿಕೊ; ತಂದು
ದೇವರಿಗೆ, ನಿನ್ನ ಮಡದಿಗೆ ಒಪ್ಪಿಸು
ಧಾರಾಳವಾಗಿ ಮಾತಾಡು ನಗೆಯನ್ನು ಬೆರಸಿ
ಜತೆಯಲ್ಲಿ ಗೆದ್ದವರ ಬೆನ್ನ ತಟ್ಟು.

ಕನಸಿನಲಿ ನೀನು ಕೇಳಿದ ಹಾಡನು ನೆನೆದು
ನಿನ್ನ ಬದುಕಿನಲೊಂದು ಹಾಡ ಕಟ್ಟು;
ಇನ್ನೊಂದು ಜೀವ ನೋಯದ ಹಾಗೆ ಬದುಕುವುದು
ಎಲ್ಲ ಸಾಮಾನ್ಯರಿಗೂ ಸಾಧ್ಯವಲ್ಲ

ಹಿರಿಯರಿಗೆ ನಮಿಸಿ ಮೆಲ್ಲಮೆಲ್ಲವೆ ಮುಂದೆ ಹೋಗು;
ಮುಳ್ಳುಬೇಲಿಯ ಮೇಲೆ ಹರಡಿರುವ
ಬಟ್ಟೆಯನು ಮೆಲ್ಲಮೆಲ್ಲನೆ ಬಿಡಿಸಿಕೊ, ಮುಳ್ಳು
ತಗುಲದಂತೆ, ಯೋಚಿಸುತ ಹೆಜ್ಜೆಯಿಡು

ಗತಿಯಲ್ಲಿ ಧೃತಿಯರಲಿ, ಶ್ರುತಿಗೆ ಹೊಂದಿಕೋ
ಹಾಡು ನೀ ಬಲ್ಲ ಹಲವಾರು ಹಾಡುಗಳನು;
ದಾರಿ ತಪ್ಪಿದ ಮಗನ ಬೇಗ ದಾರಿಗೆ ತಂದು
ಅವನ ಕೈಯಲ್ಲಿರಿಸು ಬಾವುಟವನು.

ನಿನ್ನ ಮನೆ ಜಗುಲಿಯಾಚೆಗು ಕೂಡ ಜಗವಿಹುದು
ನಿನ್ನ ಮಾತೇ ಸತ್ಯವೆನ್ನಬೇಡ
ಬೆಳ್ದಿಂಗಳಲಿ ನಿಂತು ಆಗಸಕೆ ಕೈ ಮುಗಿದು
ನೆಮ್ಮದಿಯ ಕಾಣುವುದು ಸುಲಭವಲ್ಲ

ನಿನ್ನ ಅಂಗಿಯಲಿ ತೂತಿಹುದು, ಜೇಬಿನ ತುಂಬ
ಕಲ್ಲುಸಕ್ಕರೆಯಿಹುದು, ಮಂದಿಗೆ ಕೊಡು;
ಸೂರ್ಯ ಚಂದ್ರರ ಕಡೆಗೆ ಬುದ್ಧಿ ಹಾರಾಡುತಿದೆ;
ಏಣಿಯನು ನಿಲಿಸು ಆಗಸದ ಕಡೆಗೆ

ನಿನ್ನ ದಾಹಕ್ಕೆ ಉಪಶಮನವನು ಹುಡುಕುತ್ತ
ಮರುಭೂಮಿಯನು ದಾಟಿ ಮುಂದೆ ಹೋಗು;
ಕಡಲಲ್ಲಿ ಮೀನುಂಟು; ಒಡಲಿಲ್ಲ ಹಸಿವುಂಟು
ಬಿಸಿಲುಗುದುರೆಯ ಮೇಲೆ ಬರಲಿ ಕವಿತೆ.

ಹೆತ್ತವರ ನೆನೆಯುತ್ತ ಹೆಜ್ಜೆಯಿಡು ಮುಂದಕ್ಕೆ
ಕಣ್ಣೀರಿನಲಿ ದಾರಿ ಹೊಳೆಯುವುದು;
ಪರ್ವತದ ಮೇಲೆ ಬರುವನು ಸೂರ್ಯ ರಥದಲ್ಲಿ
ಸಪ್ತಾಶ್ವಗಳ ಮೇಲೆ ಚಾಟಿ ಬೀಸಿ.

ಇರುಳೆ ಹಗಲಾಗುವುದು ನಕ್ಷತ್ರಮಯ ಬಾನು
ಕರ್ತವ್ಯದೊಲು ಬೆಳಕನೆರೆಯುವಾಗ;
ಚೆಲುವು ಅರಳಿದಾಗ ಒಲವು ಕೊಳಲೂದುತ್ತ
ಶುಭದ ಸುದ್ದಿಯ ನೀಡಿ ಬದುಕೊಲಿವುದು.

**ಆಕರ : ಮಲ್ಲಿಗೆಯ ಮಾಲೆ (ಸಮಗ್ರ ಕವನ ಸಂಕಲನ)**
**ಕೆ.ಎಸ್. ನರಸಿಂಹಸ್ವಾಮಿ**

## ಓದು ಪಠ್ಯ

# 4. ಆಹುತಿ

**ಕೊಡಗಿನ ಗೌರಮ್ಮ**

ನಾನು ಎಂ.ಎ. ಪಾಸಾಗಿದ್ದೆ. ನನ್ನ ತಂದೆತಾಯಿಯವರು ನನಗೆ ಮದುವೆ ಮಾಡಬೇಕೆಂದು ಹೆಣ್ಣು ಹುಡುಕುತ್ತಿದ್ದರು. ಅಂತೂ ಕಡೆಗೆ ಹುಡುಗಿಯೂ ನಿಶ್ಚಯವಾದಳು. ನಮ್ಮ ಮನೆಯಿಂದ ಹನ್ನೆರಡು ಮೈಲಿ ದೂರದಲ್ಲಿದ್ದ ಒಂದು ಹಳ್ಳಿಯಲ್ಲಿ ಅವಳ ಮನೆ. ಅವಳಿಗೂ ತಂದೆ ತಾಯಿ ಇದ್ದರು. ಆದರೆ ಅವರು ಬಹಳ ಬಡವರಂತ. ನನಗೇನೂ ಐಶ್ವರ್ಯವಂತರ ಅಳಿಯನಾಗಬೇಕೆಂದು ಬಹಳ ಆಶೆಯಿತ್ತು. ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರನಾಗಬೇಕೆಂದು ಬಲವಾದ ಇಚ್ಛೆ. ಇಂಗ್ಲೆಂಡಿಗೆ ಹೋಗಬೇಕಾದರೆ ಹಣಬೇಕು, ನನಗಾಗಿ ತುಂಬಾ ಹಣ ಖರ್ಚು ಮಾಡುವಷ್ಟು ಅನುಕೂಲವು ನನ್ನ ತಂದೆಗಿರಲಿಲ್ಲ. ಐಶ್ವರ್ಯವಂತರ ಅಳಿಯನಾದರೆ ನಾನು ಇಂಗ್ಲೆಂಡಿಗೆ ಸುಲಭವಾಗಿ ಹೋಗಬಹುದಾಗಿತ್ತು. ಆದುದರಿಂದ ಆ ಬಡವರ ಹುಡುಗಿಯನ್ನು ಮದುವೆಯಾಗಲು ಮನಸ್ಸಿರಲಿಲ್ಲ.

ಸಾಯಂಕಾಲವಾಗಿತ್ತು. ತಿರುಗಾಡಲು ಹೋಗಿದ್ದವನು ಆಗ ತಾನೆ ಮನಗ ಬಂದಿದ್ದೆ. ನನ್ನ ತಂದೆ ತುಂಬ ಆಚಾರವಂತರು. ಪ್ರತಿದಿನವೂ ತಪ್ಪದೆ ಸಂಧ್ಯಾವಂದನಾದಿಗಳನ್ನು ಮಾಡುತ್ತಿದ್ದರು. ನಾನೂ ಮಾಡಬೇಕೆಂದು ಅವರ ಬಯಕೆ, ತಿರುಗಾಡಲು ಹೋದಲ್ಲಿ ಸ್ನೇಹಿತರೊಡನೆ ಮಾತನಾಡುವ ಸಂಭ್ರಮದಲ್ಲಿ ಸಂಧ್ಯಾವಂದನೆಯ ಸಮಯವಾದುದೂ ನನಗೆ ಗೊತ್ತಾಗಲಿಲ್ಲ. ನಾನು ಮನೆಗೆ ಬಂದಾಗ ತಂದೆಯವರು ಒಳಗೆ ಜಪ ಮಾಡುತ್ತಿದ್ದರು. ನಾನು ಬಟ್ಟೆಯನ್ನು ತೆಗೆದಿರಿಸುವುದಕ್ಕೆ ನನ್ನ ರೂಮಿಗೆ ಹೋದೆ. ನನ್ನ ತಂಗಿ ವಿಜಯ ಅಲ್ಲಿ ಕುಳಿತುಕೊಂಡು ಓದುತ್ತಿದ್ದಳು. ನಾನವಳನ್ನು 'ವಿ' ಎಂದು ಕರೆಯುತ್ತಿದ್ದ. ಯಾವೊತ್ತೂ ಸಂಜೆಯ ಹೊತ್ತಿನಲ್ಲಿ ಅವಳು ದೇವರ ಕೀರ್ತನೆಗಳನ್ನು ಹಾಡುತ್ತಾ ದೇವರ ಮನೆಯಲ್ಲಿರುವುದು ವಾಡಿಕೆ. ಇಂದು ನನ್ನ ರೂಮಿನಲ್ಲಿ ಕುಳಿತಿದ್ದು ಕಂಡು 'ಏನು ಓದುತ್ತಿರುವೆ, ವಿ?' ಎಂದು ಕೇಳಿದ. ಓದುತ್ತಿದ್ದ ಪುಸ್ತಕವನ್ನು ಮೇಜಿನ ಮೇಲೆಸೆದು 'ಓದುತ್ತಲೂ ಇರಲಿಲ್ಲ ಏನೂ ಇಲ್ಲ, ಈ ಹಾಳು ಪುಸ್ತಕದಲ್ಲಿ ಓದುವುದಕ್ಕೇನಿದೆ ?' ಎಂದಳು. 'ಇದೇನು ವಿ ? ನೀನು ಹಾಡುವುದಿಲ್ಲವೇ?' ಎಂದ. 'ಆಗಲೇ ಆಗ್ಹೋಯ್ತು' ಎಂದಳು ಅವಳು. ನಾನು ಕೋಟನ್ನು ಬಿಚ್ಚಿಟ್ಟು ಟೈಯನ್ನು ಬಿಚ್ಚುತ್ತಿದ್ದೆ. ಆಗ ಅವಳು : 'ಅಣ್ಣ ನಿನಗೆ , ಒಪ್ಪಿಗೆಯೇ ?' ಎಂದು ಕೇಳಿದಳು. ನಾನು ಏನು ಒಪ್ಪಿಗೆ' ಎಂದೆ.

ಅವಳು... 'ಏನೂ ಗೊತ್ತೇಯಿಲ್ಲ ಪಾಪ ! ಆ ಹುಡುಗಿಯನ್ನು ಮದುವೆಯಾಗಲು ಒಪ್ಪಿಗೆಯೇ ಎಂದರೆ ಏನು ಎನ್ನುತ್ತಿ' ಎಂದಳು. ನಾನೆಂದೆ : 'ನಾನು ಅವಳನ್ನು ನೋಡಿಯೇ ಇಲ್ಲ. ನಾನು ಏನೆಂದು ಉತ್ತರ ಕೊಡಲಿ ?' ಆಗ ವಿಜಯ ಎಂದಳು : 'ಅಣ್ಣ, ನಾನು ಅವಳನ್ನು ನೋಡಿರುವೆ ಅವಳು ಎಲ್ಲಾ ತರದಲ್ಲೂ ನಿನಗೆ ಯೋಗ್ಯಳಾಗಿದ್ದಾಳೆ. ಓದುಬರಹ ಗೊತ್ತಿದೆ. ನೋಡುವುದಕ್ಕೆ ಅತಿ ಚೆಲುವೆ.' ನಾನಾಗ ಕೇಳಿದ : 'ವರದಕ್ಷಿಣೆ ಎಷ್ಟು ಕೊಡುತ್ತಾರೆ?"

ವಿಜಯ ಹೇಳಿದಳು : 'ಅಣ್ಣ, ಅಪ್ಪನಿಗೆ ವರದಕ್ಷಿಣೆಯನ್ನು ತೆಗೆದುಕೊಳ್ಳಲಿಕ್ಕೆ ಇಷ್ಟವಿಲ್ಲ. ಅವರು ಬಹಳ

ಬಡವರು. ಆದರೆ ಹುಡುಗಿ ರತಿದೇವಿಯಂತ ಇದ್ದಾಳೆ. ಅವರೇ ಐನೂರು ರೂಪಾಯಿ ಕೊಡುವನೆಂದು ಹೇಳಿದ್ದಾರೆ. ಅದನ್ನು ತೆಗೆದು ಕೊಳ್ಳುವುದಕ್ಕೂ ಅಪ್ಪನಿಗೆ ಒಪ್ಪಿಗೆ ಇಲ್ಲ. ನಾನು ಹೇಳಿದ : 'ಐ, ನನಗೆ ಲಂಡನ್ನಿಗೆ ಹೋಗಿ ಲಾ ಕಲಿಯಬೇಕೆಂದು ಇಚ್ಛೆಯಿದೆ. ಅದಕ್ಕಾಗುವ ಖರ್ಚನ್ನು ಕೊಡುವುದಾದರೆ ಮಾತ್ರ ನಾನು ಆ ಹುಡುಗಿಯನ್ನು ಮದುವೆಯಾಗುತ್ತೇನೆ. ಇಲ್ಲದಿದ್ದರೆ ಇಲ್ಲ.' ಆಗ ವಿಜಯ : 'ಅಣ್ಣ, ನೀನು ಎಂ.ಎ., ನಿನ್ನ ಬಾಯಿಂದ ಇಂತಹ ಮಾತು ಹೊರಡಬಹುದೇ ? ನಿನ್ನನ್ನು ನೀನು ಮಾರಿಕೊಳ್ಳಬಯಸುವಿಯೇಕೆ ?' ಎಂದು ಸ್ವಲ್ಪ ಕೋಪದಿಂದಲೇ ಹೇಳಿದಳು. ನಾನು ಉತ್ತರವೀಯಲಿಲ್ಲ. ಕೋಪಿಸಿಕೊಂಡು ಅವಳು ಒಳಗೆ ಹೊರಟುಹೋದಳು.

## 2

ಜಪಮಾಡಿ ಹೊರಗೆ ಬಂದು ಕುಳಿತಿದ್ದೆ. ನಮ್ಮ ತಂದೆಯೂ ಜಪ ತೀರಿಸಿ ಹೊರಗೆ ಬಂದರು. 'ಏನೊ, ನೀನು ವಿಜಯನ ಹತ್ತಿರ ಏನೆಂದ?' ಎಂದು ಕೇಳಿದರು. ನಾನು ಮಾತನಾಡಲಿಲ್ಲ. 'ನೀನು ಮುಂದೆ ಓದಿನ ಖರ್ಚಿಗೆ ಹಣ ಕೊಟ್ಟರ ಮದುವೆಯಾಗುತ್ತೇನೆಂದೆಯಂತೆ. ಅವರು ಬಡವರು. ಆರೇಳು ಜನ ಹೆಣ್ಣು ಮಕ್ಕಳು ಇದ್ದಾರೆ. ಎಲ್ಲಿಂದ ತಾನೇ ಹಣ ತರಬಲ್ಲರು? ನೀನೇನೂ ತಿಳಿಯದ ಚಿಕ್ಕ ಮಗುವಲ್ಲ. ಹುಡುಗಿ ಲಕ್ಷಣವಾಗಿದ್ದಾಳೆ. ನೀನು ದೊಡ್ಡವರ ಅಳಿಯನಾಗಿ ಲಂಡನ್ನಿಗೆ ಹೋಗುವುದಕ್ಕೆ ನನಗೆ ಒಪ್ಪಿಗೆ ಇಲ್ಲ. ಈ ಹುಡುಗಿಯನ್ನು ಮದುವೆಯಾದರೆ ಎಲ್ಲೆ ಲಾ ಓದುವ ಖರ್ಚನ್ನು ಹೇಗಾದರೂ ಮಾಡಿ ನಾನು ಕೂಡುತ್ತೇನೆ. ನನ್ನ ಮಾತು ಕೇಳದಿದ್ದರೆ ನೀನು ನನ್ನ ಮಗನೇ ಅಲ್ಲ ಆಲೋಚಿಸಿ ನಾಳೆ ಹೇಳು' ಎಂದು ಹೇಳಿ ಒಳಗೆ ಹೊರಟುಹೋದರು. ಸ್ವಲ್ಪ ಹೊತ್ತಿನ ಮೇಲೆ ಅಮ್ಮ ಊಟಕ್ಕೆ ಕರೆದಳು. ನನಗೆ ಸ್ವಲ್ಪವೂ ಬೇಡವೆಂದು ಹೇಳಿದೆ.

ಅಂದಿನ ರಾತ್ರಿ ಎಲ್ಲರೂ ಮಲಗಿದ ಮೇಲೆ ನಾನು ಹೊರಗೆ ಹೊರಟೆ. ನನ್ನ ಮನಸ್ಸು ಸಿಟ್ಟಿನಿಂದ ಚಂಚಲವಾಗಿತ್ತು ಆ ಹುಡುಗಿಯನ್ನು ಮದುವೆಯಾಗುವ ಇಚ್ಛೆ ನನಗೆ ಸ್ವಲ್ಪವೂ ಇರಲಿಲ್ಲ. ತಂದೆಯದಿರು ನಿಂತು ಹಾಗೆ ಹೇಳುವ ಧೈರ್ಯ ನನಗಿರಲಿಲ್ಲ. ಆದುದರಿಂದ ಅಂದಿನ ರಾತ್ರಿಯೇ ಮನೆ ಬಿಟ್ಟು ಹೊರಟೆ. ನಮ್ಮ ಹಳ್ಳಿಯಿಂದ ರೇಲ್ವೆ ಸ್ಟೇಶನಿಗೆ ನಾಲ್ಕು ಮೈಲಿ. ನಾನಲ್ಲಿಗೆ ಹೊರಡುವುದಕ್ಕೆ ಇನ್ನೂ ಹತ್ತು ನಿಮಿಷವಿತ್ತು. ಅಷ್ಟರೊಳಗೆ ಮದರಾಸಿಗೆ ಒಂದು ಟಿಕೆಟನ್ನು ತೆಗೆದುಕೊಂಡು ಒಂದು ಕಂಪಾರ್ಟಮೆಂಟಿನಲ್ಲಿ ಹೋಗಿ ಕುಳಿತ. ನಾನು ಕುಳಿತಲ್ಲಿ ಬೇರೆ ಯಾರೂ ಇರಲಿಲ್ಲ. ಮುಂದಿನ ಗತಿಯೇನೆಂದು ಆಲೋಚಿಸುತ್ತ ಕುಳಿತಿದ್ದಂತೆಯೇ ನಿದ್ರೆ ಬಂದುಬಿಟ್ಟಿತು. ಏನೋ ಶಬ್ದವಾದಂತಾಗಿ ನನಗೆ ನಿದ್ರಾಭಂಗವಾಯಿತು. ಕಣ್ಣು ತೆರೆದು ನೋಡಿದೆ. ಹುಣ್ಣಿಮೆಯ ಚಂದ್ರನು ಕಿಟಕಿಯ ಮೂಲಕ ಒಳಗೆ ಇಣಿಕಿ ನೋಡುತ್ತಿದ್ದನು. ಬೆಳದಿಂಗಳ ಪ್ರಕಾಶದಲ್ಲಿ ಇದಿರಿನ ಬೆಂಚಿನ ಮೇಲೆ ಇನ್ನೊಬ್ಬರು ಕುಳಿತದ್ದನ್ನು ನೋಡಿದೆ. ನಮ್ಮೂರಿನಿಂದ ಹೊರಡುವಾಗ ನಾನೊಬ್ಬನೇ ಇದ್ದೆ ಮಧ್ಯದಲ್ಲಿ ಯಾರೋ ಹತ್ತಿ ಕುಳಿತಿರಬೇಕಂದು ಯೋಚಿಸುತ್ತಾ ಮಲಗಿದಲ್ಲಿಂದ ಎದ್ದು ಕುಳಿತ. ನನ್ನಿದಿರು ಕುಳಿತಿದ್ದ ಮನುಷ್ಯ ಮುದುಕ, ಮುದುಕನಾದರೂ ಹುಡುಗರಂತ ಡ್ರೆಸ್ ಮಾಡಿಕೊಂಡಿದ್ದ. ನೋಡಿದ ಕೂಡಲೆ ಮುದುಕನೆಂದು ಗೊತ್ತಾಗುತ್ತಿರಲಿಲ್ಲ. ಅವನು ಹಣವಂತನಾಗಿರಬೇಕೆಂದು ಅವನ ವೇಷಭೂಷಣಗಳಿಂದ ವ್ಯಕ್ತವಾಗುತ್ತಿತ್ತು. ಅವನು ಐಶ್ವರ್ಯವಂತನಾಗಿರಬಹುದೆಂಬ ಭಾವನೆಯುಂಟಾದ ಕೂಡಲೇ ಅವನ ಪರಿಚಯ ಮಾಡಿಕೊಳ್ಳಬೇಕೆಂದು ಆಸೆಯಾಯಿತು. ಅವನು ನನ್ನನ್ನೇ ನೋಡುತ್ತಾ ಕುಳಿತಿದ್ದರೂ ಮಾತನಾಡುವಂತ ತೋರಲಿಲ್ಲ. ನಾನೇ ಮಾತನಾಡಬೇಕಾಗಿ ಬಂತು. 'ಸ್ವಾಮಿ ದಯಮಾಡಿ ಗಂಟೆ ಎಷ್ಟೆಂದು ಹೇಳುವಿರಾ?' ಎಂದು ಕೇಳಿದ. ಅವನು ಕೈಗಡಿಯಾರವನ್ನು ನೋಡಿ 'ಎರಡು ಗಂಟೆಗೆ ಹತ್ತು ನಿಮಿಷವಿದೆ'

ಎಂದು ಹೇಳಿದ. ಆ ಮುದುಕ ತುಂಬಾ ಮಾತುಗಾರ. ನಾನು ಮೊದಲು ಮಾತನಾಡಿದ ಮೇಲೆ ಅವನೂ ಮಾತಿಗೆ ಪ್ರಾರಂಭಿಸಿದ. ಅಂತೂ ಮದರಾಸಿಗೆ ತಲುಪುವಷ್ಟರಲ್ಲೇ ನಾವಿಬ್ಬರೂ ಸ್ನೇಹಿತರಾಗಿಬಿಟ್ಟಿದ್ದವು.

ಆ ಮುದುಕ ಒಬ್ಬ ರತ್ನ ವ್ಯಾಪಾರಿ. ನಾನು ಯಾರಂದು ಕೇಳಿದುದಕ್ಕೆ... ನಾನೊಬ್ಬ ಬಡವರ ಮಗನೆಂದೂ ಎಂ.ಎ. ಪಾಸಾಗಿದೆಯೆಂದೂ ಕೆಲಸ ಹುಡುಕುವುದರ ಸಲುವಾಗಿ ಮದರಾಸಿಗೆ ಹೊರಟಿದ್ದೇನೆಂದೂ ಹೇಳಿದೆ. ಕೆಲಸವೇನೂ ಸಿಕ್ಕದಿದ್ದರೆ ಬಂದು ತನ್ನನ್ನು ಕಾಣಬೇಕೆಂದು ಹೇಳಿದ. ಅಷ್ಟು ಹೊತ್ತಿನಲ್ಲೇ ಮದರಾಸನ್ನು ತಲುಪಿದ್ದವು. ನಾನು ಓದುವಾಗ ವಾಸವಾಗಿದ್ದ ವೈ.ಎಂ.ಸಿ.ಎ.ಗೆ ಹೋದ. ಲಾ ಕಲಿಯುತ್ತಿದ್ದ ನನ್ನ ಸ್ನೇಹಿತರನೇಕರು ಅಲ್ಲಿದ್ದರು. ಅವರೊಡನೆ ಮಾತನಾಡುತ್ತಾ ಅಂದು ಅಲ್ಲೇ ಉಳಿದೆನು.

ಮರುದಿನ ಕೆಲಸ ಹುಡುಕಲು ಪ್ರಾರಂಭಿಸಿದೆ ನನ್ನ ದುರದೃಷ್ಟದಿಂದ ಎಲ್ಲಿಯೂ ಕೆಲಸ ಸಿಗಲಿಲ್ಲ. ನಾನು ಮದರಾಸಿಗೆ ಬಂದು ಎರಡು ವಾರ ಕಳೆದಿದ್ದವು, ಕೈಯಲ್ಲಿದ್ದ ಕೆಲವು ರೂಪಾಯಿಗಳೂ ಖರ್ಚಾಗಿದವು. ಊಟಕ್ಕೆ ತೊಂದರೆಯಾಯಿತು. ಬೇರೇನೂ ದಿಕ್ಕು ತೋರದೆ ರೈಲಿನ ಸ್ನೇಹಿತನ ಮನೆಗೆ ಹೋದೆ. ದೇವರ ದಯೆಯಿಂದ ನಾನಲ್ಲಿಗೆ ಹೋಗುವ ಹೊತ್ತಿಗೆ ಆತನೂ ಮನೆಯಲ್ಲಿದ್ದನು. ನಾನು ಬಂದುದನ್ನು ನೋಡಿ ಅವನಿಗೆ ಬಲು ಸಂತೋಷವಾಯಿತು. ಮಾತುಕತೆಯಾದ ಬಳಿಕ ನನಗೆ ಕೆಲಸ ಸಿಗಲಿಲ್ಲವೆಂದವನಿಗೆ ಗೊತ್ತಾಯಿತು. ಅವನಿಗೊಬ್ಬ ಮಗಳೂ ದೂರ ಸಂಬಂಧದ ಸೂಸೆಯೂ ಇದ್ದರು. ಅವರಿಬ್ಬರಿಗೂ ಪಾಠ ಹೇಳಿಕೊಡಲು ಆಗುತ್ತದೆಯೇ ಎಂದು ನನ್ನನ್ನು ಕೇಳಿದ ಏನೂ ಕೆಲಸವಿಲ್ಲದ ನನಗೆ ಅದೇ ಬಲು ದೊಡ್ಡ ಕೆಲಸವೆಂದಾಯಿತು. ಹೇಳಿಕೊಡುವುದಾಗಿ ಒಪ್ಪಿಕೊಂಡೆ.

ಮರುದಿನ ಪಾಠ ಹೇಳುಲುಪಕ್ರಮಿಸಿದೆ. ಅವನ ಮಗಳಿಗೆ ಸುಮಾರು ಹದಿನಾಲ್ಕು ವರ್ಷ; ಸೊಸಗೆ ಹದಿನಾರು ವರ್ಷ. ಆತನ ಮಗಳು ಲಕ್ಷಣವಾಗಿದ್ದಳು. ಆದರ ಸೊಸೆ ಅತಿ ಚೆಲುವೆಯಾಗಿದ್ದಳು. ಪಾಠದಲ್ಲೂ ಹಾಗೆಯೇ. ಮಗಳು ತಕ್ಕಮಟ್ಟಿಗೆ ಕಲಿಯುತ್ತಿದ್ದಳು. ಸೊಸೆಗೋ ಒಂದು ಸಾರಿ ಹೇಳುವದೇ ತಡ, ಕಲಿತುಬಿಡುತ್ತಿದ್ದಳು ಮಗಳಿಗೆ ಮಾತು ಬಹಳ ಸೊಸೆ ಕೇಳಿದ ಪ್ರಶ್ನೆಗೆ ಉತ್ತರವಲ್ಲದ ಬೇರೆ ಮಾತನಾಡುತ್ತಿರಲಿಲ್ಲ ಮಗಳಿಗೆ ಸದಾ ನಗುಮುಖ, ಸೊಸೆಯ ಸುಂದರವಾದ ಮುಖವು ಯಾವುದೋ ಚಿಂತೆಯಿಂದ ಬಾಡಿದ್ದರೂ ಆ ಮುಖದಲ್ಲಿ ಅದೊಂದು ಬಗೆಯ... ಎಷ್ಟು ನೋಡಿದರೂ ಸಾಲದೆನ್ನುವ ತರದ... ಸೌಂದರ್ಯ ಮಗಳ ಹೆಸರು ಸೀತೆ, ಶಾಂತಿ ಎಂದು ಸೊಸೆಯ ಹೆಸರು.

ನಾನು ಪಾಠ ಹೇಳಲು ಮೊದಲು ಮಾಡಿ ಆರು ತಿಂಗಳುಗಳು ಸಂದಿದ್ದವು. ಹುಡುಗಿಯರಿಬ್ಬರೂ ಚೆನ್ನಾಗಿಯೇ ಪಾಠ ಕಲಿಯುತ್ತಿದ್ದರು. ಆದರೆ ಶಾಂತಿಯಷ್ಟು ಚುರುಕಾಗಿ ಸೀತೆ ಕಲಿಯುತ್ತಿರಲಿಲ್ಲ. ಶಾಂತಿಯ ಸೌಂದರ್ಯ, ಸೌಂದರ್ಯವನ್ನಾವರಿಸಿದ್ದ ದುಃಖ, ವಿದ್ಯೆಯಲ್ಲಿ ಅವಳಿಗಿದ್ದ ಅಭಿರುಚಿ, ಮಿತವಾದ ಮಾತು ಇವೆಲ್ಲವೂ ಸೇರಿ ನನ್ನ ಮನಸ್ಸನ್ನು ಅವಳಡೆಗೆ ಎಳೆಯತೊಡಗಿದವು. ಎಷ್ಟು ನೋಡಿದರೂ ಇನ್ನೊಮ್ಮೆ ನೋಡಬೇಕೆನಿಸುತ್ತಿತ್ತು. ಅವಳು ಹೈಕೋರ್ಟು ಜಡ್ಜ್ ತಂಗಿಯ ಮಗಳಾದರೂ ಅವಳ ತಂದೆ ತಾಯಿಯರು ಅಷ್ಟೇನೂ ಅನುಕೂಲಸ್ಥರಾಗಿರಲಿಲ್ಲ. ಮಗಳ ಮದುವೆಗೆ ಬಹಳ ಪ್ರಯತ್ನ ಮಾಡುತ್ತಿದ್ದರು. ಬಡತನದ ದೆಸೆಯಿಂದ ವರದಕ್ಷಿಣೆ ಕೊಡಲಾರದ ಇನ್ನೂ ಮಗಳಿಗೆ ಮದುವೆಯಾಗಿರಲಿಲ್ಲ. ನನಗಂತೂ ಯಾವಾಗಲೂ ಶಾಂತಿಯ ಜಪವೇ ಆಯಿತು. ಮದುವೆಯಾದರೆ ಲಂಡನ್ನಿಗೆ ಹೋಗಲಾಗುತ್ತಿರಲಿಲ್ಲ. ಆದುದರಿಂದ ಅವರನ್ನು

ಮರೆಯಲು ಪ್ರಯತ್ನಿಸತೊಡಗಿದ. ಎಷ್ಟಷ್ಟು ಪ್ರಯತ್ನಿಸಿದರೂ ಅವಳ ಸದ್ಗುಣಗಳು ನನ್ನ ಮನಸ್ಸನ್ನು ಅವಳೆಡಗೆ ಎಳೆಯತೊಡಗಿದವು. ನಾನು ಸೀತೆಯನ್ನು ಮದುವೆಯಾಗಬಹುದಿತ್ತು. ಎಷ್ಟೋ ಸಾರಿ ಅವಳ ತಂದೆಯು ನನ್ನನ್ನು ಹಾಸ್ಯಕ್ಕಾಗಿ ಅಳಿಯ ಎಂದು ಕೂಗುತ್ತಿದ್ದರು. ಅವರಿಗೆ ಸೀತೆಯೊಬ್ಬಳೇ ಮಗಳು. ನನಗವಳನ್ನು ಮದುವೆ ಮಾಡಿ ನನ್ನನ್ನು ಮನ ಅಳಿಯನನ್ನಾಗಿ ಮಾಡಿಕೊಳ್ಳಬೇಕೆಂಬ ಬಯಕೆಯೂ ಅವರಿಗಿತ್ತು. ನಾನವರ ಅಳಿಯನಾದರೆ ಸುಲಭವಾಗಿ ಲಂಡನ್ನಿಗೆ ಹೋಗಬಹುದಿತ್ತು. ಆದರೆ ಎಂದಿನಿಂದ ಶಾಂತಿಯನ್ನು ಪ್ರೀತಿಸತೊಡಗಿದನೋ ಅಂದಿನಿಂದ ಹಣಕ್ಕಾಗಿ ಪ್ರೇಮವನ್ನು ಬಲಿಗೊಡಬೇಡವೆಂದು ನನ್ನ ಮನಸ್ಸು ಹೇಳುತ್ತಲಿತ್ತು. ನನಗೆ ಇನ್ನೂ ಲಂಡನ್ನಿಗೆ ಹೋಗುವ ಆಸೆ ಕಮ್ಮಿಯಾಗಿರಲಿಲ್ಲ. ಆದುದರಿಂದ ಶಾಂತಿಯ ತಂದೆ ತಾಯಿಗಳೊಡನೆ ಭಿಕ್ಷೆಯನ್ನು ಬೇಡಲು ನಾನಿನ್ನೂ ಸಿದ್ಧನಾಗಿರಲಿಲ್ಲ.

**3**

ಒಂಬತ್ತು ಗಂಟೆಯಾಗಿತ್ತು. ನಾನು ಪಾಠದ ಕೋಣೆಯಲ್ಲಿ ಕುಳಿತು ನನ್ನ ಶಿಷ್ಯರಿಬ್ಬರನ್ನು, ಇದಿರು ನೋಡುತ್ತಿದ್ದೆ. ಸತ್ಯವನ್ನು ಹೇಳುವುದಾದರೆ ನಾನಿದಿರು ನೋಡುತ್ತಿದ್ದುದು ಶಾಂತಿಯನ್ನು, ಶಾಂತಿಯನ್ನು ಸ್ಮರಿಸುತ್ತಿರುವಾಗಲೇ ಬಾಗಿಲು ತೆರೆದ ಶಬ್ದವಾಯಿತು. ತೆರೆದ ಬಾಗಿಲಿನಿಂದ ಒಳಹೊಕ್ಕಳು ಸೀತೆ. ಯಾವಾಗಲೂ ಅವಳೊಡನೆಯೇ ಬರುತ್ತಿದ್ದ ಶಾಂತಿಯ ಸುಳಿವಿಲ್ಲ. ಅವಳನ್ನು ಕಾಣದೆ ಮನಸ್ಸಿಗೆ ವಿಷಾದವಾಯಿತು. ಒಮ್ಮೆಯೇ **'**ಶಾಂತಿ ಎಲ್ಲಿ**?'** ಎಂದು ಕೇಳಲು ಸ್ವಲ್ಪ ಸಂಕೋಚವಾಯುತು. ಆದರೆ ನಾನು ಕೇಳುವ ಮೊದಲು ಅವಳೇ **'**ನೋಡಿ ಮೇಷ್ಟ್ರು, ನಿನ್ನೆ ರಾತ್ರಿ ಶಾಂತಿಯ ತಂದೆ ಬಂದು ಅವಳನ್ನು ಊರಿಗೆ ಕರೆದುಕೊಂಡು ಹೋಗಿಬಿಟ್ಟರು. ಯಾಕೆಂತ ಗೊತ್ತಿದೆಯೇ ? ಮದುವಗೆ !' ಎಂದಳು.

ಆಗ ನನಗೆ ತಿಳಿಯಿತು, ಶಾಂತಿ ಇಲ್ಲದೆ ನಾನು ಬದುಕಲಾರನೆಂದು. ಮೊದಲೇ ಅವಳ ತಂದೆ ತಾಯಿಯರನ್ನು ಕೇಳದಿದ್ದುದಕ್ಕಾಗಿ ನನ್ನನ್ನು ನಾನೇ ಹಳಿದುಕೊಂಡೆ ಏನು ಮಾಡಿದರೆ ತಾನೆ ಈಗೇನು ಪ್ರಯೋಜನ ? ಹಣದಾಸೆಯಿಂದ ನನ್ನ ಜೀವನವನ್ನು ನಾನೇ ಮಣ್ಣು ಗೂಡಿಸಿಕೊಂಡ ಮೇಲೆ ಗೊತ್ತಾಯಿತು. ಶಾಂತಿಹೀನ ಪ್ರಪಂಚದಲ್ಲಿ ಜೀವಿಸುವದು ನನ್ನಿಂದ ಅಸಾಧ್ಯವೆಂದು. ಶಾಂತಿಯನ್ನು ಕಳೆದುಕೊಂಡು ಅಂದಿನ ದಿನವೆಲ್ಲ ಅಶಾಂತಿಯಲ್ಲಿ ಕಳೆದನು. ಮರುದಿನ ಪಾಠದ ಹೊತ್ತಿನಲ್ಲಿ ಸೀತೆ ನನಗೊಂದು ಕಾಗದ ತೋರಿಸಿದಳು. ಅಂದಿನ ಬೆಳಗಿನ ಹೊತ್ತು ಅಂಚೆಯ ಮೂಲಕ ಸೀತಗೆ ಶಾಂತಿಯಿಂದ ಬಂದ ಪತ್ರವದು.

**'**ಸ್ನೇಹಮಯಿ ಸೀತಾ,

ಸಂತೋಷದಲ್ಲಿರುವ ನಿನ್ನನ್ನು ಈ ಕಾಗದದ ಮೂಲಕ ದುಃಖಕ್ಕೀಡು ಮಾಡುತ್ತಿದ್ದೇನೆ; ಕ್ಷಮಿಸು. ನಿನಗೆ ನನ್ನ ವ್ಯಥೆಯನ್ನು ಬರೆಯುತ್ತಿರಲಿಲ್ಲ. ಆದರೆ ಈ ಪ್ರಪಂಚದಲ್ಲಿ ನನಗೆ ನಿನಗಿಂತಲೂ ಬೇರೆ ಯಾವ ಸ್ನೇಹಿತರೂ ಇಲ್ಲ. ನಿನ್ನೊಡನೆ ಹೇಳದೆ ನಾನು ಇಂದಿನವರೆಗೆ ಯಾವ ಕೆಲಸವನ್ನೂ ಮಾಡಿಲ್ಲ. ಈಗ ಮಾಡುವ ಈ ಕೆಲಸವನ್ನೂ ನಿನಗೆ ಹೇಳದೆ ಮಾಡುವುದಿಲ್ಲ.

ಅಣ್ಣ ನನ್ನ ಮದುವೆ ನಿಶ್ಚಯಮಾಡಿದ್ದಾರೆ. ಅಣ್ಣನಿಗಿಂತಲೂ ವಯಸ್ಸಾದ ವರ, ಮೂರನೆಯ ಮದುವೆಗೆ ನಾನು ವಧು, ನಾಲ್ಕು ಜನ ಮೊಮ್ಮಕ್ಕಳು ವರನಿಗೆ ಇರುವಂತೆ, ವರದಕ್ಷಿಣೆಯನ್ನು ಕೂಡಲು ಶಕ್ತಿಯಿಲ್ಲದುದಕ್ಕಾಗಿ

ನನಗೆ ಮೊದಲು ನಿಶ್ಚಿತವಾದ ವರನು ನನ್ನನ್ನು ಮದುವೆಯಾಗಲು ಒಪ್ಪುವದಿಲ್ಲವಂತೆ, ಸೀತಾ, ಆ ಮುದುಕನ ಮಡದಿಯಾಗಿ ಸತ್ತ ಹೆಣದಂತೆ ಜೀವನವನ್ನು ಕಳೆಯುವದಕ್ಕಿಂತಲೂ ನನಗೆ ಸಾವೇ ಲೇಸೆಂದು ತೋರುವುದು. ಲೇಸಾದ ಕಾರ್ಯವನ್ನೇಕೆ ಮಾಡಬಾರದು? ಆತ್ಮಹತ್ಯೆಯು ಪಾಪವೆಂದು ಜನರೆನ್ನುವರು. ಮುದುಕನ ಕೊರಳಿಗೆ ಚಿಕ್ಕ ಬಾಲಿಕೆ ಯನ್ನು ಕಟ್ಟುವುದು ಪುಣ್ಯವಾದರೆ ನನಗಾ ಪುಣ್ಯಕ್ಕಿಂತಲೂ ಆತ್ಮಹತ್ಯೆಯ ಪಾಪವೇ ಲೇಸೆಂದು ತೋರುವುದು. ನಿನಗೆ ಈ ಕಾಗದವು ತಲುಪುವಾಗ ನಿನ್ನ ನಿರ್ಭಾಗ್ಯ ಸಹೋದರಿಯು ಈ ಪ್ರಪಂಚದಿಂದ ಹೊರಟುಹೋಗಿರುವಳು. ಆತ್ಮ ಹತ್ಯೆಯನ್ನು ಮಾಡಿಕೊಂಡ ಪಾಪಿಯೆಂದು ನೀನೊಬ್ಬಳಾದರೂ ಜರಿಯುವದಿಲ್ಲವೆಂದು ನನಗೆ ಗೊತ್ತಿದೆ. ಕ್ಷಮಿಸು.

ನಿನ್ನ, **ಶಾಂತಿ**

ಶಾಂತಿಯ ಕಾಗದವನ್ನು ಓದಿದೆ. ಶಾಂತಿಯಂತಹ ಸ್ವರ್ಣ ಪುತ್ಥಳಿಯನ್ನು ಕೊಡುವುದೂ ಅಲ್ಲದೆ ಅವಳೊಡನೆ ವರದಕ್ಷಿಣೆಯನ್ನೂ ಕೊಡಬೇಕು ಎಂದು ಕೇಳಿದ ನೀಚನನ್ನು ಶಪಿಸಿದೆ. ಹಿಂದೊಂದು ಬಾರಿ ನಾನು ಬಡವರ ಹುಡುಗಿಯನ್ನು ಮದುವೆಯಾಗ ತಿರಸ್ಕರಿಸಿದ್ದುದು ದುಃಖಭರದಲ್ಲಿ ಮರೆತೇ ಹೋಗಿತ್ತು. ವಿಧಾತನನ್ನು ಹಳಿದೆ. ವಿಧಾತನನ್ನು ದೂರುವ ಬದಲು ನಾನೇ ನನ್ನ ದುರಾಸೆಯನ್ನು ಬಿಟ್ಟು ಶಾಂತಿಯನ್ನು ಮದುವೆಯಾಗಿದ್ದರೆ ಆ ಮುದ್ದು ಬಾಲೆಯು ಈಗ ಸುಖದಲ್ಲಿರುತ್ತಿದ್ದಳು. ನನ್ನ ತಪ್ಪಿಗಾಗಿ ನನ್ನನ್ನು ನಾನೇ ಜರಿದುಕೊಂಡೆ. ವರದಕ್ಷಿಣೆ ಎಂಬ ಪಿಶಾಚಿಯು ಎಷ್ಟಷ್ಟು ಸುಕುಮಾರಿಯರನ್ನು ಬಲಿ ತೆಗೆದುಕೊಳ್ಳುವದೋ ದೇವರೇ ಬಲ್ಲ. ಆದರೆ ನನ್ನ ಶಾಂತಿಯನ್ನು ಅದು ಬಲಿ ತೆಗೆದುಕೊಂಡ ಮೇಲೆ ನನಗದರ ನಿಜಸ್ವರೂಪವು ಗೊತ್ತಾಯಿತು.

**4**

ಅಂದಿನ ರಾತ್ರಿಯೇ ಊರಿಗೆ ಹೊರಟೆ. ಮರುದಿನ ಬೆಳಗಿನ ಹೊತ್ತಿನಲ್ಲಿ ಮನೆ ತಲುಪಿದೆ. ನಾನು ಹೋಗುವಾಗ ಅಮ್ಮ ಅಂಗಳ ಸಾರಿಸಿ ರಂಗವಲ್ಲಿ ಇಡುತ್ತಿದ್ದಳು. ನನ್ನ ತಂದೆಯೂ 'ವಿ' ಯೂ ಒಳಗಿದ್ದರು. ನನ್ನನ್ನು ನೋಡಿದೊಡನೆಯೇ ಅಮ್ಮ ಸಂತೋಷದಿಂದ ಮುಂದೆ ಬಂದು ಅಪ್ಪಿಕೊಂಡಳು. ಅಮ್ಮನೊಡನ ಮಾತುಕತೆಯಾಡಿ ಒಳಗೆ ಹೋದೆ. ನನ್ನ ತಂದ ನಡುಮನೆಯಲ್ಲಿ ಕುಳಿತಿದ್ದರು. ನನ್ನನ್ನು ನೋಡಿದರೂ ಮಾತಾಡಲಿಲ್ಲ. ನಾನು ಅಲ್ಲಿ ನಿಲ್ಲದೆ ನನ್ನ ಕೊಠಡಿಗೆ ಹೋದ ಅಲ್ಲಿ ವಿಜಯ ಒಂದು ಚಿತ್ರವನ್ನು ನೋಡುತ್ತ ನಿಂತಿದ್ದಳು. ನನ್ನನ್ನು ಕಂಡು ಆ ಚಿತ್ರವನ್ನು ಬಚ್ಚಿಟ್ಟಳು. ಆಶ್ಚರದಿಂದ ನೋಡುತ್ತಿದ್ದುದೇನು ವಿ?' ಎಂದೆ. ಆಗವಳು ತಾನು ನೋಡುತ್ತಿದ್ದ ಪೇಪರನ್ನು ನನ್ನಿದಿರು ಎಸೆದು... 'ನೋಡುತ್ತಿದ್ದುದು ನೀನು ಕೊಂದ ಹುಡುಗಿಯನ್ನು' ಎಂದಳು. ನನಗೆ ಬಹಳ ಆಶ್ಚರವಾಯಿತು. ಪತ್ರಿಕೆಯನ್ನು ಆತುರದಿಂದ ತೆಗೆದು ನೋಡಿದೆ...

ಶಾಂತಿಯ ಚಿತ್ರ... ಅದರ ಕೆಳಗಡೆ 'ವರದಕ್ಷಿಣೆಗೆ ಆಹುತಿ'.
ಶಾಂತಿಯ ನಾನು ಮೊದಲು ಕೈಬಿಟ್ಟ ಕನ್ಯೆ?
ಈಗ... ಏನು ಪ್ರಯೋಜನ !...

## ಬಿ.ಎ. ನಾಲ್ಕನೇ ಸೆಮಿಸ್ಟರ್‌ನ ಪಠ್ಯ ಪುಸ್ತಕ ಮಂಡಳಿ

1. **ಡಾ॥ ಎನ್. ಮಂಜುನಾಥ**
ಉಪ ಪ್ರಾಂಶುಪಾಲರು
ರಾಮಯ್ಯ ಇನ್ಸ್ಟಿಟ್ಯೂಟ್ ಆಫ್ ಬಿಸಿನೆಸ್ ಸ್ಟಡೀಸ್
ಎಂ.ಎಸ್.ಆರ್. ನಗರ, ಅಂಚೆ
ಬೆಂಗಳೂರು–560054

1. **ಡಾ॥ ಎನ್. ಉಷಾ ಕುಮಾರಿ**
ಪ್ರಾಂಶುಪಾಲರು
ಶ್ರೀಕೃಷ್ಣ ಪದವಿ ಕಾಲೇಜು
ಐ.ಟಿ.ಎ. ಬಡಾವಣೆ, ಬನಶಂಕರಿ 3ನೇ ಹಂತ
ಬೆಂಗಳೂರು–560085

3. **ಶ್ರೀಮತಿ ಉಮಾ ಬಿ.ಎಂ.**
ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಮಲ್ಲೇಶ್ವರಂ, ಬೆಂಗಳೂರು–560003